ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 28 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 102 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮತ್ತೊಮ್ಮೆ ತುಂಬಿದ ಕೆಆರ್‌ಎಸ್: ಕಾವೇರಿ ನದಿಗೆ 85 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

■ ಜಲಾಶಯದ ಒಳಹರಿವಿನ ಪ್ರಮಾಣವೂ ಹೆಚ್ಚಳ
■ ತುಂಬಿ ಹರಿಯುತ್ತಿರುವ ನದಿ ಕಾಣಲು ಮುಗಿಬಿದ್ದ ಪ್ರವಾಸಿಗರು

ಮೈಸೂರು,ಜು.27(ಎಂಟಿವೈ)– ಕೊಡಗು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಕೆಆರ್‌ಎಸ್ ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದ್ದು, ಜಲಾಶಯದ ನೀರಿನ ಮಟ್ಟ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಕಾವೇರಿ ನದಿಗೆ 85 ಸಾವಿರ ಕ್ಯೂಸೆಕ್ ನೀರು ಬಿಡಲಾಗುತ್ತಿದೆ.

ಕಳೆದ 3–4 ದಿನಗಳಿಂದ ಕೆಆರ್‌ಎಸ್ ಜಲಾಶಯದಿಂದ ಹೆಚ್ಚಿನ ಪ್ರಮಾಣದ ನೀರು ಕಾವೇರಿ ನದಿ ಒಡಲು ಸೇರಿ ಭೋರ್ಗರೆಯುತ್ತಿರುವುದರಿಂದ ಪ್ರವಾಸಿಗರು ನದಿ ನೋಡಲು ಮುಗಿ ಬೀಳುತ್ತಿದ್ದಾರೆ. ಕೊಡಗು ಜಿಲ್ಲೆಯ ಕಾವೇರಿ ನದಿಯ ಉಗಮಸ್ಥಾನ ಭಾಗಮಂಡಲದಲ್ಲಿ ವ್ಯಾಪಕ ಮಳೆ ಸುರಿಯುತ್ತಿರುವುದರಿಂದ ಕಾವೇರಿ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾಗಿದೆ. ಇದರಿಂದ ಕೆಆರ್‌ಎಸ್ ಜಲಾಶಯಕ್ಕೆ 52,856 ಕ್ಯೂಸೆಕ್ ನೀರು ಹರಿದು ಬರುತ್ತಿರುವುದರಿಂದ ಜಲಾಶಯದಲ್ಲಿ ಗರಿಷ್ಟ ಪ್ರಮಾಣದ ನೀರು ಸಂಗ್ರಹವಾಗಿದೆ. 124.80 ಅಡಿ ಎತ್ತರ ಜಲಾಶಯದಲ್ಲಿ ಜು.26ರಂದು 124.04 ಅಡಿ ನೀರು ಸಂಗ್ರಹವಾಗಿತ್ತು. ಇದರಿಂದ ಜಲಾಶಯದ ಸುರಕ್ಷತೆಯಿಂದಾಗಿ ಹಾಗೂ ಒಳಹರಿವಿನ ಪ್ರಮಾಣದಲ್ಲಿ ಹೆಚ್ಚಳವಾಗುವ ಸಾಧ್ಯತೆ ಮನಗಂಡು ಭಾನುವಾರ ಬೆಳಗ್ಗಿನಿಂದಲೇ ಜಲಾಶಯದಿಂದ ಕಾವೇರಿ ನದಿಗೆ 85 ಸಾವಿರ ಕ್ಯೂಸೆಕ್ ನೀರು ಬಿಡಲಾಗುತ್ತಿದೆ.

ಜಲಾಶಯದ 14 ಗೇಟ್‌ಗಳಿಂದ ನದಿಗೆ ಅಪಾರ ಪ್ರಮಾಣದ ನೀರು ಬಿಡುತ್ತಿರುವುದರಿಂದ ಕೆಆರ್‌ಎಸ್ ಬಳಿ ಉಕ್ಕಿ ಹರಿಯುತ್ತಿರುವ ನದಿಯ ಸೊಬಗು ನೋಡಲು ಪ್ರವಾಸಿಗರ ದಂಡೇ ಹರಿದು ಬರುತ್ತಿದೆ. ಸುರಕ್ಷತೆಯ ದೃಷ್ಟಿಯಿಂದ ಜಲಾಶಯದ ಸಮೀಪ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ. ಅಲ್ಲದೆ, ರಭಸವಾಗಿ ಹರಿಯುವ ನೀರನ್ನು ನೋಡಲು ಅಪಾಯಕಾರಿ ಪ್ರದೇಶದತ್ತ ಸುಳಿಯದಂತೆ ಕಟ್ಟೆಚ್ಚರ ವಹಿಸಲಾಗಿದೆ. ಇದರಿಂದ ಕೆಆರ್‌ಎಸ್‌ನ ಮುಖ್ಯ ರಸ್ತೆಯಿಂದ ಪ್ರವಾಸಿಗರು ಉಕ್ಕಿ ಹರಿಯುತ್ತಿರುವ ನದಿಯನ್ನು ಕಣ್ತುಂಬಿಕೊಳ್ಳಲು ಮುಗಿ ಬೀಳುತ್ತಿದ್ದಾರೆ. ಇಂದು ವಾರಾಂತ್ಯ ರಜೆ ದಿನವಾದ ಹಿನ್ನೆಲೆಯಲ್ಲಿ ಕೆಆರ್‌ಎಸ್ ಉದ್ಯಾನವನ ವೀಕ್ಷಣೆಗೆಂದು ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿದ್ದ ನೂರಾರು ಪ್ರವಾಸಿಗರು ▶ 9ನೇ ಪುಟಕ್ಕೆ



ಕೆಆರ್‌ಎಸ್ ಜಲಾಶಯದಿಂದ 85 ಸಾವಿರ ಕ್ಯೂಸೆಕ್ ನೀರು ಹೊರ ಬಿಟ್ಟಿರುವುದು. /ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್.

ಮೈಸೂರಲ್ಲಿ ಭಾರಿ ಪ್ರಮಾಣದ ಡ್ರಗ್ಸ್ ಪತ್ತೆ ಪ್ರಕರಣ

ಓರ್ವ ಸ್ಥಳೀಯ, ಮೂವರು ದಂಧೆಕೋರರ ಬಂಧನ

● ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ಅಮಾನತು ● ಡ್ರಗ್ಸ್ ಮಾಫಿಯಾಗೆ ಶೆಡ್ ಬಾಡಿಗೆಗೆ ಕೊಟ್ಟಿದ್ದ ಅಜ್ಮಲ್ ● 15 ಕೆಜಿ ಎಂಡಿಎಂಎ, 1 ಬ್ಯಾರಲ್ ದ್ರವ ಮಾದಕ ವಶ ● ಅಂತಾರಾಷ್ಟ್ರೀಯ ಡ್ರಗ್ಸ್ ಮಾಫಿಯಾದವರು ಮೈಸೂರನ್ನು ಶೆಲ್ಟರ್ ಮಾಡಿಕೊಂಡಿದ್ದರೆ?



ಭಾರಿ ಪ್ರಮಾಣದ ಡ್ರಗ್ಸ್ ದೊರೆತ ಮೈಸೂರು ರಿಂಗ್‌ರಸ್ತೆಯ ಶೆಡ್.

ಮೈಸೂರು, ಜು.27– ಸಾಂಸ್ಕೃತಿಕ ನಗರಿ ಮೈಸೂರನ್ನು ಅಂತಾರಾಷ್ಟ್ರೀಯ ಡ್ರಗ್ಸ್ ಮಾಫಿಯಾ ಸುರಕ್ಷಿತ ತಾಣವನ್ನಾಗಿ ಮಾಡಿಕೊಂಡಿತ್ತು ಎಂದು ಮೂಲಗಳು ತಿಳಿಸಿವೆ.

ಮಹಾರಾಷ್ಟ್ರ ಪೊಲೀಸರು ಮೈಸೂರು ನಗರ ಪೊಲೀಸರ ಸಹಕಾರದೊಂದಿಗೆ ಶನಿವಾರ ಸಂಜೆ ನರಸಿಂಹರಾಜ ಪೊಲೀಸ್ ಠಾಣಾ ವ್ಯಾಪ್ತಿಯ ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ಗ್ಯಾರೇಜ್‌ವೊಂದರಲ್ಲಿ ಅಪಾರ ಪ್ರಮಾಣದ ಎಂಡಿಎಂಎ ಡ್ರಗ್ಸ್ ವಶಪಡಿಸಿಕೊಂಡು, ಓರ್ವ ಸ್ಥಳೀಯ ಸೇರಿದಂತೆ ನಾಲ್ವರನ್ನು ಬಂಧಿಸಿದ್ದರು.

ಮೈಸೂರಲ್ಲಿ ಭಾರಿ ಪ್ರಮಾಣದ ಡ್ರಗ್ಸ್ ಪತ್ತೆಯಾದ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ನರಸಿಂಹರಾಜ ಠಾಣೆಯ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ ಅವರನ್ನು ಅಮಾನತುಪಡಿಸಿದ್ದು, ಸಿಸಿಬಿ ಇನ್ಸ್‌ಪೆಕ್ಟರ್ ಶಬೀರ್ ಹುಸೇನ್ ಅವರಿಗೆ ಎನ್.ಆರ್.ಠಾಣೆಯ ಉಸ್ತುವಾರಿಯನ್ನು ಹೆಚ್ಚುವರಿಯಾಗಿ ನೀಡಿ, ಆದೇಶ ಹೊರಡಿಸಿದ್ದಾರೆ.

ವಿವರ: ಡ್ರಗ್ಸ್ ದಂಧೆಕೋರರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ಮೈಸೂರು ಅದೆಷ್ಟು ಸುರಕ್ಷಿತ?; ವಿಚಾರವಾದಿಗಳು, ನಿವೃತ್ತರ ಆತಂಕ

ಮೈಸೂರು, ಜು.27– ಅತ್ಯಾಕರ್ಷಣೀಯ ಪ್ರವಾಸ ಕೇಂದ್ರ, ನಿವೃತ್ತರ ಸ್ವರ್ಗ ಎಂದೆಲ್ಲಾ ಪ್ರಸಿದ್ಧಿಯಾಗಿರುವ ಮೈಸೂರು, ಆಗಂತುಕರ ದುಷ್ಕೃತ್ಯಗಳಿಗೆ ಸುರಕ್ಷಿತ ತಾಣವಾಗುತ್ತಿದೆಯೇ ಎಂಬ ಆತಂಕ ಸೃಷ್ಟಿಯಾಗಿದೆ.

ಯಾವಾಗಲೂ ಜನಸಂಚಾರವಿರುವ ರಿಂಗ್ ರಸ್ತೆಯಲ್ಲೇ ಕೋಟ್ಯಾಂತರ ಮೌಲ್ಯದ ಅಪಾರ ಪ್ರಮಾಣದ ಎಂಡಿಎಂಎ ಡ್ರಗ್ಸ್ ಪತ್ತೆಯಾಗಿರುವುದು ಈ ಆತಂಕಕ್ಕೆ ಕಾರಣವಾಗಿದೆ. ಮಹಾರಾಷ್ಟ್ರ ಪೊಲೀಸರ ದಾಳಿ ವೇಳೆ ಈ ಅಪಾಯಕಾರಿ ಚಟುವಟಿಕೆ ಪತ್ತೆಯಾಗಿದ್ದು, ಈ ಬಗ್ಗೆ ಸ್ಥಳೀಯ ಪೊಲೀಸರಿಗೆ ಮಾಹಿತಿ ಇರಲಿಲ್ಲ ಎನ್ನುವುದು ಕಳವಳಕಾರಿಯಾಗಿದೆ. ಗಾಂಜಾ ಸಾಗಾಟ ಹಾಗೂ ಮಾರಾಟ ಮಾಡುವವರನ್ನು ಆಗಾಗ ಬಂಧಿಸುವ ಪೊಲೀಸರಿಗೆ ಈ ದುಷ್ಕೃತ್ಯದ ಬಗ್ಗೆ ಏಕೆ ತಿಳಿಯಲಿಲ್ಲ, ಹೆದ್ದಾರಿ ಗಸ್ತು ಹಾಗೂ ಗುಪ್ತಚರ ಪೊಲೀಸರಿಗೂ ▶ 9ನೇ ಪುಟಕ್ಕೆ

ರಾಜ್ಯ ಪೊಲೀಸರೂ ತನಿಖೆ ನಡೆಸಲಿದ್ದಾರೆ

ದಾವಣಗೆರೆ, ಜು. 27– ಮೈಸೂರಿನಲ್ಲಿ ಭಾರಿ ಪ್ರಮಾಣದ ಎಂಡಿಎಂಎ ಡ್ರಗ್ಸ್ ಪತ್ತೆಯಾಗಿರುವ ಬಗ್ಗೆ ಗೃಹ ಸಚಿವ



ಡಾ.ಜಿ.ಪರಮೇಶ್ವರ್ ದಾವಣಗೆರೆಯಲ್ಲಿ ಪ್ರತಿಕ್ರಿಯಿಸಿದ್ದು, ಈ ಘಟನೆ ನಮ್ಮ ರಾಜ್ಯದಲ್ಲೇ ನಡೆದಿರುವುದು ನಿಜವಾಗಿಯೂ ಆತಂಕಕಾರಿ. ಇದರ ಬಗ್ಗೆ ರಾಜ್ಯದ ಪೊಲೀಸರೂ ತನಿಖೆ ನಡೆಸಲಿದ್ದಾರೆ ಎಂದು ಹೇಳಿದರು.

ಮುಂಬೈ ಪೊಲೀಸರು ಒಬ್ಬ ಆರೋಪಿಯನ್ನು ಬಂಧಿಸಿದ ಸಂದರ್ಭದಲ್ಲಿ ಲಭಿಸಿದ ಖಚಿತ ಮಾಹಿತಿಯ ಆಧಾರದ ಮೇಲೆ ಮೈಸೂರಿನ ರಿಂಗ್ ರಸ್ತೆಯ ಬಳಿಯ ಡ್ರಗ್ಸ್ ತಯಾರಿಕಾ ಘಟಕದ ಮೇಲೆ ದಾಳಿ ನಡೆಸಿದ್ದಾರೆ. ಕರ್ನಾಟಕ ಪೊಲೀಸರ ಸಹಕಾರದೊಂದಿಗೆ ▶ 9ನೇ ಪುಟಕ್ಕೆ

ಕಳೆದ ಏಪ್ರಿಲ್‌ನಲ್ಲಿ ಮಹಾರಾಷ್ಟ್ರ ಪೊಲೀಸರು ಏಳು ಮಂದಿಯನ್ನು ಬಂಧಿಸಿ, ಅಪಾರ ಪ್ರಮಾಣದ ಎಂಡಿಎಂಎ ಡ್ರಗ್ಸ್ ವಶಪಡಿಸಿಕೊಂಡಿದ್ದರು. ಆ ಸಂದರ್ಭದಲ್ಲಿ ಕೆಲವರು ಪೊಲೀಸರಿಗೆ ಸಿಗದೆ ತಲೆಮರೆಸಿಕೊಂಡಿದ್ದರು.

ಅವರಲ್ಲಿ ಓರ್ವ ಕಳೆದ ಮೂರು ದಿನದ ಹಿಂದೆ ಮಹಾರಾಷ್ಟ್ರ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ. ಆತ ಈವರೆವಿಗೂ ಎಲ್ಲಿ ತಲೆಮರೆಸಿಕೊಂಡಿದ್ದ ಹಾಗೂ ಎಲ್ಲಿ ವ್ಯವಹಾರ ಮಾಡುತ್ತಿದ್ದ ಎಂಬುದರ ಬಗ್ಗೆ ಸುದೀರ್ಘವಾಗಿ ವಿಚಾರಣೆಗೊಳಪಡಿಸಿದ ವೇಳೆ ಆತ ಈವರೆವಿಗೂ ಮೈಸೂರಿನಲ್ಲೇ ಇದ್ದನೆಂಬುದು ಮಾತ್ರವಲ್ಲದೆ, ಮೈಸೂರಿನಲ್ಲಿ ಆತನ ಮೂವರು ಸಹಚರರು ಶೆಲ್ಟರ್ ಪಡೆದುಕೊಂಡಿದ್ದು, ಇಲ್ಲಿಂದಲೇ ಬೆಂಗಳೂರು ಸೇರಿದಂತೆ ಕೆಲವು ರಾಜ್ಯಗಳ ನಗರಗಳಿಗೆ ಡ್ರಗ್ಸ್ ಸರಬರಾಜು ಮಾಡುತ್ತಿದ್ದರು ಎಂಬ ವಿವರ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಪೊಲೀಸರು ಮೈಸೂರಿಗೆ ಆಗಮಿಸಿ, ತಮ್ಮ ವಶದಲ್ಲಿದ್ದ ಆರೋಪಿ ಮೂಲಕ ಸ್ಥಳವನ್ನು ಪತ್ತೆಹಚ್ಚಿ, ಮೈಸೂರು ಪೊಲೀಸರ ಸಹಕಾರದೊಂದಿಗೆ ಶನಿವಾರ ಸಂಜೆ ಕಾವೇರಿ ನಗರ ರೈಲ್ವೆ ಕೆಳಸೇತುವೆ ದಾಟಿದ ನಂತರ ಸಿಗುವ ▶ 9ನೇ ಪುಟಕ್ಕೆ

ಕಾಂಗ್ರೆಸ್ ಫ್ಲೆಕ್ಸ್ ಕಟ್ಟಲು 1 ಗಂಟೆ ಎಕ್ಸ್‌ಪ್ರೆಸ್ ವೇ ಸಂಚಾರ ಬಂದ್

● ನಿಡಘಟ್ಟದಿಂದ ಚನ್ನಪಟ್ಟಣದವರೆಗೆ ಹೈವೇ ಸಂಚಾರ ಬಂದ್ ಮಾಡಿದ ಪೊಲೀಸರು
● ಭಾನುವಾರದ ಸಂಚಾರ ದಟ್ಟಣೆಯಿಂದ ಸರ್ವೀಸ್ ರಸ್ತೆಯಲ್ಲಿ ಪ್ರಯಾಣಿಕರ ಪರದಾಟ

ಮಂಡ್ಯ, ಜು.27– ಸೋಮವಾರ ಮದ್ದೂರಿನಲ್ಲಿ ರಾಜ್ಯ ಸರ್ಕಾರದ ವತಿಯಿಂದ ನಡೆಯಲಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ, ಶಂಕುಸ್ಥಾಪನೆ ಕಾರ್ಯಕ್ರಮದ ನಿಮಿತ್ತ ಕಾಂಗ್ರೆಸ್ ಪಕ್ಷದ ಫ್ಲೆಕ್ಸ್‌ಗಳನ್ನು ಕಟ್ಟಲು 1 ಗಂಟೆಗಳ ಕಾಲ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ ಬಂದ್ ಮಾಡಿಸಿದ ಘಟನೆ ಭಾನುವಾರ ಬೆಳಿಗ್ಗೆ ನಡೆದಿದೆ.

ಬೆಳಿಗ್ಗೆ 8 ಗಂಟೆಯಿಂದ 8.50ರವರೆಗೆ ರಸ್ತೆ ಸಂಚಾರ ಬಂದ್ ಮಾಡಿಸಿ, ಸ್ವತಃ ಪೊಲೀಸರೇ ನಿಂತು ಕಾಂಗ್ರೆಸ್ ಕಾರ್ಯಕರ್ತರಿಗೆ ಫ್ಲೆಕ್ಸ್ ಕಟ್ಟಲು ಅನುವು ಮಾಡಿಕೊಡುತ್ತಿದ್ದ ದೃಶ್ಯ ಕಂಡುಬಂತು. ಎಕ್ಸ್‌ಪ್ರೆಸ್ ವೇನ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ನಿಡಘಟ್ಟ ಎಕ್ಸಿಟ್‌ನಿಂದ ರಾಮನಗರ ಜಿಲ್ಲೆಯ ಚನ್ನಪಟ್ಟಣದ ಎಂಟ್ರಿವರೆಗೆ ಎರಡು ಬದಿಯ ರಸ್ತೆಯನ್ನು ಒಂದು ಗಂಟೆಗಳ ಕಾಲ ಬಂದ್ ಮಾಡಲಾಗಿತ್ತು.

ಭಾನುವಾರವಾಗಿದ್ದರಿಂದ ಮೈಸೂರು ಮಾರ್ಗವಾಗಿ ಚನ್ನಪಟ್ಟಣ, ರಾಮನಗರ, ಬೆಂಗಳೂರು ನಗರಕ್ಕೆ ತೆರಳುವವರು ಅಥವಾ ಬೆಂಗಳೂರಿನಿಂದ ಚನ್ನಪಟ್ಟಣ, ಮಂಡ್ಯ, ಮೈಸೂರು ಸೇರಿದಂತೆ ಇನ್ನಿತರೆ ಕಡೆಗೆ ತೆರಳುವ ವಾಹನ ಸವಾರರು, ಪ್ರವಾಸಿಗರು, ಸಾರಿಗೆ ▶ 11ನೇ ಪುಟಕ್ಕೆ



ಪೊಲೀಸರ ಸಮ್ಮುಖದಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಬಂದ್ ಮಾಡಿ ಶಾಸಕ ಉದಯ್‌ರ ಫ್ಲೆಕ್ಸ್ ಅಳವಡಿಸುತ್ತಿರುವುದು.

ರಸಗೊಬ್ಬರ ಅಭಾವ: ಇಂದು ರಾಜ್ಯಾದ್ಯಂತ ಬಿಜೆಪಿ ಪ್ರತಿಭಟನೆ

ಬೆಂಗಳೂರು, ಜು.27– ರಾಜ್ಯದಲ್ಲಿ ತಲೆದೋರಿರುವ ರಸಗೊಬ್ಬರ ಅಭಾವ ವಿರುದ್ಧ ಸೋಮವಾರ (ಜು.28) ರಾಜ್ಯಾದ್ಯಂತ ಬಿಜೆಪಿ ಹೋರಾಟ ಹಮ್ಮಿಕೊಂಡಿದೆ. ಬೆಂಗಳೂರಿನಲ್ಲಿ ಮಾತಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಹೋರಾಟ ಮಾಡುವುದಾಗಿ ಘೋಷಿಸಿದರು.

ಬೆಂಗಳೂರು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ರೈತ ಮೋರ್ಚಾ ವತಿಯಿಂದ ಹೋರಾಟ ಹಮ್ಮಿಕೊಳ್ಳಲಾಗಿದೆ. ಯಡಿಯೂರಪ್ಪ ಸಿಎಂ ಆಗಿದ್ದಾಗ ರಸಗೊಬ್ಬರ ದಾಸ್ತಾನು ಇಡುತ್ತಿದ್ದರು, ಅದಕ್ಕೆ ಅನುದಾನವೂ ಇಡುತ್ತಿದ್ದರು. ಈ ಸರ್ಕಾರ ಕಾಪು ದಾಸ್ತಾನು ಅನುದಾನಕ್ಕೂ ಕಡಿತ ಮಾಡಿದೆ. ಸಾವಿರ ಕೋಟಿ ದಾಸ್ತಾನು ಅನುದಾನ 400 ಕೋಟಿಗೆ ಇಳಿಸಿದೆ ಎಂದು ಅಸಮಾಧಾನ ಹೊರಹಾಕಿದರು.

ಕೇಂದ್ರದಿಂದ ಬಂದ 8 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಏನಾಯ್ತು? ರಾಜ್ಯದಲ್ಲಿ ರಸಗೊಬ್ಬರ ಕಳ್ಳ ದಂಧೆ ನಡೆಯುತ್ತಿದೆ. ರಸಗೊಬ್ಬರ ಅಭಾವ, ನಕಲಿ ಕೃಷಿ ಬೀಜಗಳಿಗೆ ಸರ್ಕಾರವೇ ಹೊಣೆ. ನಕಲಿ ಬಿತ್ತನೆ ಬೀಜ, ರಸಗೊಬ್ಬರ ಅಭಾವ, ಯಾರು ಕಳ್ಳಸಾಗಣೆ ಮಾಡ್ತಿದ್ದಾರೆ? ಇದನ್ನು ಪತ್ತೆ ▶ 11ನೇ ಪುಟಕ್ಕೆ

ಕೆಬಿಜಿಯವರಿಗೆ ಹಿರಿಯ ವಕೀಲ, ಪತ್ರಕರ್ತ ಲಕ್ಷ್ಮಣ್ ಸಂತಾಪ


ಜೆ.ಎನ್.ಲಕ್ಷ್ಮಣ್ ಅವರನ್ನು ಕೆಬಿಜಿ ಅಭಿನಂದಿಸಿದ್ದ ಸಂದರ್ಭ.

ಮೈಸೂರು, ಜು.27– ಮಾರ್ಗದರ್ಶಕರಾಗಿದ್ದ ಡಾ.ಕೆ.ಬಿ.ಗಣಪತಿ ಅವರ ಅಗಲಿಕೆಯಿಂದ ಪತ್ರಿಕೋದ್ಯಮ ಕ್ಷೇತ್ರ ಬಡವಾಗಿದೆ ಎಂದು ಹಿರಿಯ ವಕೀಲ ಹಾಗೂ ಪತ್ರಕರ್ತ ಜೆ.ಎನ್.ಲಕ್ಷ್ಮಣ್ ನುಡಿದಿದ್ದಾರೆ.

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾಗಿದ್ದ ಡಾ.ಕೆ.ಬಿ.ಗಣಪತಿ ಅವರ ಹಠಾತ್ ನಿಧನ, ನನಗೆ ಆಘಾತ ತಂದಿದೆ. ಒಬ್ಬ ಧೀಮಂತ ಹಾಗೂ ಸಮಾಜದ ಚಿಂತಕರಾಗಿದ್ದ ಕೆಬಿಜಿ ಇನ್ನಿಲ್ಲ ಎನ್ನುವುದನ್ನು ನಂಬಲು ಕಷ್ಟವಾಗುತ್ತಿದೆ. ಎರಡು ಪತ್ರಿಕೆಗಳ ಸಾರಥಿಯಾಗಿ 47 ವರ್ಷಗಳ ಸುದೀರ್ಘ ಸೇವೆ ಸಲ್ಲಿಸುವುದರೊಂದಿಗೆ ರಾಜ್ಯದ ಪತ್ರಿಕಾರಂಗದಲ್ಲಿ ವಿಶೇಷ ಛಾಪು ಮೂಡಿಸಿದ್ದರು. ಅವರ ಹರಿತವಾದ ಲೇಖನಿಯಿಂದ ಮೂಡಿಬರುತ್ತಿದ್ದ 'ಭೂಮಂತ್ರೆ' ಹಾಗೂ 'ಅಬ್ರಕಡಬ್ರ' ಅಂಕಣಗಳು ಸಮಾಜಕ್ಕೆ ಮಾರ್ಗದರ್ಶನ ನೀಡುವುದರ ಜೊತೆಗೆ ಸಮಾಜಘಾತುಕರಿಗೆ ಸಿಂಹಸ್ವಪ್ನವಾಗಿದ್ದವು. ಕೆಬಿಜಿ ಹಾಕಿಕೊಟ್ಟಿರುವ ಹಾದಿಯಲ್ಲಿ ಈ ಎರಡೂ ಪತ್ರಿಕೆಗಳು ಮತ್ತಷ್ಟು ಉನ್ನತ ಸ್ಥಾನಕ್ಕೇರಲಿ. ಕೆಬಿಜಿ ಅಗಲಿಕೆ ನೋವು ಸಹಿಸುವ ಶಕ್ತಿಯನ್ನು ದೇವರು ಕುಟುಂಬದವರಿಗೆ ಕರುಣಿಸಲೆಂದು ಪ್ರಾರ್ಥಿಸುತ್ತೇನೆ ಎಂದು ತಿಳಿಸಿದ್ದಾರೆ.

ಆ.1ರೊಳಗೆ ಒಳಮೀಸಲಾತಿ ಜಾರಿಯಾಗದಿದ್ದರೆ

ರಾಜ್ಯಾದ್ಯಂತ ಉಗ್ರ ಹೋರಾಟ

ಸಾಮಾಜಿಕ ನ್ಯಾಯ ಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಘೋಷಣೆ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಮಾತನಾಡಿದರು.

ಮೈಸೂರು, ಜು.27(ಎಂಟಿವೈ)– ರಾಜ್ಯ ಸರ್ಕಾರ ಆ.1ರೊಳಗೆ ಒಳ ಮೀಸಲಾತಿ ಜಾರಿಗೊಳಿಸದಿದ್ದರೆ ರಾಜ್ಯದಾದ್ಯಂತ ಉಗ್ರ ಹೋರಾಟ ಆರಂಭಿಸುವುದಾಗಿ ಸಾಮಾಜಿಕ ನ್ಯಾಯ ಪರ ವಕೀಲರ ವೇದಿಕೆ ಅಧ್ಯಕ್ಷರೂ ಆದ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಘೋಷಿಸಿದರು

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾದಿಗ ಸಮುದಾಯಕ್ಕೆ ಒಳಮೀಸಲಾತಿ ನೀಡುವಂತೆ ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿ ಆ.1ಕ್ಕೆ ಒಂದು ವರ್ಷವಾಗಲಿದೆ. ಆದರೂ ಒಳ ಮೀಸಲಾತಿ ಜಾರಿಗೆ ರಾಜ್ಯ ಸರ್ಕಾರ ಮುಂದಾಗಿಲ್ಲ. ಒಳ ಮೀಸಲಾತಿ ಜಾರಿ ಮಾಡದೇ ಕೇವಲ ಓಟ್ ಬ್ಯಾಂಕ್‌ಗಾಗಿ ಪರಿಶಿಷ್ಟ ಸಮುದಾಯದ ಓಲೈಕೆಗೆ ಕಾಂಗ್ರೆಸ್ ಸರ್ಕಾರ ಮುಂದಾಗಿದೆ. ಮಾದಿಗ ಸಮುದಾಯದ ನಂಬರ್ ಒನ್ ವೈರಿ ರಾಜ್ಯ ಕಾಂಗ್ರೆಸ್ ಸರ್ಕಾರ ಎಂದು ಆರೋಪಿಸಿದರು.

ಒಳಮೀಸಲಾತಿ ಜಾರಿಗಾಗಿ ಸಮೀಕ್ಷೆ ಮಾಡಲು ನೇಮಿಸಿರುವ ನಾಗಮೋಹನ್ ದಾಸ್ ನೇತೃತ್ವದ ಸಮಿತಿ ಪದೇ ಪದೆ ದಿನಾಂಕವನ್ನು ವಿಸ್ತರಿಸುತ್ತಿದೆ. ಆಯೋಗವೂ ಮಾದಿಗ ಸಮುದಾಯದ ವಿರೋಧಿಯಾಗಿದೆ. ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾದಿಗ ಸಮುದಾಯದ ಮೇಲೆ ದೌರ್ಜನ್ಯ ಎಸಗಿದ್ದಾರೆ. ಪರಸ್ಪರ ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ. ಮಾದಿಗ ಸಮುದಾಯ ಪರಿಶಿಷ್ಟ ಸಮುದಾಯದಲ್ಲೇ ಅತಿ ಹೆಚ್ಚು ತುಳಿತಕ್ಕೊಳಗಾದ ಸಮುದಾಯವಾಗಿದೆ ಎಂದು ಕಿಡಿಕಾರಿದರು.

ಮಾದಿಗ ಒಳ ಮೀಸಲಾತಿ ಹೋರಾಟಗಾರ ಭಾಸ್ಕರ್ ಪ್ರಸಾದ್ ಮಾತನಾಡಿ, ಒಳ ಮೀಸಲಾತಿ ಹೋರಾಟದ ಬಗ್ಗೆ ಮಾತನಾಡುವ ನೈತಿಕತೆ ಮೂರು ಪಕ್ಷಗಳಿಗೂ ಇಲ್ಲ. ಅಧಿಕಾರದಲ್ಲಿದ್ದಾಗ ಮೂರು ಪಕ್ಷಗಳು ಒಳಮೀಸಲಾತಿ ವಿರೋಧಿಯಂತೆ ವರ್ತಿಸಿವೆ. ಮಾದಿಗ ಸಮುದಾಯವನ್ನು ವಂಚಿಸಿವೆ. ಹೀಗಾಗಿ ಯಾವ ಪಕ್ಷಕ್ಕೂ ನೈತಿಕತೆ ಇಲ್ಲ ಎಂದರು.

ಮಾದಿಗ ಸಮುದಾಯದ ಹೋರಾಟದ ಬಗ್ಗೆ ಮಾತನಾಡಲು ಸಚಿವ ಕೆ.ಹೆಚ್.ಮುನಿಯಪ್ಪ, ಮಾಜಿ ಸಚಿವ ಹೆಚ್.ಆಂಜನೇಯ ಅವರಿಗೆ ಯಾವುದೇ ನೈತಿಕತೆ ಇಲ್ಲ. ಒಂದು ತಿಂಗಳೊಳಗೆ ಒಳ ಮೀಸಲಾತಿ ಜಾರಿ ಮಾಡಿಸುವೆ ಎಂದು ಅಧಿಕಾರದಲ್ಲಿ ಇಲ್ಲದ ಆಂಜನೇಯ ಹೇಳಿದ್ದಾರೆ. ಅವರು ನೀಡುವ ಹೇಳಿಕೆಗೆ ಯಾವುದೇ ಬೆಲೆಯಿಲ್ಲ. ಜು.31ರೊಳಗೆ ಜಸ್ಟೀಸ್ ನಾಗಮೋಹನ್ ದಾಸ್ ಸಮಿತಿ ನೀಡುವ ವರದಿ ಸ್ವೀಕರಿಸಿ, ಒಳಮೀಸಲಾತಿ ಜಾರಿಗೊಳಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಯಲಿದೆ. ಆ.1ರಂದು ರಾಜ್ಯದಾದ್ಯಂತ ಎಲ್ಲಾ ಜಿಲ್ಲಾಧಿಕಾರಿ ಕಚೇರಿ ಎದುರು, ಅಂಬೇಡ್ಕರ್ ಪ್ರತಿಮೆಗಳ ಮುಂಭಾಗ ಸರ್ಕಾರದ ಶವಯಾತ್ರೆ ನಡೆಸಲಾಗುವುದು. ಜೊತೆಗೆ ತಲೆ ಬೋಳಿಸಿಕೊಂಡು ಕೂದಲನ್ನು ಸರ್ಕಾರಕ್ಕೆ ರವಾನಿಸಲಾಗುವುದು ಎಂದು ತಿಳಿಸಿದರು.

ಹುಟ್ಟುಹಬ್ಬದ ಶುಭಾಶಯ


ಮೈಸೂರು ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ್ದ ಡಿಐಜಿ ರವಿ ಡಿ.ಚನ್ನಣ್ಣನವರ್ ಅವರಿಗೆ ಸ್ಥಳೀಯರಾದ ಹರೀಶ್ ಹಳೇಬೀಡು, ಮಂಜುನಾಯಕ್, ಸಿದ್ದರಾಜು ಹಾಗೂ ರವಿ ಹುಟ್ಟುಹಬ್ಬದ ಶುಭಾಶಯ ಕೋರಿ, ಅಭಿನಂದಿಸಿದರು. ಈ ವೇಳೆ ಅಗ್ನಿಶಾಮಕ ಅಧಿಕಾರಿ ರಾಜೇಶ್ ಇದ್ದರು.

ಕೃಷ್ಣದೇವರಾಜ ವಂಶಸ್ಥರಿಗೆ ಪರಕಾಲ ಮಠದ ಶ್ರೀಗಳಿಂದ ಆಶೀರ್ವಾದ


ಮೈಸೂರು ಪರಕಾಲ ಮಠಕ್ಕೆ ವಿಜಯನಗರ ಶ್ರೀ ಕೃಷ್ಣದೇವರಾಯ ವಂಶಸ್ಥರಾದ ಟೈಟಲರ್ ಕೃಷ್ಣದೇವರಾಯ ಅವರು ಭೇಟಿ ನೀಡಿ, ಶ್ರೀ ಲಕ್ಷ್ಮೀ ಹಯಗ್ರೀವರ ದರ್ಶನದ ನಂತರ ಶ್ರೀ ಅಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳ ಆಶೀರ್ವಾದ ಪಡೆದರು. ಈ ವೇಳೆ ಶ್ರೀಮಠದ ಶ್ರೀನಿವಾಸ್ ರಾಘವನ್, ಭರತ್ ಆಕಾಶ್, ಟಿ.ಎಸ್.ಅರುಣ್, ರಕ್ಷಿತ್ ಹಾಗೂ ಶ್ರೀ ಮಠದ ಶಿಷ್ಯರು ಉಪಸ್ಥಿತರಿದ್ದರು.

ಪೂರ್ವ ಕಾಂಗೋದಲ್ಲಿ ಚರ್ಚ್ ಮೇಲೆ ಉಗ್ರರ ದಾಳಿ; 21 ಮಂದಿ ಸಾವು

ಕಿನ್ಶಾಸಾ: ಪೂರ್ವ ಕಾಂಗೋದಲ್ಲಿನ ಚರ್ಚ್ ಮೇಲೆ ಇಸ್ಲಾಮಿಕ್ ಸ್ಟೇಟ್ ಬೆಂಬಲಿತ ಉಗ್ರರು ಭಾನುವಾರ ನಡೆಸಿದ ದಾಳಿಯಲ್ಲಿ ಕನಿಷ್ಠ 21 ಜನರು ಸಾವನ್ನಪ್ಪಿದ್ದಾರೆ. ಪೂರ್ವ ಕಾಂಗೋದ ಕೊಮಾಂಡಾದಲ್ಲಿರುವ ಕ್ಯಾಥೋಲಿಕ್ ಚರ್ಚ್‌ನ ಆವರಣದಲ್ಲಿ ಮುಂಜಾನೆ 1 ಗಂಟೆ ಸುಮಾರಿಗೆ ಅಲೈಡ್ ಡೆಮಾಕ್ರಟಿಕ್ ಫೋರ್ಸ್ ಉಗ್ರರು ದಾಳಿ ನಡೆಸಿದ್ದಾರೆ. ದಾಳಿ ವೇಳೆ ಹಲವಾರು ಮನೆಗಳು ಮತ್ತು ಅಂಗಡಿಗಳಿಗೂ ಬೆಂಕಿ ಹಚ್ಚಲಾಗಿದೆ ಎಂದು ನಾಗರಿಕ ಸಮಾಜದ ನಾಯಕರೊಬ್ಬರು ತಿಳಿಸಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೋಲಿಕೆ ಖಂಡಿಸಿ

ಮೈಸೂರಲ್ಲಿ ಯತೀಂದ್ರ ವಿರುದ್ಧ ಕರ್ನಾಟಕ ಸೇನಾಪಡೆ ಪ್ರತಿಭಟನೆ



ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ತಮ್ಮ ತಂದೆಯನ್ನು ಹೋಲಿಸಿ ಮಾತನಾಡಿರುವ ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ಖಂಡಿಸಿ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಮೈಸೂರಿನ ಹಳೇ ಡಿಸಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಮೈಸೂರು, ಜು.27(ಜಿಎ)– ಶ್ರೀಮನ್ಮಹಾರಾಜ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ತಮ್ಮ ತಂದೆಯನ್ನು ಹೋಲಿಸಿ ಮಾತನಾಡಿರುವ ಎಂಎಲ್‌ಸಿ ಡಾ.ಯತೀಂದ್ರ ಹೇಳಿಕೆ ಖಂಡಿಸಿ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ನಾಲ್ವಡಿ ಅವರಿಗಿಂತ ನಮ್ಮಪ್ಪನದೇ ಜಾಸ್ತಿ ಕೊಡುಗೆ ಮೈಸೂರಿಗೆ ಎಂದು ಹೇಳಿರುವ ಅವರಿಗೆ ಬಹುಶಃ ನಾಲ್ವಡಿ ಅವರು ನಮ್ಮ ರಾಜ್ಯಕ್ಕೆ ನೀಡಿರುವ ನೂರಾರು ಕೊಡುಗೆಗಳು ತಿಳಿದಿಲ್ಲ. ಶಿಕ್ಷಣ, ನೀರಾವರಿ, ಕೈಗಾರಿಕೆ, ಕಾರ್ಖಾನೆಗಳು, ಪ್ರಜೆಗಳಿಗೆ ಸಾಮಾಜಿಕ ನ್ಯಾಯ ನೀಡಿದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ನಾಲ್ವಡಿರವರು ರಾಜ್ಯಕ್ಕೆ ನೀಡದ ಕೊಡುಗೆಗಳಿಲ್ಲ. ನೂರಾರು ಜನ್ಮ ಎತ್ತಿದರೂ, ಯಾರೂ ನಾಲ್ವಡಿರವರ ಕಾಲಿನ ಧೂಳಿಗೂ ಸಮನಾಗುವುದಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಅಂದು ದೂರದೃಷ್ಟಿಯ ಆಡಳಿತದಿಂದ ಅಕ್ಷರಶಃ ಸುವರ್ಣಯುಗವನ್ನು ಸೃಷ್ಟಿಸಿದ್ದರು. ನಾಲ್ವಡಿ ಭೂಪ– ಮನೆ ಮನೆ ದೀಪ ಎಂದು ಇಂದಿಗೂ ಕನ್ನಡಿಗರು ನೆನೆದುಕೊಳ್ಳುವ ಅಭಿವೃದ್ಧಿಯ ಹರಿಕಾರರಾದ ನಾಲ್ವಡಿ ಮಹಾರಾಜರೆಲ್ಲಿ, ಪ್ರತಿ ಕನ್ನಡಿಗರ ಮೇಲೆ ಸಾಲದ ಹೊರೆ ಹೊರೆಸಿರುವ ಹಾಗೂ ಎಲ್ಲಾ ದಿನಬಳಕೆ ವಸ್ತುಗಳ ಬೆಲೆ ಏರಿಕೆ ಮಾಡಿರುವ ಸಿದ್ದರಾಮಯ್ಯ ಅವರೆಲ್ಲಿ ಎಂದು ಟೀಕಿಸಿದರು.

ಸಿದ್ದರಾಮಯ್ಯನವರು ರಾಜಕೀಯದಲ್ಲಿ ಹಲವಾರು ಏಳು ಬೀಳುಗಳನ್ನು ಕಂಡು, ಪಕ್ಷಗಳನ್ನು ಬದಲಾವಣೆ ಮಾಡಿ, ರಾಜ್ಯದ ಜನರ ತೆರಿಗೆ ಹಣದಲ್ಲಿ ಐಷಾರಾಮಿ ಜೀವನ ನಡೆಸಿ, ಜನರ ಹಣದಲ್ಲಿ ಬಿಟ್ಟಿ ಭಾಗ್ಯಗಳನ್ನು ನೀಡುತ್ತಿದ್ದಾರೆಯೇ ಹೊರತು ಅವರ ಮನೆಯಿಂದ ಹಣವನ್ನು ತಂದು ರಾಜ್ಯವನ್ನು ಅಭಿವೃದ್ಧಿ ಮಾಡುತ್ತಿಲ್ಲ. ಮಹಾರಾಜರು ಕಟ್ಟಿಸಿದ ಮೈಸೂರು ಮೆಡಿಕಲ್ ಕಾಲೇಜು, ಕೆ.ಆರ್.ಆಸ್ಪತ್ರೆಗೆ ಸುಣ್ಣ ಬಣ್ಣ ಬಳಿಸಲು ಆಗಿಲ್ಲ ಎಂದು ದೂರಿದ ಅವರು, ಕೇವಲ ತಮ್ಮ ರಾಜಕೀಯ ಪ್ರಚಾರಕ್ಕಾಗಿ, ಮನಬಂದಂತೆ ಹೇಳಿಕೆ ನೀಡುತ್ತಿರುವ ಎಂಎಲ್‌ಸಿ ಡಾ.ಯತೀಂದ್ರ ಕೂಡಲೇ ಬಹಿರಂಗವಾಗಿ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ವಿಕ್ರಂ ಅಯ್ಯಂಗಾರ್, ಸುರೇಶ್, ಪ್ರಜೀಶ್, ಸಿಂದುವಳ್ಳಿ ಶಿವಕುಮಾರ್, ವರಕೋಡು ಕೃಷ್ಣೇಗೌಡ, ಬೋಗಾದಿ ಸಿದ್ದೇಗೌಡ, ನೇಹಾ, ಆನಂದ್‌ಗೌಡ, ಡಾ.ಶಾಂತ ರಾಜೇಅರಸ್, ಭಾಗ್ಯಮ್ಮ, ನಂದಕುಮಾರ್, ಹೊನ್ನೇಗೌಡ, ತಾಯೂರು ಗಣೇಶ್, ರಾಧಾಕೃಷ್ಣ, ಎಳನೀರು ರಾಮಣ್ಣ, ಶಿವನಾಯ್ಕ, ರಘು ಅರಸ್, ಪ್ರಭಾಕರ್, ದರ್ಶನ್ ಗೌಡ, ಚಂದ್ರಶೇಖರ್, ಕುಮಾರ್, ಸ್ವಾಮಿಗೌಡ, ಮೂರ್ತಿ ಲಿಂಗಯ್ಯ, ರವೀಶ್, ವಿಷ್ಣು ಪಾಲ್ಗೊಂಡಿದ್ದರು.

ಸಾಮೂಹಿಕ ನಾಯಕತ್ವದಲ್ಲಿ ರೈತ ಸಂಘ, ಹಸಿರು ಸೇನೆ ಅಸ್ತಿತ್ವಕ್ಕೆ

ಮೈಸೂರು, ಜು.27–ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಸ್ಥಾಪಿಸಲಾಗಿದ್ದು, ಜು.28ರಂದು ಬೆಳಗ್ಗೆ 9 ಗಂಟೆಗೆ ಮೈಸೂರು ತಾಲೂಕು ಮರಯ್ಯನ ಹುಂಡಿಯಲ್ಲಿ ಉದ್ಘಾಟನೆಗೊಳ್ಳಲಿದೆ. ಹಿರಿಯ ರೈತ ಹೋರಾಟಗಾರರಾದ ಚುಕ್ಕಿ ನಂಜುಂಡಸ್ವಾಮಿ, ಹೊಸೂರು ಪ್ರಕಾಶ್, ಮಂಜು ಕಿರಣ್ ಅವರ ನೇತೃತ್ವದಲ್ಲಿ ಈ ಸಾಮೂಹಿಕ ನಾಯಕ್ವದ ರೈತ ಸಂಘ, ಹಸಿರು ಸೇನೆ ಸ್ಥಾಪಿಸಲಾಗಿದೆ ಎಂದು ರೈತ ಬಂಧು ಭೈರೇಗೌಡ ಗೋಪಾಲಪುರ ತಿಳಿಸಿದ್ದಾರೆ. ವಿವರಗಳಿಗೆ ಮೊ:9845770235 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಅರ್ಜಿ

ಮೈಸೂರು: ಮೈಸೂರಿನ ಚಿಕ್ಕವೀರ ದೇಶಿಕೇಂದ್ರಸ್ವಾಮಿ ಉಚಿತ ವಿದ್ಯಾರ್ಥಿನಿಲಯಕ್ಕೆ 2025–26ನೇ ಸಾಲಿನ ಪದವಿ, ಸ್ನಾತಕೋತ್ತರ, ಇಂಜಿನಿಯರಿಂಗ್, ಡಿಪ್ಲೊಮಾ ತರಗತಿಗಳಿಗೆ ಗ್ರಾಮಾಂತರ ಪ್ರದೇಶದಿಂದ ಉನ್ನತ ವಿದ್ಯಾಭ್ಯಾಸಕ್ಕೆ ಬರುವ ಲಿಂಗಾಯತ ಬಡ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ನಿಲಯದ ಕಚೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಜು.31ರ ಸಂಜೆ 5 ಗಂಟೆಯೊಳಗೆ ಸಲ್ಲಿಸಲು ಕೋರಲಾಗಿದೆ. ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಆ.10ರಂದು ಬೆಳಗ್ಗೆ 10.30ಕ್ಕೆ ವಿದ್ಯಾರ್ಥಿನಿಲಯದ ಕಚೇರಿಯಲ್ಲಿ ಪೋಷಕರೊಂದಿಗೆ ಮೌಖಿಕ ಸಂದರ್ಶನಕ್ಕೆ ಹಾಜರಿರಬೇಕು. ಹೆಚ್ಚಿನ ಮಾಹಿತಿಗೆ ಮೊ. 9972098522, 9035327193, 9449084396 ಸಂಪರ್ಕಿಸಬಹುದು.

ಮೈಸೂರು ದಸರಾ ವಸ್ತುಪ್ರದರ್ಶನ ಮಾದರಿ ಬೆಳಗಾವಿಯಲ್ಲೂ ಆಯೋಜನೆ

ಜಿಲ್ಲಾಡಳಿತದೊಂದಿಗೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಸಭೆ


ಬೆಳಗಾವಿಯಲ್ಲಿ ವಸ್ತುಪ್ರದರ್ಶನ ಆಯೋಜಿಸಲು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ನೇತೃತ್ವದಲ್ಲಿ ಸಭೆ ನಡೆಸಲಾಯಿತು.

ಮೈಸೂರು, ಜು.27(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರು ನಂತರ ನ.14ರಂದು ಬೆಳಗಾವಿ ಸಿಪಿಎಡ್ ಮೈದಾನದಲ್ಲಿ ವಸ್ತುಪ್ರದರ್ಶನ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದ್ದಾರೆ.

ಈ ಸಂಬಂಧ ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಬೆಳಗಾವಿ ನಗರಾಭಿವೃದ್ಧಿ ಅಧ್ಯಕ್ಷ ರಾಮೋಜಿ ರಾವ್ ಹಾಗೂ ಬೆಳಗಾವಿ ನಗರಪಾಲಿಕೆ ಆಯುಕ್ತರು, ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದ್ದು, ಮೈಸೂರಿನ ದಸರಾ ವಸ್ತುಪ್ರದರ್ಶನ ಮಾದರಿಯಲ್ಲಿಯೇ ಬೆಳಗಾವಿಯಲ್ಲೂ ನಡೆಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಮೈಸೂರು ನಂತರ ಬೆಳಗಾವಿ ಹಾಗೂ ಬಳ್ಳಾರಿಯಲ್ಲಿ ವಸ್ತುಪ್ರದರ್ಶನ ಆಯೋಜಿಸಲು ಅನುಮತಿ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿತ್ತು. ಮುಖ್ಯಮಂತ್ರಿಗಳು ತಮ್ಮ ಮನವಿಗೆ ಸ್ಪಂದಿಸಿದ ಹಿನ್ನಲೆಯಲ್ಲಿ ವಸ್ತುಪ್ರದರ್ಶನ ಆಯೋಜಿಸಲು ನಿರ್ಧರಿಸಲಾಗಿದೆ ಎಂದರು.

ಸರ್ಕಾರಿ ಮಳಿಗೆಗಳ ಜೊತೆಗೆ ಖಾಸಗಿ ಮಳಿಗೆಗಳಿಗೂ ಅವಕಾಶ ಮಾಡಿಕೊಡುವ ಕುರಿತು ಚರ್ಚಿಸಲಾಗಿದೆ. ಸ್ಥಳೀಯ ಪರಿಸ್ಥಿತಿ ಗಮನಿಸಿ ಸ್ಥಳೀಯ ಖಾಸಗಿ ಮಳಿಗೆದಾರರಿಗೆ ಅವಕಾಶ ಮಾಡಿಕೊಡಲಾಗುವುದು. ಹಾಗೆಯೇ ವಸ್ತುಪ್ರದರ್ಶನಕ್ಕೆ ಭೇಟಿ ನೀಡುವಂತೆ ಸಚಿವರಾದ ಸತೀಶ್ ಜಾರಕಿಹೋಳಿ ಹಾಗೂ ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಆಹ್ವಾನಿಸಲಾಗಿದೆ ಎಂದರು.



ಶ್ರೀ ಶನೇಶ್ವರ ಸ್ವಾಮಿ ಪೂಜಾ ಮಹೋತ್ಸವ

ಶ್ರಾವಣ ಮಾಸದ ಅಂಗವಾಗಿ ಶ್ರೀ ಶನೇಶ್ವರ ಸ್ವಾಮಿ ಭಕ್ತ ಮಂಡಳಿಯಿಂದ 45ನೇ ವರ್ಷದ ಶ್ರೀ ಶನೇಶ್ವರಸ್ವಾಮಿ ಪೂಜಾ ಮಹೋತ್ಸವ ಕಾರ್ಯಕ್ರಮ ಕೆ.ಆರ್.ಮೊಹಲ್ಲಾದ ನಾಲಾಬೀದಿಯಲ್ಲಿ ಸ್ವಾಮಿಗೆ ಅಭಿಷೇಕ, ಅಷ್ಟ ತುಳಸಿ ನೆರವೇರಿಸಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ರಾಜಬೀದಿಯಲ್ಲಿ ಮೆರವಣಿಗೆ ನಡೆಯಿತು. ಶಿವಮೊಗ್ಗದ ಶ್ರೀ ಪ್ರತ್ಯಂಗಿರಾ ದೇವಿ ದೇವಾಲಯದ ಸಂಸ್ಥಾಪಕ ಡಾ. ಶ್ರೀ ಸುಪ್ರೀತ್ ಗುರೂಜಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಶ್ರೀನಾಥ್‌ಬಾಬು, ಶೇಖರ, ರಾಘವೇಂದ್ರ, ಕಿಶೋರ, ದೇವಣ್ಣ, ಗಣೇಶ್, ಸ್ವಾಮಿ, ಡಾ.ಚಕ್ರಪಾಣಿ, ಮಂಜುನಾಥ್, ಮಧುಸೂದನ್ ಇದ್ದರು.

ಆ.8, ಮೈಸೂರಿನ ಕೆ.ಆರ್.ಬ್ಯಾಂಕ್ ಶತಮಾನೋತ್ಸವ

ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಆಹ್ವಾನ


ಮೈಸೂರಿನ ಕೃಷ್ಣರಾಜೇಂದ್ರ ಸಹಕಾರಿ ಬ್ಯಾಂಕ್(ಕೆ.ಆರ್.ಬ್ಯಾಂಕ್)ನ ಶತಮಾನೋತ್ಸವ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲಾಯಿತು.

ಮೈಸೂರು, ಜು.27(ಜಿಎ)–ಮೈಸೂರಿನ ಅಗ್ರಹಾರದಲ್ಲಿರುವ ಕೃಷ್ಣರಾಜೇಂದ್ರ ಸಹಕಾರಿ ಬ್ಯಾಂಕ್(ಕೆ.ಆರ್.ಬ್ಯಾಂಕ್)ನ ಶತಮಾನೋತ್ಸವ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲಾಯಿತು.

100 ವಸಂತಗಳನ್ನು ಪೂರೈಸಿ ಶತಮಾನೋತ್ಸವ ಸಂಭ್ರಮದಲ್ಲಿರುವ ಕೃಷ್ಣರಾಜೇಂದ್ರ ಸಹಕಾರಿ ಬ್ಯಾಂಕಿನ ಶತಮಾನೋತ್ಸವ ಸಮಾರಂಭವು ಆ.8ರಂದು ಅಗ್ರಹಾರ ವೃತ್ತದಲ್ಲಿರುವ ಬ್ಯಾಂಕಿನ ಆವರಣದಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಬ್ಯಾಂಕಿನ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಮೈಸೂರಿನ ರಾಮಕೃಷ್ಣನಗರದಲ್ಲಿರುವ ಮುಖ್ಯಮಂತ್ರಿಗಳ ನಿವಾಸದಲ್ಲಿ ಭೇಟಿ ಮಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಶಾಲು ಹೊದಿಸಿ ಫಲ–ತಾಂಬೂಲ ಮತ್ತು ಆಹ್ವಾನ ಪತ್ರಿಕೆ ನೀಡಿ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಆಹ್ವಾನಿಸಿದರು. ಆಹ್ವಾನ ಪತ್ರಿಕೆ ಸ್ವೀಕರಿಸಿದ ಮುಖ್ಯಮಂತ್ರಿಗಳು ಶತಮಾನೋತ್ಸವ ಸಂಭ್ರಮಕ್ಕೆ ಬರುವುದಾಗಿ ಒಪ್ಪಿಗೆ ಸೂಚಿಸಿದ್ದಾರೆ.

ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷ ಬಸವರಾಜ್ ಬಸಪ್ಪ, ಉಪಾಧ್ಯಕ್ಷೆ ಸರ್ವಮಂಗಳ, ನಿರ್ದೇಶಕರಾದ ಹೆಚ್.ವಿ.ಭಾಸ್ಕರ್, ಎಂ.ಡಿ.ಪಾರ್ಥಸಾರಥಿ, ಪ್ರತಿಧ್ವನಿ ಪ್ರಸಾದ್, ಶಿವಪ್ರಕಾಶ್, ಪ್ರದೇಶ ಕುರುಬರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಸುಬ್ರಮಣ್ಯ, ಮಾರ್ಬಳ್ಳಿ ಕುಮಾರ ಮತ್ತಿತರರು ಉಪಸ್ಥಿತರಿದ್ದರು.

ಚರ್ಚಾ ಸ್ಪರ್ಧೆಯಲ್ಲಿ ಚಾಂಪಿಯನ್


ಮೈಸೂರಿನ ಸಿಎಫ್‌ಟಿಆರ್‌ಐ ಶಾಲೆ ಆಯೋಜಿಸಿದ್ದ 44ನೇ ಡಾ.ವಿ.ಸುಬ್ರಮಣ್ಯಂ ಸ್ಮರಣಾರ್ಥ ಅಂತರ ಪ್ರೌಢಶಾಲಾ ಇಂಗ್ಲೀಷ್ ಚರ್ಚಾ ಸ್ಪರ್ಧೆಯಲ್ಲಿ ಶ್ರೀ ಶಾರದಾ ಪಬ್ಲಿಕ್ ಶಾಲೆ ಸಮಗ್ರ ಚಾಂಪಿಯನ್‌ಶಿಪ್ ಟ್ರೋಫಿ ಪಡೆದುಕೊಂಡಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.07.2025 ಸೋಮವಾರ, ಮಳೆ ನಕ್ಷತ್ರ: ಪುಷ್ಯ, 20.07.2025ರಿಂದ 2.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಮೈಸೂರು ಜಿಲ್ಲಾ ಕನ್ನಡ ವೃತ್ತಿ ರಂಗಭೂಮಿ ಕಲಾವಿದರ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಮೈಸೂರು ಮತ್ತು ಬೆಂಗಳೂರು) :** 36ನೇ ವರ್ಷದ ಪೌರಾಣಿಕ ರಂಗಸಂಭ್ರಮ, ಮುಖ್ಯ ಅತಿಥಿಗಳು: ಕೆ.ಎಸ್.ಜಿ.ಹೆಚ್. ಮ್ಯೂಸಿಕ್ ಮತ್ತು ಪರ್‌ಫಾರ್ಮಿಂಗ್, ಆರ್ಟ್ ಯೂನಿವರ್ಸಿಟಿಯ ಕುಲಪತಿ ನಾಗೇಶ್ ವಿ.ಬೆಟ್ಟಕೋಟೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್, ಮೈಸೂರು ಜಿಪಂ ಮಾಜಿ ಅಧ್ಯಕ್ಷ ಕಾಮು ಸಿದ್ದವೀರಪ್ಪ, ಅಶೋಕ್, ರಾಜೀವ್, ಮಾ.ವಿ. ರಾಮಪ್ರಸಾದ್, ರಘುರಾಮ್ ವಾಜಪೇಯಿ, ಸ್ಥಳ: ರಂಗಾಚಾರ್ಲು ಭವನ (ಟೌನ್‌ಹಾಲ್) ಬೆಳಗ್ಗೆ 10ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಅರ್ಥರೈಟಿಸ್, ಹೈಪೋಥೈರಾಯ್ಡಿಸಮ್ ಯೋಗ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಮತ್ತು ಅಲ್ಸರ್, ಇಸುಬು ರೋಗಗಳಿಗೆ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ಕ್ಕೆ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು, ವಾಚನ : ವಿಶ್ರಾಂತ ಕಾರ್ಯಪಾಲಕ ಅಭಿಯಂತರ ಗಮಕ ವಿದ್ವಾನ್ ಕೈರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



6.10 ಚಿಂತನ–ವಿ.ಬಿ.ಕುಲಮರ್ವ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ, ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ : ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ದೀಪಿಕಾ ಪಾಂಡುರಂಗಿ, ಕೆ.ಬಿ. ಸುನೀತಾ ಆಚಾರ್ಯ ಹಾಗೂ ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ.ಜ್ಯೋತಿಶಂಕರ್, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು, ವೈದ್ಯರ ಕಿವಿಮಾತು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ), 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ವೇದವಲ್ಲಿ, ಹಾಡುಗಾರಿಕೆ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಗೇಮ್ ಶೋ, ಪ್ರಸ್ತುತಿ–ಬಿ. ದಿಗ್ವಿಜಯ್, 12.05–ವನಿತಾ ವಿಹಾರ–ರೂಪಕ –ನಾಗರಪಂಚಮಿ ನಾಡಿಗೆ ದೊಡ್ಡದು", ರಚನೆ ಹಾಗೂ ಪ್ರಸ್ತುತಿ– ಮಂಜುಳಾ ಪುರಾಣಿಕ, **ಮಧ್ಯಾಹ್ನ** 12.35–ದೇವರನಾಮ –ರೇಖಾ ವೆಂಕಟೇಶ್, 12.45–ನಮ್ಮ ಆರೋಗ್ಯ, ವಿಶ್ವ ಸ್ತನ್ಯಪಾನ ಸಪ್ತಾಹದ ಧ್ಯೇಯವಾಕ್ಯ ಮತ್ತು ಸ್ತನ್ಯಪಾನದ ಮಹತ್ವವನ್ನು ತಿಳಿಸಿಕೊಡಲಿದ್ದಾರೆ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ನ ಮೈಸೂರು ಘಟಕದ ಅಧ್ಯಕ್ಷ ಡಾ.ಶ್ರೀನಿವಾಸ್ .ಬಿ.ಎಚ್., ಕಾರ್ಯದರ್ಶಿ ಡಾ.ಯಶವಂತರಾಜು ಎಚ್.ಎನ್ ಮತ್ತು ನವಜಾತ ಶಿಶುತಜ್ಞರಾದ ಡಾ.ಮೇಘಾ.ಪಿ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ–ಸರ್ವರಿಗೂ ಸೂರು ಯೋಜನೆ ಕುರಿತು ಮಾಹಿತಿ, 1.20–ಭಾವಗೀತೆಗಳು, ಶಾಂತಾ ಜಯತೀರ್ಥ, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00– ಕರ್ನಾಟಕ ಶಾಸ್ತ್ರೀಯ ಸಂಗೀತ: ಹೆಚ್.ಟಿ.ಹರೀಶ್, ಸ್ಯಾಕ್ಸೋಫೋನ್ ವಾದನ, 4.00–ಮಹಿಳಾರಂಗ, ಭಾವಸಂಗಮ–ಭಾವಗೀತೆಗಳ ನ್ನಾಧರಿಸಿದ ಕಾರ್ಯಕ್ರಮ, ಪ್ರಸ್ತುತಿ: ಶರ್ಮಿಳ ಭಟ್, 4.45–ಹಿಂದಿ ಪಾಠ, ಪ್ರಸ್ತುತಿ: ಆಯೇಷಾ ಸುಲ್ತಾನ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಪ್ಲಾಸ್ಟಿಕ್ ಮಾಲಿನ್ಯ ನಿಲ್ಲಿಸಿ ಪರಿಸರ ಸಂರಕ್ಷಿಸಿ ಈ ಕುರಿತು ಮೈಸೂರಿನ ಪರಿಸರ ವಿಜ್ಞಾನಿ ಪ್ರೊ.ವಿ. ಜಗನ್ನಾಥ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಸಂಸತ್ ಸಮೀಕ್ಷಾ, 8.15–ಯುವವಾಣಿ–ಸಂತ ಫಿಲೋಮಿನಾ ಕಾಲೇಜಿನ ವಿದ್ಯಾರ್ಥಿಗಳ ಕಾರ್ಯಕ್ರಮ ವೈವಿಧ್ಯದ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಚಾರುಮತಿ ರಾಮಚಂದ್ರನ್–ಹಾಡುಗಾರಿಕೆ, 10.00–ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಅನ್ಯಭಾಷಿಕರ ಉದ್ಯೋಗಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳ

ಕೆನರಾ ಬ್ಯಾಂಕ್ ನಿವೃತ್ತ ಜನರಲ್ ಮ್ಯಾನೇಜರ್ ಡಾ.ಎಸ್.ಟಿ.ರಾಮಚಂದ್ರ ಆತಂಕ



ಮೈಸೂರು, ಜು.27–ರಾಷ್ಟ್ರೀಕೃತ ಬ್ಯಾಂಕ್‌ಗಳ ಹುದ್ದೆಗಳಿಗೆ ಸ್ಥಳೀಯರ ನೇಮಕವಾದರೆ ಮಾತ್ರ ಉತ್ತಮ ಗ್ರಾಹಕ ಸೇವೆ ನೀಡಲು ಸಾಧ್ಯ ಎಂದು ಕೆನರಾ ಬ್ಯಾಂಕ್ ನಿವೃತ್ತ ಜನರಲ್ ಮ್ಯಾನೇಜರ್ ಡಾ.ಎಸ್.ಟಿ. ರಾಮಚಂದ್ರ ಅಭಿಪ್ರಾಯಿಸಿದ್ದಾರೆ.


ಎರಡು ದಶಕಗಳಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಆಸಕ್ತಿ ಸ್ಥಳೀಯರಲ್ಲಿ ಕ್ಷೀಣಿಸಿರುವುದು ಅತ್ಯಂತ ನೋವಿನ ಸಂಗತಿ. ಪರಿಣಾಮ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಅನ್ಯಭಾಷಿಕರ ಉದ್ಯೋಗಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಅವರಿಗೆ ಸ್ಥಳೀಯ ಭಾಷಾಜ್ಞಾನ ಇಲ್ಲದ ಕಾರಣ ಗ್ರಾಹಕ ಸೇವೆಗಳಿಗೆ ಭಾರಿ ಹೊಡೆತ ಬಿದ್ದಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಬ್ಯಾಂಕಿಂಗ್ ಉದ್ಯೋಗ ವಲಯವನ್ನು ಹೊರರಾಜ್ಯದವರೇ ಸಂಪೂರ್ಣವಾಗಿ ಆವರಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ನಮ್ಮ ಮಣ್ಣಿನಲ್ಲಿ ಉದಯವಾದ ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ವಿಜಯ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್ ಇನ್ನಿತರ ಸಂಸ್ಥೆಗಳು ವಿಲೀನಗೊಂಡು ರಾಷ್ಟ್ರಮಟ್ಟದ ಸ್ವರೂಪ ಪಡೆದಿವೆ. ವಿಶೇಷವಾಗಿ ಯಶಸ್ವಿಯಾಗಿ ಮುನ್ನಡೆಯುತ್ತಿರುವ ಕೆನರಾ ಬ್ಯಾಂಕ್‌ಗಳಲ್ಲಿ ಹಿಂದೆ ಸಾವಿರಾರು ಕನ್ನಡಿಗರು ಸೇವೆ ಸಲ್ಲಿಸುತ್ತಿದ್ದರು. ಗ್ರಾಹಕ ಸೇವೆಯೂ ಕನ್ನಡದಲ್ಲೇ ನಡೆಯುತ್ತಿತ್ತು. ಆದರೆ ಈಗ ಹಿಂದಿನ ಸ್ಥಳೀಯ ಸೊಗಡು ಹಾಗೂ ಆತ್ಮೀಯ ಸಂವಹನ ಮಾಯವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಇತ್ತೀಚಿನ ಬೆಳವಣಿಗೆಗಳು ನಮ್ಮ ಭಾಷಾ ಹಕ್ಕುಗಳ ಜೊತೆಗೆ ಉದ್ಯೋಗಾವಕಾಶಗಳಿಗೂ ಸವಾಲು ಸೃಷ್ಟಿಸಿವೆ. ಹಿಂದಿ, ತೆಲುಗು ಇನ್ನಿತರ ಭಾಷಿಕರ ಸಿಬ್ಬಂದಿಗಳೊಂದಿಗೆ ವ್ಯವಹರಿಸಲಾಗದೆ ಕನ್ನಡಿಗರು ಸಂಕಟ ಅನುಭವಿಸುತ್ತಿದ್ದಾರೆ. ಇದು ಕೇವಲ ಸೇವಾ ವ್ಯತ್ಯಯವೆನ್ನಲಾಗದು, ಇದರಿಂದ ಸ್ಥಳೀಯರ ಸ್ವಾಭಿಮಾನಕ್ಕೂ ಧಕ್ಕೆಯಾಗುತ್ತಿದೆ. ಇದು ಪರಿಹಾರವಾಗಬೇಕಾದರೆ ಕನ್ನಡದ ಯುವಜನತೆ ಬ್ಯಾಂಕಿಂಗ್ ಕ್ಷೇತ್ರಕ್ಕೆ ಧಾವಿಸಬೇಕು ಎಂದು ಆಶಿಸಿದ್ದಾರೆ.

ಉತ್ತಮ ವೇತನ, ಉದ್ಯೋಗ ಭದ್ರತೆ, ಗೌರವಪೂರ್ಣ ಜೀವನಶೈಲಿಯೊಂದಿಗೆ ಬ್ಯಾಂಕಿಂಗ್ ವಲಯ ಆಕರ್ಷಣೆಯ ವೃತ್ತಿ ಕ್ಷೇತ್ರವಾಗಿಯೇ ಉಳಿದಿದೆ. ಪ್ರಸಕ್ತ ವರ್ಷ ದೇಶದಾದ್ಯಂತ ಸುಮಾರು 50,000 ಬ್ಯಾಂಕ್ ಹುದ್ದೆಗಳ ನೇಮಕಾತಿ ನಡೆಯಲಿದೆ. ಅರ್ಹ ಅಭ್ಯರ್ಥಿಗಳು ಐಬಿಪಿಎಸ್, ಎಸ್‌ಬಿಐ, ಆರ್‌ಆರ್‌ಬಿ ಇನ್ನಿತರ ಪರೀಕ್ಷೆಗಳಿಗೆ ಸಜ್ಜಾಗಬೇಕು. ಸ್ಪರ್ಧಾತ್ಮಕವಾಗಿ ಹೆಚ್ಚೆಚ್ಚು ಸಂಖ್ಯೆಯಲ್ಲಿ ಪರೀಕ್ಷೆ ಎದುರಿಸಬೇಕು. ಇದು ಕೇವಲ ಉದ್ಯೋಗದ ಪ್ರಶ್ನೆ ಅಲ್ಲ, ಇದು ನಮ್ಮ ಭಾಷೆಯ ಅಸ್ತಿತ್ವದ ಪ್ರಶ್ನೆಯೂ ಆಗಿದೆ. ಬ್ಯಾಂಕ್‌ಗಳಲ್ಲಿ ಮತ್ತೆ ಕನ್ನಡದ ಧ್ವನಿ ಝೇಂಕರಿಸಬೇಕಾದರೆ ಕನ್ನಡದ ಯುವ ಮನಸ್ಸುಗಳು ಸಾಧನೆ ಮೆರೆಯಬೇಕು ಎಂದು ನುಡಿದಿದ್ದಾರೆ.

ಯುವ ಆರೋಗ್ಯ ಯೋಗ ಮಹೋತ್ಸವದ ಭಿತ್ತಿಪತ್ರ ಬಿಡುಗಡೆ



ಜುಲೈ 30ರಂದು ಮೈಸೂರು ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮತ್ತು ಮೈಸೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಆಯೋಜಿಸಿರುವ ರಾಷ್ಟ್ರೀಯ ಯುವ ಆರೋಗ್ಯ ಯೋಗ ಮಹೋತ್ಸವದ ಪೋಸ್ಟರ್ ಅನ್ನು ಮೈಸೂರು ವಿವಿ ಕುಲಪತಿ ಡಾ.ಎನ್.ಕೆ.ಲೋಕನಾಥ್, ಅವರ ಕಚೇರಿಯಲ್ಲಿ ಬಿಡುಗಡೆ ಮಾಡಿದರು. ಕಾರ್ಯಕ್ರಮದ ಆಯೋಜಕರಾದ ಡಾ.ಲಕ್ಷ್ಮಿನಾರಾಯಣ್ ಶೆಣೈ, ಪ್ರೊ. ಮಹದೇವ ಮೂರ್ತಿ, ಪ್ರೊ.ಶೇಖರ್‌ನಾಯಕ್, ಡಾ.ಮಹೇಶ್, ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಅಂತೋಣಿ ಪೌಲ್‌ರಾಜ್ ಉಪಸ್ಥಿತರಿದ್ದರು.

ದೇಶದ ಯುವ ಸಮೂಹದಲ್ಲಿ ಮೌಲ್ಯಗಳು ಕುಸಿಯುತ್ತಿವೆ

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ್‌ಆಳ್ವ ಆತಂಕ



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಮತ್ತು ಜಿಲ್ಲಾ ಘಟಕ ಹಾಗೂ ಕದಳಿ ಮಹಿಳಾ ವೇದಿಕೆ ಸಹಯೋಗದ ಕಾರ್ಯಕ್ರಮದಲ್ಲಿ ಛಾಯಾ ನಂಜಪ್ಪ ಜೆಎಸ್‌ಎಸ್ ದಂತ ವೈದ್ಯ ಕಾಲೇಜು ಪ್ರಾಧ್ಯಾಪಕರಾದ ಡಾ.ಉಷಾ ಹೆಗ್ಡೆ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಜು.27(ಎಸ್‌ಪಿಎನ್)– ಭಾರತದಲ್ಲಿ ಯುವ ಸಮೂಹ ಶೇ.55ರಷ್ಟಿದ್ದರೂ ಭಾರತ ಹಲವು ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಿಲ್ಲ. ಅಲ್ಲದೆ, ಯುವ ಸಮೂಹದಲ್ಲಿ ಮೌಲ್ಯಗಳು ಕುಸಿಯುತ್ತಿವೆ ಎಂದು ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್‌ಆಳ್ವ ಆತಂಕ ವ್ಯಕ್ತಪಡಿಸಿದರು.

ಮೈಸೂರು ಕರ್ನಾಟಕ ಕಲಾಮಂದಿರ ಆವರಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಮತ್ತು ಜಿಲ್ಲಾ ಘಟಕ ಹಾಗೂ ಕದಳಿ ಮಹಿಳಾ ವೇದಿಕೆ ಸಹಯೋಗದೊಂದಿಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬ್ರಿಟನ್‌ನಲ್ಲಿ 6.5ಕೋಟಿ, ಆಸ್ಟ್ರೇಲಿಯಾದಲ್ಲಿ 2.5 ಕೋಟಿ, ಇತರೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಡಿಮೆ ಮಾನವ ಸಂಪನ್ಮೂಲ ಹೊಂದಿದ್ದರೂ ಅಭಿವೃದ್ಧಿ ಹೊಂದಿದ ದೇಶಗಳಾಗಿವೆ.

ಆದರೆ, ನಮ್ಮಲ್ಲಿ 1500 ವಿವಿಗಳು, ಪದವಿ ಕಾಲೇಜು, ಕೋಟ್ಯಾಂತರ ಸಂಖ್ಯೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಕಾರ್ಯ ನಿರ್ವಹಿಸುತ್ತಿದ್ದರೂ ವಿದ್ಯಾರ್ಥಿಗಳ ವೃತ್ತಿಗೆ ಅಗತ್ಯವಾದ ಶಿಕ್ಷಣ ಸಿಗುತ್ತಿಲ್ಲ. ಹಾಗಾಗಿ ನಮ್ಮಲ್ಲಿ ಯುವ ಸಮೂಹ ಶೇ.55ರಷ್ಟಿದ್ದರೂ ಸರಿಯಾಗಿ ಬಳಕೆಯಾಗುತ್ತಿಲ್ಲ ಎಂದು ಅಂಕಿ–ಸಂಖ್ಯೆಗಳ ಸಮೇತ ವಿವರಿಸಿದರು.

ಭಾರತದ ಹಲವು ಕ್ಷೇತ್ರದಲ್ಲಿ ಶರವೇಗದ ಬದಲಾವಣೆಗಳಾಗುತ್ತಿವೆ. ಇದರಿಂದಾಗಿ ಪ್ರಾಚೀನ ಕಾಲದ ಪರಂಪರೆಗಳು, ಸಾಮಾಜಿಕ ಮೌಲ್ಯಗಳಲ್ಲೂ ಬದಲಾವಣೆ ಗಾಳಿ ಬೀಸುತ್ತಿದೆ. ಪ್ರಾಚೀನ ಕಾಲ ಶಾಸ್ತ್ರೀಯ ನೃತ್ಯ, ಸಂಗೀತ, ವಾದ್ಯವಾದನ ಸೇರಿದಂತೆ ಅನೇಕ ವಿದ್ಯೆಗಳಿವೆ. ಇವುಗಳನ್ನು ಆಸಕ್ತಿಯಿಂದ ಕಲಿತುಕೊಳ್ಳುವವರ ಸಂಖ್ಯೆ ಕಡಿಮೆ. ಇಂದಿನ ವಿದ್ಯಾರ್ಥಿಗಳಿಗೆ ವಚನ ಸಾಹಿತ್ಯದ ಕುರಿತು ಅಧ್ಯಯನ ಮಾಡುವಂತೆ ಸಲಹೆ ನೀಡಿದರು.

ಹನ್ನೆರಡನೇ ಶತಮಾನದ ಜೇಡರ ದಾಸಿಮಯ್ಯ, ಅಣ್ಣ ಬಸವಣ್ಣ, ಅಲ್ಲಪ್ರಭು ಹಾಗೂ ಅಕ್ಕ ಮಹಾದೇವಿ ರಚಿತ ವಚನ ಸಾಹಿತ್ಯ, ಬದುಕಿಗೆ ಹತ್ತಿರವಾಗಿವೆ. ಪ್ರಕೃತಿಯ ಎಲ್ಲಾ ಪ್ರಾಣಿ–ಪಕ್ಷಿಗಳನ್ನು ಪ್ರೀತಿಸುವಂತೆ ವಚನಕಾರರು ಸಲಹೆ ನೀಡಿದ್ದಾರೆ. ಅಲ್ಲದೆ, ಸ್ವಾಭಿಮಾನ, ಸಮಾನತೆಯಿಂದ ಪ್ರತಿಯೊಬ್ಬರು ಬದುಕುಕಟ್ಟಿಕೊಳ್ಳಬೇಕು ಎಂದು ವಚನ ಸಾಹಿತ್ಯದಲ್ಲಿ ಉಲ್ಲೇಖಿಸಿದ್ದಾರೆ ಎಂದರು.

ಬಹುಮಾನ ವಿತರಣೆ: ವಿವಿಧ ಬಳಗದ ಸದಸ್ಯರಿಗೆ ಏರ್ಪಡಿಸಿದ್ದ ಕ್ರೀಡೆಗಳಲ್ಲಿ ವಿಜೇತರಾದ ಶ್ರೀ ರಾಜರಾಜೇಶ್ವರಿ ಅಕ್ಕನ ಬಳಗ ತಂಡ ಕೋಲಾಟದಲ್ಲಿ ಪ್ರಥಮ, ಅರಿವಿನ ಮನೆ ಮಹಿಳಾ ಬಳಗ ದ್ವಿತೀಯ, ಸ್ಪಂದನ ವೀರಶೈವ ಬಳಗ ತೃತೀಯ ಬಹುಮಾನ, ವಚನ ಗಾಯನ ಸ್ಪರ್ಧೆಯಲ್ಲಿ ಪರಂ ಜ್ಯೋತಿ ಮಹಿಳಾ ಬಳಗ ಪ್ರಥಮ, ನೀಲಗಂಗಾ ಮಹಿಳಾ ಬಳಗ ದ್ವಿತೀಯ, ಶ್ರೀರಾಜರಾಜೇಶ್ವರಿ ಅಕ್ಕನ ಬಳಗ ತೃತೀಯ ಬಹುಮಾನಗಳಿಸಿದ್ದಾರೆ.

ಕಿರುನಾಟಕ ಸ್ಪರ್ಧೆಯಲ್ಲಿ ಶ್ರೀರಾಜರಾಜೇಶ್ವರಿ ಅಕ್ಕನ ಬಳಗ ಪ್ರಥಮ, ಅರಿವಿನ ಮನೆ ಮಹಿಳಾ ಬಳಗ ದ್ವಿತೀಯ, ಶ್ರೀ ಶಿವರಾತ್ರೀಶ್ವರ ಮಹಿಳಾ ಬಳಗ ತೃತೀಯ, ರಸಪ್ರಶ್ನೆ ವಿಭಾಗದಲ್ಲಿ ಗೌರಿಶಂಕರ ಮಹಿಳಾ ಬಳಗ ಪ್ರಥಮ, ಗೌರಿಶಂಕರ್ ಮಹಿಳಾ ಬಳಗ ದ್ವಿತೀಯ, ಅರಿವಿನ ಮನೆ ಮಹಿಳಾ ಬಳಗ ತೃತೀಯ ಸ್ಥಾನಪಡೆದಿದ್ದಾರೆ. ಅದೃಷ್ಟದ ಆಟದ ವಿಭಾಗದಲ್ಲಿ ಲಲಿತಾದ್ರಿ ಮಹಿಳಾ ಬಳಗ ಪ್ರಥಮ, ಪರಂಜ್ಯೋತಿ ಮಹಿಳಾ ಬಳಗ ದ್ವಿತೀಯ, ಶ್ರೀ ಮಹದೇಶ್ವರ ಭಜನಾ ಸಂಘ ತೃತೀಯ ಬಹುಮಾನ ಪಡೆದರು.

ಈ ವೇಳೆ ಛಾಯಾ ನಂಜಪ್ಪ, ಜೆಎಸ್‌ಎಸ್ ದಂತ ವೈದ್ಯ ಕಾಲೇಜು ಪ್ರಾಧ್ಯಾಪಕರಾದ ಡಾ.ಉಷಾ ಹೆಗ್ಡೆ ಅವರನ್ನು ಸನ್ಮಾನಿಸಲಾಯಿತು. ವಿವಿಧ ಮಹಿಳಾ ಬಳಗದ ಸದಸ್ಯರು, ಅಧ್ಯಕ್ಷರನ್ನು ಅಭಿನಂದಿಸಲಾಯಿತು. ಈ ವೇಳೆ ಗದಗ ಜಿಲ್ಲೆಯ ಡಂಬಳದ ಎಡೆಯೂರು ಶ್ರೀ ತೋಂಟದಾರ್ಯ ಮಠದ ಡಾ.ತೋಂಟದ ಸಿದ್ದರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮುಕ್ತ ವಿವಿ ಕುಲಪತಿ ಡಾ.ಶರಣಪ್ಪ ವಿ.ಹಲಸೆ, ಗಾವಡೆಗೆರೆ ಮಠದ ಶ್ರೀ ನಟರಾಜ ಸ್ವಾಮೀಜಿ, ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಮಾಜಿ ಅಧ್ಯಕ್ಷೆ ಜಯಾಗೌಡ, ಪದಾಧಿಕಾರಿಗಳಾದ ಸುಧಾ ಮೃತ್ಯುಂಜಯಪ್ಪ, ರಾಜೇಶ್ವರಿ ಮಲ್ಲಿಕಾರ್ಜುನಪ್ಪ, ವಾಗ್ದೇವಿ, ಶೈಲಾ ಸಿದ್ದರಾಮಪ್ಪ, ಸುಮಾಪ್ರಕಾಶ್, ಎಂ.ಎ.ನೀಲಾಂಬಿಕಾ, ಶಶಿಕಲಾ ಸುಬ್ಬಣ್ಣ, ಗೀತಾ ಈಶ್ವರ್, ಗೀತಾ ರಾಜಶೇಖರ್, ಡಾ.ಶೈಲಾ ನಾಗರಾಜ್, ಬೀನಾ ರಮಾನಂದ, ಇಂದಿರಮ್ಮ ನಟರಾಜ್, ಪದ್ಮ ನಿರಂಜನ್, ದಿವ್ಯಚೇತನ, ಲೀಲಾಂಬಿಕ ಸುಬ್ಬಪ್ಪ, ರೋಟರಿ ಮೈಸೂರು ಉತ್ತರ ಕಾರ್ಯದರ್ಶಿ ಆಯರಹಳ್ಳಿ ಪಿ.ವಿರೂಪಾಕ್ಷ ಮುಖಂಡ ಕಾನ್ಯ ಶಿವಮೂರ್ತಿ, ಶರಣ ಮಹದೇವಪ್ಪ ಸೇರಿದಂತೆ ಇತರರರಿದ್ದರು.

ಯಾವುದೇ ಕ್ಷೇತ್ರವಾದರೂ ಬಾಬಾ ಸಾಹೇಬರ ಪ್ರಸ್ತುತಿ ಅನಿವಾರ್ಯ

ಚಿಂತಕ ಕೋಟಗಾನಗಳ್ಳಿ ರಾಮಯ್ಯ ಅಭಿಮತ



ಮೈಸೂರು, ಜು.27(ಎಂಕೆ)– ಇಂದು ಭಾರತದಲ್ಲಿ ಅಂಬೇಡ್ಕರ್ ಅವರ ಹೆಸರನ್ನು ಹೇಳದಂತಹ ಸನ್ನಿವೇಶ, ಸಂದರ್ಭವೇ ಇಲ್ಲ. ಯಾವುದೇ ರಾಜಕೀಯ, ಧರ್ಮ ಅಥವಾ ಇನ್ನಿತರೆ ಯಾವುದೇ ಕ್ಷೇತ್ರವಾದರೂ ಬಾಬಾ ಸಾಹೇಬರ ಪ್ರಸ್ತುತಿ ಅನಿವಾರ್ಯವಾಗಿದೆ ಎಂದು ಹಿರಿಯ ಚಿಂತಕ ಕೋಟಗಾನಗಳ್ಳಿ ರಾಮಯ್ಯ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ವಿವಿ ಸಂಶೋಧಕರ ಸಂಘ, ಅಂಬೇಡ್ಕರ್ ಸಾಹಿತ್ಯ ಅಕಾಡೆಮಿ ವತಿಯಿಂದ ವಿಶ್ವಮೈತ್ರಿ ಬುದ್ಧವಿಹಾರ ಮೈಸೂರು, ತಥಾಗತ ಬುದ್ಧವಿಹಾರ ನಂ.ಗೂಡು, ಬೆಸ್ಟ್ ಸಂಸ್ಥೆ, ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್ಸ್, ನವಯಾನ ಟ್ರಸ್ಟ್, ಎವಿಎಸ್‌ಎಸ್, ನೆಲೆಹಿನ್ನಲೆ, ಪ್ರಜ್ಞಾಟ್ರಸ್ಟ್ ಸಹಯೋಗದೊಂದಿಗೆ ಆಯೋಜಿಸಿದ್ದ 'ಅಂಬೇಡ್ಕರ್ ಅರಿವಿನ ಮಾರ್ಗದ ಧಮ್ಮ ಪಯಣದ ಹಾದಿಯಲ್ಲಿ 'ಧಮ್ಮಂ ನಮಾಮಿ' ನವ–ಯುವ–ಯಾನ್' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ನಾವು ಪ್ರಾಥಮಿಕ ಶಾಲೆಯಲ್ಲಿರುವ ಮಕ್ಕಳಿಗೆ ಅಂಬೇಡ್ಕರ್ ಮುಟ್ಟಿಸಲು, 'ಎ–ಫಾರ್' ಅಂಬೇಡ್ಕರ್ ಅಭಿಯಾನ ಆರಂಭ ಮಾಡಿ, ಪ್ರಬುದ್ಧ ಭಾರತದ ಮುಂದಿನ ಪೀಳಿಗೆಯನ್ನು ಹೇಗೆ ರೂಪಿಸಬಹುದು ಎಂಬ ಪ್ರಯೋಗವನ್ನು ಮಾಡುತ್ತಿದ್ದೇವೆ ಎಂದರು.

ಅಂಬೇಡ್ಕರ್ ಅವರನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಅವರು ಬಳಸುತ್ತಿದ್ದ ನುಡಿಕಟ್ಟುಗಳನ್ನು ಅರ್ಥ ಮಾಡಿಕೊಳ್ಳಬೇಕು. ನುಡಿಕಟ್ಟುಗಳೇ ಚರಿತ್ರೆಯ ಚಲನೆಗೆ ಬೇಕಾದ ಪ್ರಾಣಧಾತುಗಳಾಗಿವೆ. ಅಂಬೇಡ್ಕರ್ ಅವರು, ಸಮುದಾಯದ ಪುನರುತ್ಥಾನ ಎಂದು ಮಾತನಾಡಿದರು. ಅದರಂತೆ ಈ ಕಾಲದಲ್ಲಿ ನಾವು ಶೋಷಿತ ಸಮುದಾಯಗಳನ್ನು ಮರುಕಟ್ಟುವಿಕೆ ಬದಲಾಗಿ ಪುನರುತ್ಥಾನ ಮಾಡಬೇಕಿದೆ ಎಂದು ಎಚ್ಚರಿಸಿದರು.

ನವಯಾನವಾಗಬೇಕು: ಇತ್ತೀಚಿನ ವರ್ಷಗಳಲ್ಲಿ ನಾವು ಕಟ್ಟಿರುವುದೆಲ್ಲವೂ ಕುಸಿದು ಬೀಳುತ್ತಿದೆ. ದಲಿತ ಎಂಬ ದೊಡ್ಡ ಕೊಡೆಯನ್ನು ಬಿಟ್ಟು ಹೊರನಡೆಯುತ್ತಿದ್ದೇವೆ. ಬಹುಜನ ಪ್ರಯೋಗವೂ ವಿಫಲಗೊಂಡಿದೆ. ಬೌದ್ಧ ಧರ್ಮಕ್ಕೆ ಮತಾಂತರಗೊಂಡಿರುವ ನವಬೌದ್ಧರ ನಡೆ ಗೊಂದಲವಾಗಿದೆ ಎಂದು ಸಂಶೋಧನೆಗಳು ಹೇಳುತ್ತಿವೆ. ಹೊರಗಡೆ ಬುದ್ಧ, ಒಳಗೆ ಹಳೆಯ ಆಚರಣೆಗಳನ್ನು ಅನುಸರಿಸುತ್ತಿದ್ದಾರೆ ಎಂಬ ಮಾಹಿತಿಯನ್ನು ತಿಳಿಸುತ್ತಿವೆ. ಹಾಗಾಗಿ ಅಂಬೇಡ್ಕರ್ ಇಟ್ಟ ಹೆಜ್ಜೆಯಂತೆ ನವಯಾನದ ರೀತಿಯಲ್ಲಿ ಬೌದ್ಧ ಧರ್ಮ ಆಚರಣೆಯಾಗಬೇಕು ಎಂದು ತಿಳಿಹೇಳಿದರು.

ಕೊಳತ್ತೂರು ಬುದ್ಧವಿಹಾರದ ಸುಗತಪಾಲ ಬಂತೇಜಿ, ಅಂತರಸಂತೆ ಬುದ್ಧವಿಹಾರದ ಬಂತೆ ಮಾತೆ ಗೌತಮಿ, ಭಾರತೀಯ ಬೌದ್ಧ ಮಹಾಸಂಘದ ಉತ್ತರ ಕರ್ನಾಟಕ ಮಹಿಳಾ ವಿಂಗ್‌ನ ಅಧ್ಯಕ್ಷರಾದ ಡಾ.ಪುಟ್ಟಮಣಿ ದೇವಿದಾಸ್, ಮಾಜಿ ಮೇಯರ್ ಪುರುಷೋತ್ತಮ್, ಬೌದ್ಧ ಉಪನ್ಯಾಸಕಿ ಡಾ.ರೇಖಾ ಮತ್ತಿತರರಿದ್ದರು.

ಅ.14 ರಂದು ಬೌದ್ಧ ಸಮ್ಮೇಳನ

ಡಾ.ಬಿ.ಆರ್. ಅಂಬೇಡ್ಕರ್ ಅವರು 1956ರ ಅ.14 ರಂದು ಬೌದ್ಧ ಧರ್ಮ ಸ್ವೀಕರಿಸಿ, 69 ವರ್ಷ ಕಳೆದು 70ನೇ ವರ್ಷಕ್ಕೆ ಕಾಲಿಡುತ್ತಿರುವ ಹಿನ್ನಲೆಯಲ್ಲಿ ಅ.14 ರಂದು ಮೈಸೂರಲ್ಲಿ ರಾಜ್ಯಮಟ್ಟದ ಬೌದ್ಧ ಸಮ್ಮೇಳನ ಆಯೋಜಿಸಲು ಕಾರ್ಯಕ್ರಮದಲ್ಲಿ ತೀರ್ಮಾನಿಸಲಾಯಿತು. ಸಮ್ಮೇಳನದಲ್ಲಿ ನೂರಾರು ಮಂದಿ ಬೌದ್ಧ ಧರ್ಮ ಸ್ವೀಕರಿಸಲಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಟೀಚರ್ : ಜಾಸ್ತಿ ಸುಳ್ಳುಗಳಿಂದ ತುಂಬಿರೋ ಎರಡು ಪತ್ರಗಳು ಯಾವುವು?
ಗುಂಡ : ಒಂದು ಲವ್ ಲೆಟರ್, ಮತ್ತೊಂದು ಲೀವ್ ಲೆಟರ್

ಮೈಸೂರು ಮಿತ್ರ

ಸೋಮವಾರ, 28 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಮ್ಮ ಜೇಬಿನಲ್ಲಿರೋ ಹಣದಿಂದ ನಾವು ಶ್ರೀಮಂತರಲ್ಲ. ಹೃದಯದಲ್ಲಿ ಒಳ್ಳೆಯತನ, ಹೃದಯವಂತಿಕೆ–ಮಾನವೀಯತೆ ಇದ್ದರೆ ಮಾತ್ರ ಶ್ರೀಮಂತರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ದುಡಿಯುವ ಗಂಡಸು, ಬಸುರಿ ಹೆಂಗಸು ನೋಡಲು ಚಂದ'

ನಿಮ್ಮ ಪತ್ರಗಳು

■ ಸಂಸತ್ತಿನ ಸದನದ ಸಮಯ ಪೋಲಾಗದಂತೆ ನಿಯಂತ್ರಣ ಅಗತ್ಯ

ಮಾನ್ಯರೆ,

ಸಂಸತ್ತಿನ ಮುಂಗಾರು (ಮಳೆಗಾಲದ) ಅಧಿವೇಶನ ಆರಂಭವಾಗಿ ಹಲವಾರು ದಿನಗಳೇ ಕಳೆದರೂ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಗದ್ದಲದ ವಾತಾವರಣ ಉಂಟಾಗಿದೆ. ಉಭಯ ಸದನಗಳ ಕಲಾಪ ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷದವರು ಆಪರೇಷನ್ ಸಿಂಧೂರ, ಬಿಹಾರ ರಾಜ್ಯದ ಮತದಾರ ಪಟ್ಟಿ ಪರಿಶೀಲನೆ ನಿರ್ಧಾರ ಇವೇ ಮುಂತಾದ ವಿಷಯಗಳ ಬಗ್ಗೆ ಘೋಷಣೆಗಳನ್ನು ಕೂಗಿ ಗದ್ದಲ ಎಬ್ಬಿಸಿದಕ್ಕೆ ಗೊಂದಲದ ಪರಿಸ್ಥಿತಿ ಉಂಟಾಗಿ ಕೊನೆಗೆ ಸಭಾಧ್ಯಕ್ಷರ ಸೂಚನೆ ಮೇರೆಗೆ ಉಭಯ ಸದನಗಳ ಕಲಾಪವನ್ನು ಪದೇಪದೆ ಮುಂದೂಡಲಾಗಿದೆ.

ಪ್ರತಿಯೊಂದು ಅಧಿವೇಶನದ ಸಂದರ್ಭದಲ್ಲಿಯೂ ವಿರೋಧಪಕ್ಷಗಳು ಯಾವುದಾದರೊಂದು ವಿಷಯವನ್ನು ಎತ್ತಿಕೊಂಡು ಪ್ರತಿಭಟನೆ ನಡೆಸುವುದು ಮತ್ತು ಕಲಾಪಕ್ಕೆ ಅಡ್ಡಿಪಡಿಸುವುದು ನಡೆಯುತ್ತಲೇ ಇದೆ. ಈ ಬಾರಿಯಂತೂ ಆಪರೇಷನ್ ಸಿಂಧೂರದ ಬಗ್ಗೆ ಚರ್ಚೆಗಳು ನಡೆಯಬೇಕೆಂದು ವಿರೋಧಪಕ್ಷಗಳು ಹಠ ಹಿಡಿದಿವೆ. ಮುಂದಿನ ವಾರ ಈ ವಿಷಯದ ಬಗ್ಗೆ ಚರ್ಚೆ ನಡೆಸಲಾಗುವುದು ಎಂದು ಸರ್ಕಾರ ಸ್ಪಷ್ಟಪಡಿಸಿದ್ದರೂ ಸದನಗಳಲ್ಲಿ ಗದ್ದಲ, ಗೊಂದಲ ಮುಂದುವರಿದಿದೆ. ಆಪರೇಷನ್ ಸಿಂಧೂರದ ಬಗ್ಗೆ ನಡೆಯುವ ಚರ್ಚೆಯು ನಮ್ಮ ಸೇನಾ ಬಲವನ್ನು ಟೀಕಿಸುವ, ಸೈನಿಕರ ಸಾಮರ್ಥ್ಯವನ್ನು ಶಂಕಿಸುವ ರೀತಿಯಲ್ಲಿ ಇರದಿದ್ದರೆ ಉತ್ತಮ.

ಅದೇ ರೀತಿ ಸದನದಲ್ಲಿ ಸಭಾಧ್ಯಕ್ಷರು ನೀಡುವ ಸೂಚನೆಗಳನ್ನು ಪ್ರತಿಯೊಬ್ಬ ಸಂಸದರು ಚಾಚು ತಪ್ಪದೇ ಪಾಲಿಸಿ, ಸದನದ ಹಿರಿಮೆಯನ್ನು ಎತ್ತಿ ಹಿಡಿಯುವುದು ಹಾಗೂ ಸಭಾಧ್ಯಕ್ಷರಿಗೆ ಗೌರವಾದರಗಳನ್ನು ನೀಡುವುದು ಪ್ರತಿಯೊಬ್ಬ ಸಂಸದರ ಕರ್ತವ್ಯ ಕೂಡ. ಪ್ರತಿಯೊಬ್ಬ ಸಂಸದರು ತಮ್ಮ ನಡವಳಿಕೆಯಿಂದ ಯಾರ ಮನಸ್ಸಿಗೂ ನೋವಾಗದಂತೆ ವರ್ತಿಸಿ ಸದನದ ಗೌರವವನ್ನು ಹೆಚ್ಚಿಸುವುದೊಳಿತು. ಅಲ್ಲದೆ ಸದನದ ಕಲಾಪಗಳನ್ನು ನಿಲ್ಲಿಸಿ ಜನರ ಸಮಯ ಮತ್ತು ಹಣವನ್ನು ವ್ಯರ್ಥ ಮಾಡುವವರ ನಿಯಂತ್ರಣ ಕೂಡ ಅಗತ್ಯವಾಗಿದೆ. ಒಟ್ಟಾರೇ ಸಂಸತ್ತಿನಲ್ಲಿ ನಡೆಯುವ ಚರ್ಚೆಯು ಅರ್ಥಪೂರ್ಣವಾಗಿರಲಿ ಹಾಗೂ ವೃಥಾ ಕೆಸರೆರಚಾಟಕ್ಕೆ ಕಾರಣವಾಗದಿರಲಿ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

■ ಭಿಕ್ಷಾಟನೆಯಲ್ಲಿ ಕಂದಮ್ಮಗಳ ಕನಸು ಕಮರುತ್ತಿದೆ?

ಮಾನ್ಯರೆ,

ಮೈಸೂರಿಗೆ ಪ್ರವೇಶ ನೀಡುವ ಪ್ರಮುಖ ವೃತ್ತಗಳಲ್ಲಿ ಒಂದಾದ ಮಣಿಪಾಲ್ ಆಸ್ಪತ್ರೆ ಬಳಿಯ ವೃತ್ತ ಹಾಗೂ ಜಿಲ್ಲಾ ಆಸ್ಪತ್ರೆಯ ಬಳಿಯಿರುವ ಕೆಆರ್‌ಎಸ್ ವೃತ್ತಗಳಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲವು ಮಹಿಳೆಯರು ಕಂಕುಳಲ್ಲಿ ಹಸುಗೂಸುಗಳನ್ನು ಕಟ್ಟಿಕೊಂಡು ಭಿಕ್ಷಾಟನೆ ಮಾಡುತ್ತಿರುವುದು ದಿಗ್ಭ್ರಮೆ ಮೂಡಿಸುತ್ತಿದೆ. ಇನ್ನೂ ಸರಿಯಾಗಿ ಕಣ್ಣನ್ನೇ ತೆರೆಯದ ಪುಟ್ಟ ಮಕ್ಕಳನ್ನು ದಿನವಿಡೀ ವಾಹನಗಳ ದಟ್ಟಣೆ ಮಧ್ಯದಲ್ಲಿ, ವಿಪರೀತ ಕರ್ಕಶ ಹಾರನ್ ಶಬ್ಧಗಳ ಜೊತೆಗೆ, ವಿಷಪೂರಿತ ಹೊಗೆಯ ನಡುವೆ ಬಳಸಿಕೊಂಡು ಭಿಕ್ಷೆ ಬೇಡುವ ಗಟ್ಟಿ ಮುಟ್ಟಾದ ಮಹಿಳೆಯರನ್ನು ನೋಡಿದರೆ ಕೋಪದೊಂದಿಗೆ ಆ ಕಂದಮ್ಮನ ಬಗ್ಗೆ ಅಯ್ಯೋ ಪಾಪ ಎನಿಸುತ್ತದೆ. ಭಿಕ್ಷುಕಿ ಮಹಿಳೆ ಹತ್ತಿರವಿರುವ ಆ ಪುಟ್ಟ ಮಗು ಯಾವಾಗಲೂ ಮಲಗಿಯೇ ಇರುತ್ತದೆ. ಯಾವುದೇ ಹಸುಗೂಸು ದಿನವಿಡೀ ಮಲಗಿರಲು ಸಾಧ್ಯವೇ? ಬಹುಮುಖ್ಯವಾಗಿ ಆ ಭಿಕ್ಷುಕಿಯ ಬಳಿಯಿರುವ ಮಗು ಅವಳ ಮಗುವೇ ಅಥವಾ ಇನ್ನಾರದ್ದೋ ಮಗುವನ್ನು ಅಪಹರಿಸಿ, ಇಂತಹ ಕುಕೃತ್ಯಕ್ಕೆ ಬಳಸಲಾಗುತ್ತಿದ್ದೆಯೇ ಎಂಬ ಅನುಮಾನ ಮೂಡುತ್ತದೆ.

ಇಂತಹ ನೀಚ ಕೃತ್ಯಗಳು ಇತ್ತೀಚೆಗೆ ಬಹಳ ಹೆಚ್ಚಾಗುತ್ತಿವೆ ಹಾಗೂ ಗಾಬರಿ ಮೂಡಿಸುತ್ತಿವೆ. ಇಂತಹ ಘಟನೆಗಳು ಕಂಡುಬರುವ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಟ್ರಾಫಿಕ್ ಪೊಲೀಸರು ಕಾರ್ಯನಿರ್ವಹಿಸುತ್ತಿದ್ದರೂ ಸಹ ಅವರೂ ಕೂಡ ಮೂಕಪ್ರೇಕ್ಷಕರಾಗಿರುವುದನ್ನು ನೋಡಿದರೆ ಆಘಾತವಾಗುತ್ತದೆ.

ಭವಿಷ್ಯದಲ್ಲಿ ಚೆನ್ನಾಗಿ ಬಾಳಿ ಬದುಕಬೇಕಾದ ಪುಟ್ಟ ಕಂದಮ್ಮಗಳ ಜೀವ, ಆರೋಗ್ಯ, ಆಟ–ಪಾಠ, ಜೀವನ ಅತೀ ಚಿಕ್ಕ ವಯಸ್ಸಿನಲ್ಲಿಯೇ ಕಮರಿ ಹೋಗುತ್ತಿರುವುದನ್ನು ನೋಡಿದರೆ ಮನಸ್ಸಿಗೆ ಅತೀವ ಸಂಕಟವಾಗುತ್ತದೆ. ಆ ಕಠಿಣ ಮನಸ್ಸಿನ ಭಿಕ್ಷುಕಿಯರು ಯಾರೇ ಸಾರ್ವಜನಿಕರು ತಿಳಿ ಹೇಳಿದರೂ ಕೇಳುವ ಮನಸ್ಥಿತಿಯಲ್ಲಿ ಇದ್ದಂತೆ ಕಾಣುತ್ತಿಲ್ಲ. ಹಾಗಾಗಿ, ಜಿಲ್ಲಾಡಳಿತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಪೊಲೀಸ್ ಇಲಾಖೆ ತಕ್ಷಣವೇ ತನ್ನ ಅಧಿಕಾರ ಹಾಗೂ ಬಲ ಪ್ರಯೋಗಿಸಿ ಆ ಭಿಕ್ಷುಕಿಯರ ವಿರುದ್ಧ ಕಾನೂನು ಪ್ರಕಾರ ಸೂಕ್ತ ಹಾಗೂ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದರೊಂದಿಗೆ, ಅವರ ಬಳಿಯಿರುವ ಹಸುಗೂಸುಗಳನ್ನು ರಕ್ಷಿಸಿ, ಆ ಮಕ್ಕಳ ನಿಜ ಮೂಲವನ್ನು ಪತ್ತೆ ಹಚ್ಚಿ, ಆ ಕಂದಮ್ಮಗಳ ಭವ್ಯ ಭವಿಷ್ಯಕ್ಕೆ ಸುಂದರ ಮುನ್ನುಡಿಯನ್ನು ನೀಡಬೇಕಾಗಿ ಕಳಕಳಿಯ ಮನವಿ. **–ಪ್ರಶಾಂತ್‌ಕುಮಾರ್ ಎ.ಪಿ., ಸಹಾಯಕ ಪ್ರಾಧ್ಯಾಪಕರು.**

■ ಚಾಮುಂಡಿ ದೇವಿಯ ಪವಿತ್ರ ತಾಣಕ್ಕೆ ಇದೆಂತಹ ಸ್ಥಿತಿ

ಮಾನ್ಯರೆ,

ಮೈಸೂರಿನ ಸುಪ್ರಸಿದ್ಧ ಪವಿತ್ರ ತಾಣ ಶ್ರೀ ಚಾಮುಂಡೇಶ್ವರಿ ದೇವಿ ನೆಲೆಸಿರುವ ಚಾಮುಂಡಿಬೆಟ್ಟದಲ್ಲಿ ಎರಡು ಟ್ರ್ಯಾಕ್ಟರ್ ಪ್ಲಾಸ್ಟಿಕ್ ತ್ಯಾಜ್ಯ ಮತ್ತು ಏಳು ಚೀಲಗಳಷ್ಟು ಮದ್ಯದ ಬಾಟಲಿ ಸಂಗ್ರಹ ಮಾಡಿರುವ ಯುವ ಬ್ರಿಗೇಡ್ ಮೈಸೂರು ಘಟಕದ ನೂರಾರು ಸ್ವಯಂ ಸೇವಕರ ಸ್ವಚ್ಛತಾ ಕಾರ್ಯಕ್ರಮ ತುಂಬಾ ಶ್ಲಾಘನೀಯ. ಚಾಮುಂಡಿಬೆಟ್ಟ ಈಗಾಗಲೇ ಪ್ಲಾಸ್ಟಿಕ್ ನಿಷೇಧಿತ ಪ್ರದೇಶ ಹಾಗೂ ಸಂರಕ್ಷಿತ ಅರಣ್ಯ ಪ್ರದೇಶ ಎಂದು ಘೋಷಣೆ ಆಗಿದ್ದರೂ ಇಷ್ಟೊಂದು ಪ್ಲಾಸ್ಟಿಕ್ ತ್ಯಾಜ್ಯ ಮತ್ತು ಮದ್ಯದ ಬಾಟಲಿಗಳು ದೊರೆತಿರುವುದು ವಿಪರ್ಯಾಸವೇ ಸರಿ.

ರಸ್ತೆಬದಿಯಲ್ಲಿ, ವ್ಯೂ ಪಾಯಿಂಟ್ ಬಳಿ ಹಾಗೂ ಪೊಲೀಸರು ಗಸ್ತು ತಿರುಗುವ ಸ್ಥಳಗಳಲ್ಲಿಯೂ ನೂರಾರು ಮದ್ಯದ ಬಾಟಲಿಗಳು ದೊರೆತಿರುವುದು ಬೇಸರದ ಸಂಗತಿ. ಚಾಮುಂಡಿಬೆಟ್ಟದಲ್ಲಿ ಪಾವಿತ್ರ್ಯತೆ ಕಾಪಾಡುವುದು ಬೆಟ್ಟಕ್ಕೆ ಬರುವ ಜನತೆಯ ಜವಾಬ್ದಾರಿ ಎಂದರೆ ಅತಿಶಯೋಕ್ತಿಯಲ್ಲ. ಇನ್ನು ಮುಂದಾದರೂ ಸಂಬಂಧಪಟ್ಟವರು ಇಂತಹ ಪವಿತ್ರ ಸ್ಥಳಗಳ ಪಾವಿತ್ರ್ಯತೆ ಕಾಪಾಡಿಕೊಳ್ಳಲು ಕಠಿಣ ಕ್ರಮ ಕೈಗೊಳ್ಳುವುದು ಅತ್ಯಗತ್ಯ. **–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**

■ ಸಕಾಲಕ್ಕೆ ಬಸ್ ವ್ಯವಸ್ಥೆ ಕಲ್ಪಿಸಿ

ಮಾನ್ಯರೆ,

ನಾನು ಪದವಿ ವಿದ್ಯಾರ್ಥಿ. ಪ್ರತಿದಿನ ಜೆ.ಪಿ.ನಗರದ ಗೊಬ್ಬಳಿಮರ ತಂಗುದಾಣದಿಂದ ಕಾಲೇಜಿಗೆ ತೆರಳುತ್ತೇನೆ. ಬೆಳಿಗ್ಗೆ 8.30ರಿಂದ 9.30ರವರೆಗಿನ ಅವಧಿಯಲ್ಲಿ ಬಸ್ಸುಗಳ ಸಮಸ್ಯೆಯಿದೆ. ಗುರೂರಿಂದ ಬರುವ ಬಸ್ಸುಗಳು ಅಲ್ಲಿಂದಲೇ ಭರ್ತಿಯಾಗುವ ಕಾರಣ ಗೊಬ್ಬಳಿಮರ ತಂಗುದಾಣದಲ್ಲಿ ನಿಲುಗಡೆ ಮಾಡುತ್ತಿಲ್ಲ. ಇದರಿಂದ ಶಾಲಾ–ಕಾಲೇಜುಗಳಿಗೆ ಸಕಾಲಕ್ಕೆ ತೆರಳಲು ಸಾಧ್ಯವಾಗುತ್ತಿಲ್ಲ. ಸಂಬಂಧಪಟ್ಟ ನಗರಸಾರಿಗೆ ಅಧಿಕಾರಿಗಳು ಬೆಳಿಗ್ಗೆ 8.30ರಿಂದ 9 ಗಂಟೆ ಅವಧಿಯಲ್ಲಿ ಗೊಬ್ಬಳಿಮರ ತಂಗುದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ. **–ಕೆ.ಗಣೇಶ್‌ಕುಮಾರ್, ಮೈಸೂರು.**



ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಅರಿವು

ಕನಸು, ನನಸು ಮತ್ತು ವಯಸ್ಸು...!


ಕನಸು ಕಾಣಲು ವಯಸ್ಸಿನ ಮಿತಿ ಇದೆಯೇ? ಯಾವ ವಯಸ್ಸಿನಲ್ಲಾದರೂ ಕನಸು ಕಾಣಬಹುದೇ? ಕಂಡ ಕನಸನ್ನು ನನಸು ಮಾಡಲು ಏನು ಮಾಡಬೇಕು? ಎಂಬ ಪ್ರಶ್ನೆಗಳು ಕೆಲವರನ್ನು ಕಾಡುತ್ತಿರುತ್ತದೆ. ಇಲ್ಲಿ ಉಲ್ಲೇಖಿಸಿರುವುದು ರಾತ್ರಿ ನಿದ್ರೆಯಲ್ಲಿ ಕಾಣುವ ಕನಸುಗಳ ಕುರಿತಾಗಿ ಅಲ್ಲ ಅಥವಾ ಇಲ್ಲಸಲ್ಲದ ಊಹೆಗಳಿಂದ ಕೂಡಿದ ಹಗಲುಗನಸುಗಳ ಕುರಿತಾಗಿಯೂ ಅಲ್ಲ. ಬದುಕಿನಲ್ಲಿ ಏನಾದರೂ ಸಾಧಿಸಬೇಕು ಎಂಬ ಕನಸು. ಮನುಷ್ಯನಾಗಿ ಹುಟ್ಟಿದ ಮೇಲೆ ಸಾರ್ಥಕ ಜೀವನ ನಡೆಸಬೇಕೆಂಬ ಕನಸು, ಏನನ್ನಾದರೂ ಹೊಸತನ್ನು ಜಗತ್ತಿಗೆ ಕೊಡಬೇಕು ಎಂಬ ಹುಮ್ಮಸ್ಸಿನ ಕನಸು. ಈ ರೀತಿಯ ಕನಸುಗಳನ್ನು ಕಂಡ ಹಾಗೂ ಕಾಣುತ್ತಿರುವ ಕನಸುಗಾರರಿಂದಲೇ ಈ ಪ್ರಪಂಚ ಇಂದು ಇಷ್ಟು ಸುಂದರವಾಗಿ ನಿರ್ಮಾಣವಾಗಿರುವುದು.

'ಬೆಳಕಿಲ್ಲದ ದಾರಿಯಲ್ಲಿ ನಡೆಯಬಲ್ಲೆ, ಆದರೆ ಕನಸಿಲ್ಲದ ದಾರಿಯಲ್ಲಿ ನಡೆಯಲಾರೆ' ಎಂದು ಖ್ಯಾತ ಸಾಹಿತಿ ಶ್ರೀ ಗಿರೀಶ್ ಕಾರ್ನಾಡ್ ಅವರು ಹೇಳಿದ್ದಾರೆ. ಮನುಷ್ಯನಿಗೆ ಕನಸುಗಳೇ ಬದುಕಿನಲ್ಲಿ ಉತ್ಸಾಹ, ಉಲ್ಲಾಸ ವೃದ್ಧಿಸಿ ಕ್ರಿಯಾಶೀಲನನ್ನಾಗಿಸುವುದು. ಕನಸುಗಳೇ ಇಲ್ಲವಾದಲ್ಲಿ ಬದುಕು ನೀರಸ ಹಾಗೂ ನಿರರ್ಥಕ ಎನಿಸುತ್ತದೆ. ಕಂಡ ಒಂದು ಸಣ್ಣ ಕನಸು ಈಡೇರಿದಾಗ ಒಂದು ಸಾರ್ಥಕಭಾವ ಮೂಡುತ್ತದೆ. ಅದನ್ನು ಎಷ್ಟೇ ಹಣ ಕೊಟ್ಟರು ಗಳಿಸಲಾಗುವುದಿಲ್ಲ. ಕೆಲವರಿಗೆ ವೃತ್ತಿಯಲ್ಲಿ ಒಂದು ಗುರಿ ಮುಟ್ಟಬೇಕು ಎಂಬ ದೊಡ್ಡ ಕನಸು ಇದ್ದರೆ, ಮತ್ತೆ ಕೆಲವರಿಗೆ ಪ್ರವೃತ್ತಿಯಲ್ಲಿ ಏನಾದರೂ ಸಾಧಿಸಬೇಕೆಂಬ ಕನಸು ಇರುತ್ತದೆ. ವಿಜ್ಞಾನ, ಸಾಹಿತ್ಯ, ಸಂಗೀತ, ಕ್ರೀಡೆ....... ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಕನಸುಗಾರರಿದ್ದ ಕಾರಣಕ್ಕೆ ಈ ಭೂಮಿಯನ್ನು ಸುಂದರವಾಗಿಸುವ ಕಾಯಕದಲ್ಲಿ ಸಾಧಕರು ತೊಡಗಿದ್ದಾರೆ. ಹಾಗೆ ವಿಧ್ವಂಸಕ ಕೃತ್ಯವೂ ಸಹ ಒಬ್ಬ ಕೆಡುಕನ ಕನಸಾಗುವುದು ವಿಪರ್ಯಾಸದ ಸಂಗತಿ. ಏನೇ ಇರಲಿ ಮನುಷ್ಯನಿಗೆ ಬದುಕನ್ನು ಅರ್ಥಪೂರ್ಣವಾಗಿಸಲು, ಅಂತಿಮವಾಗಿ ಭೂಮಿ ಬಿಟ್ಟು ತೆರಳಬೇಕಾದರೆ ಏನನ್ನೂ ಒಯ್ಯಲಾಗದ ಮನುಷ್ಯ ಒಂದಷ್ಟು ಕನಸುಗಳನ್ನು ಈಡೇರಿಸಿಕೊಂಡ ಸಮಾಧಾನ ಹಾಗೂ ಸಂತೃಪ್ತಿಯಿಂದಲಾದರೂ ನೆಮ್ಮದಿಯಾಗಿ ತೆರಳಬಹುದು.

ಅನೇಕರು ಆಸೆಗಳನ್ನು ಕನಸುಗಳು ಎಂದು ತಪ್ಪಾಗಿ ಗ್ರಹಿಸುತ್ತಾರೆ. ಆಸೆಯಲ್ಲಿ ಸ್ವಾರ್ಥ ಹೆಚ್ಚಿನ ಪಾಲು ಇರುತ್ತದೆ. ಆಸೆ ಈಡೇರಿದಾಗ ದುರಾಸೆ ಹುಟ್ಟಬಹುದು. ಆದರೆ ಕನಸಿನ ವಿಚಾರದಲ್ಲಿ ಹಾಗಾಗದು, ಸಮಾಧಾನದ ಸ್ವಾರ್ಥ ಇದ್ದರೂ, ಅದು ದುರಾಸೆಗೆ ದೂಡುವುದಿಲ್ಲ. ಕನಸು ಈಡೇರಿದ ಮೇಲೆ ಒಂದು ಸಾರ್ಥಕತೆ ಅನುಭವಕ್ಕೆ ಬರುತ್ತದೆ. ಆ ಸಾರ್ಥಕತೆ ಕಾಣಲಿಕ್ಕಾದರೂ ಕನಸನ್ನು ಕಾಣಬೇಕು. ಕನಸುಗಳನ್ನು ವಯೋಮಾನಕ್ಕೆ ಅನುಗುಣವಾಗಿ ಕಾಣಬೇಕು ಎನ್ನುತ್ತಾರೆ. ಆದರೆ ಕೆಲವು ಇಳಿವಯಸ್ಸಿನ ಸಾಧಕರನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಇಷ್ಟು ಇಳಿವಯಸ್ಸಿನಲ್ಲಿ ಇದು ಸಾಧ್ಯವೇ ಎನಿಸುತ್ತದೆ. ತಮ್ಮ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಕ್ಕೆ ಸವಾಲೆನಿಸುವ ಸಾಧನೆಯನ್ನು ಮಾಡಿ ಖುಷಿ ಪಟ್ಟಿರುತ್ತಾರೆ. ಕನಸುಗಳಿಗೆ ವಯಸ್ಸನ್ನು ಮರೆಸುವ ಶಕ್ತಿಯಿದೆ. ಇಳಿವಯಸ್ಸಿನಲ್ಲಿಯೂ ಯುವಕರಂತೆ ಚಟುವಟಿಕೆಗಳಿಂದ ಇರುವಂತೆ ಮಾಡುವುದು ಕನಸುಗಳಿಗೆ ಸಾಧ್ಯವಿದೆ. 'ರಾತ್ರಿ ನಿದ್ರೆಯಲ್ಲಿ ಬರುವ ಕನಸುಗಳನ್ನು ಕಾಣಬೇಡಿ, ನಿದ್ರೆಯನ್ನು ತರಿಸದಂತೆ ಕನಸುಗಳನ್ನು ಕಾಣಿ' ವಿಜ್ಞಾನಿಗಳು ಹಾಗೂ ಮಾಜಿ ರಾಷ್ಟ್ರಪತಿಗಳಾದ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಈ ಮಾತು ಕನಸುಗಾರರಿಗೆ ಪ್ರೋತ್ಸಾಹ ನೀಡುತ್ತದೆ.

ವಯೋಮಾನಕ್ಕೆ ತಕ್ಕ ಹಾಗೆ ಕನಸುಗಳು ಇರುತ್ತವೆ ಎಂದು ಹೇಳಲಾಗುತ್ತದೆ. ಮಕ್ಕಳ ಕನಸುಗಳೇ ಬೇರೆ, ಯುವಕರ ಕನಸುಗಳೇ ಬೇರೆ, ವಯಸ್ಸಾದವರ ಕನಸುಗಳೇ ಬೇರೆಯಾಗಿರುತ್ತವೆ ಎಂದು ವಿಶ್ಲೇಷಿಸಲಾಗುತ್ತದೆ. 'ಕನಸನ್ನು ಕಾಣುವುದಾದರೆ ದೊಡ್ಡ ಕನಸನ್ನು ಕಾಣು, ಬೇರೆಯವರು ನಗುವಂತಹ ಕನಸನ್ನು ಕಾಣು' ಎಂದು ಮಹಾತ್ಮರೊಬ್ಬರು ಹೇಳಿದ್ದಾರೆ. ಅಂತಹ ಕನಸನ್ನು ಚೆಸ್ ಚಾಂಪಿಯನ್ ಶ್ರೀ ಗುಕೇಶ್ ಅವರು ಕಂಡಿದ್ದರು. ಅವರಿಗೆ ಬಾಲ್ಯದಲ್ಲಿ ಮಾಧ್ಯಮದವರು ಮುಂದಿನ ನಿಮ್ಮ ಕನಸು ಏನು ಎಂದು ಕೇಳಿದಾಗ 'ನಾನು ವಿಶ್ವದ ಅತ್ಯಂತ ಕಿರಿಯ ಚೆಸ್ ಚಾಂಪಿಯನ್ ಆಗಬೇಕು' ಎಂದು ಹೇಳಿರುತ್ತಾರೆ. ಈ ಮಾತನ್ನು ಕೇಳಿದ ಅನೇಕರು ಅಂದು ನಕ್ಕಿರಬಹುದು. ಆದರೆ ಅದನ್ನು ಅವರು ಹಗಲು –ರಾತ್ರಿ ಎನ್ನದೆ ಪರಿಶ್ರಮಪಟ್ಟು ತಮ್ಮ ಪೋಷಕರ ಪ್ರೋತ್ಸಾಹದಿಂದ ಈಡೇರಿಸಿಕೊಂಡರು. ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ಹಾಗೂ ಯುವಕರಿಗೆ ತಮ್ಮ ಕನಸುಗಳನ್ನು ನನಸು ಮಾಡಿಕೊಳ್ಳಲು ಅನೇಕ ಅವಕಾಶಗಳಿವೆ, ಸೌಲಭ್ಯಗಳಿವೆ, ಅದೇ ರೀತಿ ಒತ್ತಾಸೆಯಾಗಿ ನಿಲ್ಲುವ ಪೋಷಕರು ಇದ್ದಾರೆ. ಆದರೆ ಅನೇಕ ಮಕ್ಕಳು ಹಾಗೂ ಯುವಕರು ಭವ್ಯವಾದ ಹಾಗೂ ದಿವ್ಯವಾದ ಕನಸುಗಳನ್ನು ಕಟ್ಟಿಕೊಳ್ಳವಲ್ಲಿ ಸೋಲುತ್ತಿದ್ದಾರೆ. ಅವರ ಕನಸುಗಳೆಲ್ಲಾ ಸಂಬಳಕ್ಕೆ ಒಂದು ಕೆಲಸ, ದುಬಾರಿ ಬೆಲೆ ಒಂದು ಫೋನ್, ಓಡಾಡಲು ಬೈಕ್ ಹಾಗೂ ಕಾರು ಇಷ್ಟಕ್ಕೆ ಸೀಮಿತವಾಗುತ್ತಿರುವುದು ವಿಪರ್ಯಾಸದ ಸಂಗತಿ.

ಸಾಧನೆ ಮಾಡಲು ಎಲ್ಲಾ ಅವಕಾಶಗಳಿದ್ದರೂ ಕನಸು ಕಟ್ಟಿಕೊಳ್ಳುವಲ್ಲಿಯೇ ಎಡವುತ್ತಿದ್ದಾರೆ. ನೀವು ಬದುಕಿನಲ್ಲಿ ಏನಾಗಬೇಕು ಎಂದು ಶಾಲಾ–ಕಾಲೇಜಿನ ಮಕ್ಕಳನ್ನು ಕೇಳಿದರೆ, ಬಹುಪಾಲು ಜನಕ್ಕೆ ಸ್ಪಷ್ಟತೆ ಇಲ್ಲ, ಕೆಲವರು ಆಸೆಗಳನ್ನೇ ಕನಸುಗಳಂತೆ ಹೇಳುತ್ತಾರೆ. ಕೆಲವರಿಗೆ ದೊಡ್ಡ ಸಾಧನೆ ಮಾಡಬೇಕೆಂಬ ಕನಸ್ಸಿದ್ದರೂ ಅದಕ್ಕೆ ಸಿದ್ಧತೆಯನ್ನೇ ಮಾಡದೇ ಕೇವಲ ಹಗಲುಗನಸು ಕಾಣುತ್ತಿರುವುದನ್ನು ಕಾಣಬಹುದು. ಎಲ್ಲಾ ಅವಕಾಶಗಳನ್ನು ಕೈಚೆಲ್ಲಿ ನನ್ನ ಕನಸು ಭಗ್ನವಾಗಲು ಅವರು ಕಾರಣ, ಅದು–ಇದು ಕಾರಣ ಎಂದು ದೂರುತ್ತಾ ನಿರರ್ಥಕ ಬದುಕನ್ನು ದೂಡುತ್ತಿರುವುದನ್ನು ಗಮನಿಸಬಹುದು.



ಅತ್ಯಂತ ಹಿರಿಯ ಮ್ಯಾರಥಾನ್ ಓಟಗಾರ ಶ್ರೀ ಫೌಜಾ ಸಿಂಗ್ 114 ವರ್ಷ

ಭಾರತದ ರಿಲೆಯನ್ಸ್ ಕಂಪನಿ, ಟಾಟಾ ಕಂಪನಿ, ವಿಆರ್‌ಎಲ್ ಸಾರಿಗೆ ಸಂಸ್ಥೆಯ ಸ್ಥಾಪಕರು ಯಶಸ್ವಿ ಉದ್ದಿಮೆದಾರರಾಗಿ ರೂಪುಗೊಂಡಿದ್ದು ಅವರು ಕಂಡ ಕನಸುಗಳಿಂದಲೆ. ಭಾರತದಲ್ಲಿ ಇಂದಿಗೂ ಸಾವಿರಾರು ಸ್ಟಾರ್ಟ್‌ಅಪ್ ಕಂಪನಿಗಳು ಸಹ ಅನೇಕ ಕನಸುಗಾರರ ಕೂಸುಗಳೆ. ಮನಸ್ಸಿದ್ದರೆ ಮಾರ್ಗ ಎನ್ನುವ ಹಾಗೆ ಇಂದಿನ ಯುವ ಸಮೂಹ ಬೈಕ್, ಕಾರ್, ಮೊಬೈಲ್ ಫೋನ್ ಖರೀದಿಸಬೇಕೆಂಬ ಸಣ್ಣ ಸಣ್ಣ ಆಸೆಗಳನ್ನು ಕೈಬಿಟ್ಟು, ದೂರದೃಷ್ಟಿಯಿಂದ ದೊಡ್ಡ ದೊಡ್ಡ ಕನಸನ್ನು ಕಟ್ಟಿಕೊಂಡರೆ, ಸತತ ಪ್ರಯತ್ನ ಹಾಗೂ ಪರಿಶ್ರಮದಿಂದ ಅವುಗಳನ್ನು ಬೆನ್ನು ಹತ್ತಿದರೆ ಕನಸುಗಳು ನನಸಾಗುವುದರಲ್ಲಿ ಅನುಮಾನವೇ ಇಲ್ಲ. ಅನೇಕರು ಕನಸು ಕಾಣುವುದರಲ್ಲೇ ಎಡವುತ್ತಿದ್ದಾರೆ. ಯೌವನದ ದಿನಗಳಲ್ಲಿ ವೃಥಾ ಕಾಲಹರಣ ಮಾಡಿ ವಯಸ್ಸಾದ ಮೇಲೆ ಏನೂ ಸಾಧಿಸಲಿಲ್ಲವಲ್ಲ ಎಂದು ಪರಿತಪಿಸಿ ಪಶ್ಚಾತ್ತಾಪಪಡುತ್ತಿದ್ದಾರೆ. ಇನ್ನು ಕೆಲವು ಯುವಕರು ಅಪ್ಪ ಅಮ್ಮನ ಹಣದಲ್ಲಿ ಇಲ್ಲಸಲ್ಲದ ಚಟಕ್ಕೆ ದಾಸರಾಗಿ ತಮ್ಮ ದೈಹಿಕ ಶಕ್ತಿ ಹಾಗೂ ಮಾನಸಿಕ ಸ್ಥಿರತೆಯನ್ನೇ ಹಾಳು ಮಾಡಿಕೊಂಡು ಮನೆಗೆ ಮಾರಿಯಾಗಿ, ದೇಶಕ್ಕೆ ಹೊರೆಯಾಗಿ ಬದುಕುತ್ತಿದ್ದಾರೆ.

ಪ್ರಪಂಚದ ಅತ್ಯಂತ ಹಿರಿಯ ಮ್ಯಾರಥಾನ್ ಓಟಗಾರರಾಗಿದ್ದ ಶ್ರೀ ಫೌಜಾ ಸಿಂಗ್ ಅವರು ತಮ್ಮ 114ನೇ ವಯಸ್ಸಿನಲ್ಲಿ ಇತ್ತೀಚೆಗೆ ಅಪಘಾತದಲ್ಲಿ ಮೃತಹೊಂದಿದರು. ಅವರು ಮ್ಯಾರಥಾನ್ ಓಟಗಾರರಾಗಬೇಕೆಂಬ ಕನಸು ಕಟ್ಟಿಕೊಂಡಿದ್ದು 89ನೇ ವಯಸ್ಸಿನಲ್ಲಿ. ಮನುಷ್ಯನಿಗೆ ಆ ವಯಸ್ಸಿನಲ್ಲಿ ಕನಸೊಂದನ್ನು ಕಂಡು ನನಸು ಮಾಡಿಕೊಳ್ಳಲು ಅವರಿಗಿದ್ದ ದೃಢಸಂಕಲ್ಪ, ಪರಿಶ್ರಮ, ಅಭ್ಯಾಸ ಎಷ್ಟಿರಬೇಡ ಹೇಳಿ? ಅನೇಕ ಯುವಕರು ಯಾವುದೇ ಕನಸನ್ನು ಕಾಣದೆ, ಸತತ ಪ್ರಯತ್ನ ಮಾಡದೆ ಮಾನವ ಜನ್ಮವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಫೌಜಾ ಸಿಂಗ್ ಅವರ ರೀತಿಯಲ್ಲಿಯೇ ಇಳಿವಯಸ್ಸಿನಲ್ಲಿ ಕನಸು ಕಂಡು ಈಡೇರಿಸಿಕೊಂಡವರ ಒಂದು ದೊಡ್ಡ ಪಟ್ಟಿಯೇ ಇದೆ.

ಭಾರತದ ಖ್ಯಾತ ಬರಹಗಾರ ಖುಷವಂತ್ ಸಿಂಗ್ ಅವರು ಲೇಖಕರಾಗಲು ಬಯಸಿದ್ದು ತಮ್ಮ 45 ವಯಸ್ಸಿನ ನಂತರ. ವಕೀಲರಾಗಿದ್ದ ಅವರು ತಮ್ಮ ವೃತ್ತಿಯಿಂದ ಮುಕ್ತಿ ಬಯಸಿ ತಮ್ಮ ಅನುಭವ ಹಾಗೂ ಕೌಶಲದಿಂದ ಜನಪ್ರಿಯ ಪತ್ರಕರ್ತರಾಗಿ ಹಾಗೂ ಲೇಖಕರಾಗಿ ರೂಪುಗೊಳ್ಳುತ್ತಾರೆ. ಅವರು ತಮ್ಮ 99ನೇ ವಯಸ್ಸಿನಲ್ಲಿ ನಿಧನ ಹೊಂದುತ್ತಾರೆ. 'ಟ್ರೈನ್ ಟು ಪಾಕಿಸ್ತಾನ್' ಅವರ ಜನಪ್ರಿಯ ಕೃತಿ. ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಕೂಡ ಲಭಿಸುತ್ತದೆ. ಕರ್ನಲ್ ಹರ್ಲ್ಯಾಂಡ್ ಸ್ಯಾಂಡರ್ಸ್ ವಿವಿಧ ವ್ಯಾಪಾರಗಳಲ್ಲಿ ಹಲವು ಬಾರಿ ಸೋಲು ಕಂಡ ನಂತರ ವಿಶಿಷ್ಟ ರೆಸಿಪಿ ಹೊಂದಿದ ಕೆಎಫ್‌ಸಿ (ಕೆಂಟಕಿ ಫ್ರೈಡ್ ಚಿಕನ್) ಪ್ರಾರಂಭಿಸಿದ್ದು 40ನೇ ವಯಸ್ಸಿನಲ್ಲಿ, ರಸ್ತೆ ಬದಿಯಲ್ಲಿ ವ್ಯಾಪಾರ ಶುರು ಮಾಡಿದ ಕೆಎಫ್‌ಸಿಯ ರುಚಿ ಅನೇಕರನ್ನು ಸೆಳೆಯುತ್ತದೆ. 62ನೇ ವಯಸ್ಸಿನಲ್ಲಿ ಫ್ರಾಂಚೈಸಿ ನೀಡಲು ಶುರು ಮಾಡುತ್ತಾರೆ. ಇಂದು 30,000 ಕೆಎಫ್‌ಸಿ ರೆಸ್ಟೋರೆಂಟ್‌ಗಳು ಪ್ರಪಂಚದಾದ್ಯಂತ ಹರಡಿವೆ. ಸ್ಯಾಂಡರ್ಸ್ ತಮ್ಮ 90ನೇ ವಯಸ್ಸಿನಲ್ಲಿ ನಿಧನ ಹೊಂದುತ್ತಾರೆ.

ವಿದ್ಯುತ್ ಬಲ್ಬ್, ಬೈಸಿಕಲ್, ರೇಡಿಯೋ, ಟಿ.ವಿ., ವಿಮಾನ, ರ್‍ಯಾಕೆಟ್, ಕಂಪ್ಯೂಟರ್, ಮೊಬೈಲ್, ಚಂದ್ರಯಾನ, ಮಂಗಳಯಾನ...... ಹೀಗೆ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಆದ ಸಾಧನೆಗಳು ಕನಸುಗಾರರಿಂದಲೇ ಸಾಧ್ಯವಾಗಿರುವುದು. ಭಾರತದ ರಿಲೆಯನ್ಸ್ ಕಂಪನಿ, ಟಾಟಾ ಕಂಪನಿ, ವಿಆರ್‌ಎಲ್ ಸಾರಿಗೆ ಸಂಸ್ಥೆಯ ಸ್ಥಾಪಕರು ಯಶಸ್ವಿ ಉದ್ದಿಮೆದಾರರಾಗಿ ರೂಪುಗೊಂಡಿದ್ದು ಅವರ ಕಂಡ ಕನಸುಗಳಿಂದಲೆ. ಭಾರತದಲ್ಲಿ ಇಂದಿಗೂ ಸಾವಿರಾರು ಸ್ಟಾರ್ಟ್‌ಅಪ್ ಕಂಪನಿಗಳು ಸಹ ಅನೇಕ ಕನಸುಗಾರರ ಕೂಸುಗಳೆ. ಮನಸ್ಸಿದ್ದರೆ ಮಾರ್ಗ ಎನ್ನುವ ಹಾಗೆ ಇಂದಿನ ಯುವ ಸಮೂಹ ಬೈಕ್, ಕಾರ್, ಮೊಬೈಲ್ ಫೋನ್ ಖರೀದಿಸಬೇಕೆಂಬ ಸಣ್ಣ ಸಣ್ಣ ಆಸೆಗಳನ್ನು ಕೈಬಿಟ್ಟು, ದೂರದೃಷ್ಟಿಯಿಂದ ದೊಡ್ಡ ದೊಡ್ಡ ಕನಸನ್ನು ಕಟ್ಟಿಕೊಂಡರೆ, ಸತತ ಪ್ರಯತ್ನ ಹಾಗೂ ಪರಿಶ್ರಮದಿಂದ ಅವುಗಳನ್ನು ಬೆನ್ನು ಹತ್ತಿದರೆ ಕನಸುಗಳು ನನಸಾಗುವುದರಲ್ಲಿ ಅನುಮಾನವೇ ಇಲ್ಲ. ಅನೇಕರು ಕನಸು ಕಾಣುವುದರಲ್ಲೇ ಎಡವುತ್ತಿದ್ದಾರೆ. ಯೌವನದ ದಿನಗಳಲ್ಲಿ ವೃಥಾ ಕಾಲಹರಣ ಮಾಡಿ ವಯಸ್ಸಾದ ಮೇಲೆ ಏನೂ ಸಾಧಿಸಲಿಲ್ಲವಲ್ಲ ಎಂದು ಪರಿತಪಿಸಿ ಪಶ್ಚಾತ್ತಾಪಪಡುತ್ತಿದ್ದಾರೆ. ಇನ್ನು ಕೆಲವು ಯುವಕರು ಅಪ್ಪ ಅಮ್ಮನ ಹಣದಲ್ಲಿ ಇಲ್ಲಸಲ್ಲದ ಚಟಕ್ಕೆ ದಾಸರಾಗಿ ತಮ್ಮ ದೈಹಿಕ ಶಕ್ತಿ ಹಾಗೂ ಮಾನಸಿಕ ಸ್ಥಿರತೆಯನ್ನೇ ಹಾಳು ಮಾಡಿಕೊಂಡು ಮನೆಗೆ ಮಾರಿಯಾಗಿ, ದೇಶಕ್ಕೆ ಹೊರೆಯಾಗಿ ಬದುಕುತ್ತಿದ್ದಾರೆ.

ಪುಟ್ಟ ದೇಶಗಳಾದ ಜಪಾನ್ ಹಾಗೂ ಸಿಂಗಾಪುರ್ ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವುದಲ್ಲದೇ ಇಡೀ ದೇಶದಲ್ಲಿ ಸ್ವಚ್ಛ ಸಂಸ್ಕೃತಿಯನ್ನು ಪಾಲಿಸುತ್ತಿರುವುದು ಅಲ್ಲಿನ ಪ್ರಜೆಗಳ ಕನಸುಗಳಿಂದ ಎಂಬುದನ್ನು ಮರೆಯಬಾರದು. ಯುವಕರು ಮನಸ್ಸು ಮಾಡಿದರೆ ದೇಶದ ಚಿತ್ರಣವನ್ನೇ ಬದಲಿಸಬಹುದು. ನಮ್ಮ ಸರ್ಕಾರಗಳು ಸಹ ಯುವಕರ ಕನಸಿಗೆ ನೀರೆರೆಯುವ ಕೆಲಸ ಮಾಡಬೇಕು. ನಮ್ಮ ದೇಶದ ಯುವಕರಿಗೆ ನಮ್ಮ ದೇಶದ ಆಡಳಿತ ವ್ಯವಸ್ಥೆಯ ಮೇಲೆ ಅಭಿಮಾನ ಮೂಡುವಂತಹ ನೀತಿನಿಯಮಾವಳಿಗಳನ್ನು ರೂಪಿಸಬೇಕು. ಅನೇಕ ವಿದ್ಯಾವಂತ, ಬುದ್ಧಿವಂತ ಯುವಕರ ಪ್ರತಿಭಾ ಪಲಾಯನವಾಗುತ್ತಿದೆ. ನಮ್ಮ ದೇಶದಲ್ಲಿ ಉತ್ತಮ ಶಿಕ್ಷಣ ಪಡೆದು, ತಮ್ಮ ಕನಸುಗಳನ್ನು ಬೇರೆಯದೇ ದೇಶದಲ್ಲಿ ಈಡೇರಿಸಿಕೊಳ್ಳುತ್ತಿದ್ದಾರೆ.

ವಿದ್ಯಾರ್ಥಿ ದೆಸೆಯಲ್ಲಿಯೇ ಕನಸನ್ನು ಕಾಣಬೇಕು. ದೊಡ್ಡ ಕನಸುಗಳ ಜೊತೆಗೆ ಸಣ್ಣ ಸಣ್ಣ ಕನಸುಗಳನ್ನು ಸಹ ಈಡೇರಿಸಿಕೊಳ್ಳಬೇಕು. ತಮ್ಮ ಕನಸಿನ ಚಿತ್ರ ಅಥವಾ ಬರಹವನ್ನು ತಮ್ಮ ಮನೆಯಲ್ಲಿನ ಕೊಠಡಿಯ ಗೋಡೆ ಮೇಲೆ ಅಂಟಿಸಿಕೊಂಡು ನಿತ್ಯವೂ ಧ್ಯಾನಿಸಬೇಕು. ಕನಸಿಗೆ ಕಾವನ್ನು ಕೊಡುತ್ತಿರಬೇಕು. ಕನಸುಗಳನ್ನು ಕಾಪಿ ಮಾಡಬಾರದು. ಸೃಷ್ಟಿಯೇ ಪ್ರತಿಯೊಬ್ಬ ಮನುಷ್ಯನನ್ನು ಭಿನ್ನವಾಗಿ ರೂಪಿಸಿರಬೇಕಾದರೆ ನಾವೇಕೆ ಭಿನ್ನ ಭಿನ್ನ ಕನಸನ್ನು ಕಾಣಬಾರದು, ಈಡೇರಿಸಿಕೊಳ್ಳಬಾರದು?. ಕನಸುಗಾರರಿಗೆ ಆಲ್ ದ ಬೆಸ್ಟ್ !

ಹೂರಣ: ಕನಸು ಕಾಣಲು ಕಾಸು ಕೊಡಬೇಕಿಲ್ಲ, ಕನಸು ಈಡೇರಿದರೆ ಬರುವ ಕಾಸಿಗೆ ಲೆಕ್ಕವೇ ಇಲ್ಲ.

ಮಾನಸಿಕ, ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಗಮನಹರಿಸಬೇಕು

ಸದ್ಗುರು ಶ್ರೀರಾಮ ಗುರೂಜಿ ಸಲಹೆ



ಮೈಸೂರಿನ ಶಿವಾನಂದ ಜ್ಞಾನಾಲಯದಲ್ಲಿ ಪರಮಹಂಸ ಯೋಗ ಮಹಾವಿದ್ಯಾಲಯದ ವತಿಯಿಂದ ಆಯೋಜಿಸಿದ್ದ ಕುಂಡಲಿನಿ ಶಕ್ತಿಯ ಜಾಗೃತಿಯಿಂದ ಆತ್ಮದ ಬೆಳಕು ಕಾಣುವ ದಿವ್ಯೋಪನ್ಯಾಸ, ಅಂತರಶಾಲಾ ಚಿತ್ರಕಲಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭವನ್ನು ಬೆಂಗಳೂರಿನ ಉಪಾಸನ ಫೌಂಡೇಷನ್ ಸಂಸ್ಥಾಪಕ ಸದ್ಗುರು ಶ್ರೀರಾಮ ಗುರೂಜಿ ಉದ್ಘಾಟಿಸಿದರು.

ಮೈಸೂರು,ಜು.27(ಎಂಟಿವೈ)– ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಬಿಪಿ, ಶುಗರ್, ಹೃದಯ ಸಂಬಂಧಿ ರೋಗ ಹೆಚ್ಚಾಗುತ್ತಿದ್ದು, ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಗಮನ ಹರಿಸಬೇಕು ಎಂದು ಬೆಂಗಳೂರಿನ ಉಪಾಸನ ಫೌಂಡೇಷನ್ ಸಂಸ್ಥಾಪಕ ಸದ್ಗುರು ಶ್ರೀರಾಮ ಗುರೂಜಿ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಶಿವಾನಂದ ಜ್ಞಾನಾಲಯದಲ್ಲಿ ಪರಮಹಂಸ ಯೋಗ ಮಹಾವಿದ್ಯಾಲಯದ ವತಿಯಿಂದ ಆಯೋಜಿಸಿದ್ದ ಕುಂಡಲಿನಿ ಶಕ್ತಿಯ ಜಾಗೃತಿಯಿಂದ ಆತ್ಮದ ಬೆಳಕು ಕಾಣುವ ದಿವ್ಯೋಪನ್ಯಾಸ, ಅಂತರಶಾಲಾ ಚಿತ್ರಕಲಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರ ಜೀವನವೂ ಉತ್ಸಾಹ, ಆನಂದದಿಂದ ಕೂಡಿರಬೇಕು. ಆದರೆ, ಇತ್ತೀಚೆಗೆ ಜನರಲ್ಲಿ ಅನಾರೋಗ್ಯ ಹೆಚ್ಚಾಗಿ ಕಾಡುತ್ತಿದೆ. ಬಿಪಿ, ಶುಗರ್, ಹೃದಯ ಸಂಬಂಧಿ ರೋಗಗಳ ಬಾಧೆಗೆ ಒಳಗಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮಾನಸಿಕ ಆರೋಗ್ಯದೊಂದಿಗೆ ದೈಹಿಕ ಆರೋಗ್ಯ ಕಾಪಾಡಿಕೊಳ್ಳಬೇಕು. ಯಾವುದೇ ಸಾಧನೆ ಮಾಡಬೇಕಾದರೂ ಭಾವನೆ ಪ್ರಮುಖ ಪಾತ್ರವಹಿಸುತ್ತದೆ. ಆದ್ದರಿಂದ ನಮ್ಮ ಮನಸ್ಥಿತಿ ಸಕಾರಾತ್ಮಕವಾಗಿಯೂ, ವಿಶಾಲ, ವಿಸ್ತಾರ ಮನೋಭಾವದಿಂದ ಕೂಡಿರಬೇಕು ಎಂದರು.

ಪ್ರಸ್ತುತ ಸಂದರ್ಭದಲ್ಲಿ ಎಲ್ಲಾ ರೀತಿಯ ಸಂಬಂಧಗಳು ಹಾಳಾಗುತ್ತಿವೆ. ಮೊಬೈಲ್‌ನ ಸಿಮ್ ಕಾರ್ಡ್ ಬದಲಿಸಿದಷ್ಟೇ ಸುಲಭವಾಗಿ ಸಂಬಂಧಗಳನ್ನು ಬದಲಿಸಲಾಗುತ್ತಿದೆ. ಕೇವಲ ಹಣದಿಂದಲೇ ಎಲ್ಲವೂ ಆಗುವುದಿಲ್ಲ. ನಮ್ಮ ಒಳಗಿನ ಶಕ್ತಿಯನ್ನು ಜಾಗೃತಗೊಳಿಸುವ ಕೆಲಸ ಆಗಬೇಕು. ಆಗ ಮಾತ್ರ ಜೀವನವನ್ನು ನೋಡುವ, ಅನುಭವಿಸುವ ಆನಂದ ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು.


ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸುಯೋಗ್ ಆಸ್ಪತ್ರೆ ಸಂಸ್ಥಾಪಕ ಡಾ.ಎಸ್.ಪಿ. ಯೋಗಣ್ಣ ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ.ದೇವರಾಜ್, ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಸ್ಪೋರ್ಟ್ಸ್ ಅಸೋಸಿಯೇಷನ್ ಹಾಗೂ ಜಿಲ್ಲಾ ಯೋಗ ಸ್ಪೋರ್ಟ್ಸ್ ಫೌಂಡೇಷನ್ ಅಧ್ಯಕ್ಷ ಪಿ.ಎನ್.ಗಣೇಶಕುಮಾರ್, ಮೈಸೂರು ಯೋಗ ಅಸೋಸಿಯೇಷನ್ ಕಾರ್ಯದರ್ಶಿ ಎನ್.ಅನಂತ, ಡಾ.ಲಕ್ಷ್ಮೀ ಶ್ರೀನಿವಾಸ್ ಗುರೂಜಿ ಗೋಶಾಲೆ ಸಂಸ್ಥಾಪಕ ಸುಂದರ್, ರೇಖಿ ಮಾಸ್ಟರ್ ಎಂ.ಆರ್. ಮುರಳೀಧರ್, ಪತಂಜಲಿ ಯೋಗ ಸಮಿತಿ ಕಾರ್ಯದರ್ಶಿ ಎಸ್. ಶಶಿಕುಮಾರ್ ಪಾಲ್ಗೊಂಡಿದ್ದರು. ಇದೇ ವೇಳೆ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಪ್ರಥಮ ಪಿಯುಸಿ ದಾಖಲಾತಿ ದಿನಾಂಕ ವಿಸ್ತರಣೆ

ಬೆಂಗಳೂರು: ಪದವಿ ಪೂರ್ವ ಶಿಕ್ಷಣ ಇಲಾಖೆಯು ಪ್ರಥಮ ಪಿಯುಸಿ ದಾಖಲಾತಿ ದಿನಾಂಕವನ್ನು ವಿಸ್ತರಣೆ ಮಾಡಿದೆ.

ಪ್ರಥಮ ಪಿಯುಸಿ ದಾಖಲಾತಿ ದಿನಾಂಕವನ್ನು ದಂಡ ಶುಲ್ಕ ಮತ್ತು ವಿಶೇಷ ದಂಡ ಶುಲ್ಕದೊಂದಿಗೆ ಜು.31ರವರೆಗೆ ವಿಸ್ತರಣೆ ಮಾಡಲಾಗಿದೆ. ಈ ಮೂಲಕ ವಿದ್ಯಾರ್ಥಿಗಳು ದಂಡ ಶುಲ್ಕ 670 ರೂ. + ವಿಶೇಷ ದಂಡ ಶುಲ್ಕ 2,220 ರೂ. ಸೇರಿ ಒಟ್ಟು 2,890 ರೂ. ಪಾವತಿ ಮಾಡಿ ದಾಖಲಾಗಬಹುದು. ಇತ್ತೀಚಿಗಷ್ಟೇ ಜು.23ರಂದು ಎಸ್‌ಎಸ್‌ಎಲ್‌ಸಿ ಪರೀಕ್ಷೆ 3ರ ಫಲಿತಾಂಶ ಪ್ರಕಟವಾಗಿತ್ತು. 42,085 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಈ ಹಿನ್ನೆಲೆ ಪದವಿ ಪೂರ್ವ ಶಿಕ್ಷಣ ಇಲಾಖೆಯು ದಾಖಲಾತಿ ದಿನಾಂಕವನ್ನು ವಿಸ್ತರಣೆ ಮಾಡಿದೆ.

ಎಸ್.ಸುಜಾತಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಆರ್. ತಿಮ್ಮರಾಯಪ್ಪ ಮಾರ್ಗದರ್ಶನದಲ್ಲಿ ಎಸ್.ಸುಜಾತ ವಾಣಿಜ್ಯ ಶಾಸ್ತ್ರ ವಿಷಯದಲ್ಲಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಸೋಮವಾರ 28 ಜುಲೈ 2025

ಕೇಂದ್ರ ಎನ್‌ಡಿಎ ಸರ್ಕಾರದ ಜನ ಜಾತಿಗಣತಿ ಐತಿಹಾಸಿಕ ನಿರ್ಧಾರ

ಬಿಜೆಪಿ ರಾಷ್ಟ್ರೀಯ ಒಬಿಸಿ ಮೋರ್ಚಾ ಅಧ್ಯಕ್ಷ ಡಾ.ಕೆ.ಲಕ್ಷ್ಮಣ್ ಅಭಿಮತ



ಬಿಜೆಪಿ ರಾಷ್ಟ್ರೀಯ ಒಬಿಸಿ ಮೋರ್ಚಾ ಅಧ್ಯಕ್ಷ ಡಾ.ಕೆ. ಲಕ್ಷ್ಮಣ್, ಬಿಜೆಪಿ ಮೈಸೂರು ನಗರ ಮತ್ತು ಗ್ರಾಮಾಂತರ ಕಚೇರಿಗೆ ಭೇಟಿ ನೀಡಿದ್ದ ವೇಳೆ ಸನ್ಮಾನಿಸಲಾಯಿತು.

ಮೈಸೂರು,ಜು.27(ಎಸ್‌ಪಿಎನ್)– ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಜನ ಜಾತಿ ಗಣತಿ ಮಾಡಲು ತೀರ್ಮಾನಿಸಿರುವುದು ಐತಿಹಾಸಿಕ ತೀರ್ಮಾನ ಎಂದು ಬಿಜೆಪಿ ರಾಷ್ಟ್ರೀಯ ಒಬಿಸಿ ಮೋರ್ಚಾ ಅಧ್ಯಕ್ಷ ಡಾ.ಕೆ.ಲಕ್ಷ್ಮಣ್ ಅಭಿಪ್ರಾಯಪಟ್ಟರು.

ಮೈಸೂರು ಚಾಮರಾಜಪುರಂನಲ್ಲಿರುವ ಬಿಜೆಪಿ ಮೈಸೂರು ನಗರ ಮತ್ತು ಗ್ರಾಮಾಂತರ ಕಚೇರಿಗೆ ಭೇಟಿ ನೀಡಿ, ಕಾರ್ಯಕರ್ತರೊಂದಿಗೆ ಮಾತುಕತೆ ನಡೆಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹಿಂದುಳಿದ ವರ್ಗದ ಜನರು ರಾಜ್ಯದಲ್ಲಿ ಸಂಘಟನೆಯಾಗಬೇಕು. ಇಲ್ಲದಿದ್ದರೆ, ರಾಜಕೀಯವಾಗಿ ಯಾವುದೇ ಸ್ಥಾನಮಾನ ಸಿಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಅತೀ ಸಣ್ಣ ಹಿಂದುಳಿದ ವರ್ಗಕ್ಕೆ ಸೇರಿದ ನರೇಂದ್ರ ಮೋದಿ, ದೇಶದ ಅಧಿಕಾರ ಚುಕ್ಕಾಣಿ ಹಿಡಿಯಲು ಬಿಜೆಪಿಯೇ ಕಾರಣ. ಸ್ವಾತಂತ್ರ್ಯ ಬಂದ ನಂತರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಕಾಂಗ್ರೆಸ್ ಏನನ್ನು ಮಾಡಿಲ್ಲ. ಹಾಗಾಗಿ ಸಣ್ಣಸಣ್ಣ ಸಮುದಾಯಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಯಾವುದೇ ಕೊಡುಗೆ ನೀಡಿಲ್ಲ ಎಂದು ಆರೋಪಿಸಿದರು.

ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಒಬಿಸಿ ಮತದಾರರು ಬಿಜೆಪಿ ಬೆಂಬಲಿಸುವಂತೆ ಮಾಡಲು ಎಲ್ಲರೂ(ಕಾರ್ಯಕರ್ತರು) ಬೂತ್ ಮಟ್ಟದಲ್ಲಿ ಸಂಘಟನೆ ಮಾಡಬೇಕು. ದೇಶದ ವಿವಿಧ ರಾಜ್ಯಗಳಲ್ಲಿ ಕಾಂಗ್ರೆಸ್ ಹಿಂದೂ ವಿರೋಧಿ ನಿಲುವು ಪ್ರದರ್ಶಿಸಿ, ಜನರಿಂದ ತಿರಸ್ಕಾರವಾಗುತ್ತಿದೆ. ಇದರ ಪ್ರಯೋಜನ ಬಿಜೆಪಿ ಪಡೆದುಕೊಳ್ಳಲು ಪ್ರಯತ್ನಿಸಬೇಕು ಎಂದು ಕಾರ್ಯಕರ್ತರಿಗೆ ಸಲಹೆ ನೀಡಿದರು.

ಬಿಜೆಪಿ ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ರಘು ಆರ್.ಕೌಟಿಲ್ಯ ಮಾತನಾಡಿ, ಕೇಂದ್ರ ಸರ್ಕಾರ ನಡೆಸುವ ಜನ ಜಾತಿ ಗಣತಿಯನ್ನು ಒಪ್ಪದೆ ರಾಜ್ಯ ಸರ್ಕಾರ ಪ್ರತ್ಯೇಕವಾದ ಜಾತಿ ಗಣತಿ ನಡೆಸುವುದು ಅನವಶ್ಯಕ. ಕೇಂದ್ರ ಸರ್ಕಾರ ವೈಜ್ಞಾನಿಕ ರೀತಿಯಲ್ಲಿ ನಡೆಸುವ ಜಾತಿ ಜನ ಗಣತಿಯನ್ನು ರಾಜ್ಯ ಸರ್ಕಾರ ಒಪ್ಪಬೇಕು ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರ ನಡೆಸುವ ಜನ ಜಾತಿ ಗಣತಿಗೆ ಸಂವಿಧಾನಾತ್ಮಕ ಮಾನ್ಯತೆ ಇರುತ್ತದೆ. ಕೇಂದ್ರ ಸರ್ಕಾರದ ಜಾತಿ ಜನ ಗಣತಿ ಇಡೀ ದೇಶಕ್ಕೆ ಅನ್ವಯವಾಗುತ್ತದೆ. ಆದರೆ ರಾಜ್ಯ ಸರ್ಕಾರ ನಡೆಸುವ ಜಾತಿ ಗಣತಿ ಸೀಮಿತ ವ್ಯಾಪ್ತಿಯಲ್ಲಿರುತ್ತದೆ ಎಂದರು.

ಈ ವೇಳೆ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ರಾಜ್ಯಾಧ್ಯಕ್ಷ ಕೌಟಿಲ್ಯ ರಘು, ರಾಜ್ಯ ವಕ್ತಾರ ಎಂ.ಜಿ.ಮಹೇಶ್, ಸಂಚಾಲಕ ಸುರೇಶ್ ಬಾಬು, ಒಬಿಸಿ ಜಿಲ್ಲಾಧ್ಯಕ್ಷ ಮೈ.ಕು.ಪ.ರಾಜೇಶ್, ನಗರ ಪ್ರಧಾನ ಕಾರ್ಯದರ್ಶಿಗಳಾದ ಕೇಬಲ್ ಮಹೇಶ್, ಬಿ.ಎಂ.ರಘು, ನಗರ ಉಪಾಧ್ಯಕ್ಷ ಜೋಗಿ ಮಂಜು ಸೇರಿದಂತೆ ಇತರರಿದ್ದರು.

ಐಎಎಸ್, ಐಪಿಎಸ್ ಆಗಲು ಓದಿ ಹೈರಾಣಾಗುವ ಬದಲು ರಾಜಕಾರಣಿಗಳಾಗಿ

ಪ್ರತಿಭಾ ಪುರಸ್ಕಾರ, ಅಭಿನಂದನಾ ಸಮಾರಂಭದಲ್ಲಿ ಡಿಐಜಿ ರವಿ ಡಿ.ಚನ್ನಣ್ಣನವರ್ ಸಲಹೆ



ಮೈಸೂರಿನ ವಿಜಯನಗರದಲ್ಲಿರುವ ವಾಲ್ಮೀಕಿ ಭವನದಲ್ಲಿ ಭಾನುವಾರ ಕರ್ನಾಟಕ ರಾಜ್ಯ ನಾಯಕರ ಯುವಸೇನೆ ವತಿಯಿಂದ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಲಾಯಿತು.

ಮೈಸೂರು,ಜು.27(ಜಿಎ)–ಕೇವಲ ಐಎಎಸ್, ಐಪಿಎಸ್ ಅಧಿಕಾರಿಗಳಾಗಬೇಕೆಂದು ಕಾಲ ಕಳೆಯಬೇಡಿ. 15 ಲಕ್ಷ ಜನರಲ್ಲಿ 250 ಮಂದಿಗೆ ಮಾತ್ರ ಅವಕಾಶ ಸಿಗಲಿದೆ. ಓದಿ ಹೈರಾಣಾಗುವ ಬದಲಿಗೆ ರಾಜಕೀಯ ಪ್ರವೇಶ ಮಾಡಿ, ಕನಿಷ್ಠಪಕ್ಷ ಗ್ರಾಪಂ ಚುನಾವಣೆಯಲ್ಲಿ ಸ್ಪರ್ಧಿಸಿ ಎಂದು ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆ ಡಿಐಜಿ ರವಿ ಡಿ.ಚನ್ನಣ್ಣನವರ್ ಸಲಹೆ ನೀಡಿದರು.

ಮೈಸೂರಿನ ವಿಜಯನಗರದಲ್ಲಿರುವ ವಾಲ್ಮೀಕಿ ಭವನದಲ್ಲಿ ಕರ್ನಾಟಕ ರಾಜ್ಯ ನಾಯಕರ ಯುವಸೇನೆ ವತಿಯಿಂದ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ 22ನೇ ವರ್ಷದ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಮುದಾಯದವರು ಕನಿಷ್ಠ ಪಕ್ಷ ಗ್ರಾಮ ಪಂಚಾಯಿತಿ ಚುನಾವಣೆಗೆ ನಿಲ್ಲಬೇಕು. ಶ್ರೇಣೀಕೃತ ಸಮಾಜದಲ್ಲಿ ಆರ್ಥಿಕ ರಾಜಕೀಯ, ಸಾಮಾಜಿಕ ಅಸಮಾನತೆ ತಾಂಡವವಾಡುತ್ತಿದೆ. ಹೋರಾಡಿ ಪಡೆಯುವ ಹಕ್ಕುಗಳೇ ಹೆಚ್ಚಾಗಿದೆ. ಆರ್ಥಿಕವಾಗಿ ಸಬಲನಾಗಬೇಕು. ಆರ್ಥಿಕವಾಗಿ ಸಬಲನಾಗದಿದ್ದರೆ ಯಾರ ಹೊಟ್ಟೆಯೂ ತುಂಬಿಸಲಾಗದು. ಐಎಎಸ್, ಐಪಿಎಸ್‌ನಲ್ಲಿ ಪರಿಶಿಷ್ಟ ಜಾತಿಗೆ ಶೇ.18, ಪರಿಶಿಷ್ಟಪಂಗಡಕ್ಕೆ ಶೇ.7, ಹಿಂದುಳಿದ ವರ್ಗಕ್ಕೆ ಶೇ.32 ಸ್ಥಾನಗಳು ದೊರೆಯಲಿವೆ. ಈ 54 ಸ್ಥಾನಗಳನ್ನು ಪಡೆಯಲು ನಾವು ಓದಿ ಓದಿ ಹೈರಾಣಾಗುವ ಬದಲಿಗೆ ಸ್ವಯಂ ಉದ್ಯೋಗ ಮಾಡುವುದು, ಉಳುಮೆ, ಎರಡು ಕುರಿ, ಎತ್ತು ಮೇಯಿಸಿದರೆ ಸಾಕು. ಸರ್ಕಾರಿ ಉದ್ಯೋಗಗಳನ್ನು ನಂಬಿ ಕೂರಬೇಡಿ ಎಂದು ಸಲಹೆ ನೀಡಿದರು.

ನಾನು ಭಾಷಣ ಮಾಡುವುದು, ಮಾತನಾಡುವುದನ್ನು ನಿಲ್ಲಿಸಬೇಕೆಂದು ಬಯಸಿದ್ದೇನೆ. ಆದರೆ, ರಾಜ್ಯ, ದೇಶದ ಸಂವಿಧಾನದ ಬಗ್ಗೆ, ಇತಿಹಾಸದ ಪುಟಗಳ ಚರಿತ್ರೆ ಕುರಿತು ಜನರಿಗೆ ಗೊತ್ತಾಗಬೇಕು ಎನ್ನುವ ಕಾರಣಕ್ಕಾಗಿ ಮಾತನಾಡುತ್ತೇನೆ. ಏಕಲವ್ಯ ಯಾರ ಆಶ್ರಯ ಇಲ್ಲದೆ ಬೆಳೆದು ದೊಡ್ಡ ಮಹಾರಾಜರ ಮಗನಿಗೆ ವಿದ್ಯೆಯಲ್ಲಿ ಸವಾಲೊಡ್ಡಿದ್ದ ಕಾರಣಕ್ಕಾಗಿ ತನ್ನ ಬೆರಳನ್ನು ಕತ್ತರಿಸಿಕೊಡುವಂತಾಯಿತು. ಆದರೆ, ಈಗ ಒಬ್ಬರೂ ಕೂಡ ಏಕಲವ್ಯನಾಗಬೇಡಿ. ಮದಕರಿನಾಯಕನಾಗಿ ಅನ್ಯಾಯ ದೌರ್ಜನ್ಯ ಮಾಡುವವರ ವಿರುದ್ಧ ಹೋರಾಟ ಮಾಡುವ ಅಗತ್ಯವಿದೆ ಎಂದು ತಿಳಿಸಿದರು.

ನಂತರ ಎಂಎಲ್‌ಸಿ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಯಾವುದೇ ಸಮುದಾಯದ ಭವಿಷ್ಯವು ಆ ಸಮುದಾಯದ ಮಕ್ಕಳ ಕೈನಲ್ಲಿ ಇರುತ್ತದೆ. ವಿದ್ಯಾವಂತರಾಗಿ ಉನ್ನತ ಸ್ಥಾನಗಳನ್ನು ಅಲಂಕರಿಸಬೇಕು. ಈ ರೀತಿಯ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ನಗರ ಮತ್ತು ಗ್ರಾಮೀಣ ಪ್ರದೇಶದ ಮಕ್ಕಳ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಯಾವುದೇ ಸಮುದಾಯದ ಮಕ್ಕಳು ಆಗಿದ್ದರೂ ಪ್ರೋತ್ಸಾಹಿಸಿ ಬೆನ್ನುತಟ್ಟುವ ಕೆಲಸ ಮಾಡಬೇಕು ಎಂದರು.

ಸ್ವಾತಂತ್ರ್ಯಪೂರ್ವದಿಂದಲೂ ಶೋಷಿತರು, ಹಿಂದುಳಿದ ವರ್ಗಗಳು, ದಲಿತರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿಕೊಂಡು ಬರಲಾಗಿದೆ. ಆದರೆ, ಇಂದು ಶಿಕ್ಷಣ ಪಡೆಯುವವರ ಪ್ರಮಾಣ ಹೆಚ್ಚಾಗಿದೆ. ಯಾರೇ ಆಗಿದ್ದರೂ ಅಭಿವೃದ್ಧಿ ಹೊಂದಬೇಕಾದರೆ ಶಿಕ್ಷಣ ಮುಖ್ಯ. ಮಕ್ಕಳಿಗೆ ಆಸ್ತಿ ಮಾಡುತ್ತೀರೋ ಇಲ್ಲವೋ ಗೊತ್ತಿಲ್ಲ. ಆದರೆ ಶಿಕ್ಷಣವಂತರನ್ನಾಗಿ ಮಾಡಬೇಕು ಎಂದು ಪೋಷಕರಿಗೆ ಸಲಹೆ ನೀಡಿದರು.

ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗದಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿ ಆಡಳಿತ ನಿಯಂತ್ರಿಸುವ ಸ್ಥಾನವನ್ನು ಮುಂದಿನ ಮಕ್ಕಳು ಹೊಂದಬೇಕು. ಅದೇ ರೀತಿಯಾಗಿ ಮಾಧ್ಯಮಗಳನ್ನು ನಿಯಂತ್ರಿಸುವ ಸಂಪಾದಕರ ಸ್ಥಾನಗಳಲ್ಲಿ ಕೂರಬೇಕು. ದಲಿತ, ಹಿಂದುಳಿದ ವರ್ಗಕ್ಕೆ ಸೇರಿದ ಪತ್ರಕರ್ತರು ಇದ್ದರೂ ಮಾಲೀಕತ್ವ, ಸಂಪಾದಕತ್ವವನ್ನು ಹೊಂದುವುದು ಅನಿವಾರ್ಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪತ್ರಿಭಾ ಪುರಸ್ಕಾರ ನೀಡಲಾಯಿತು. ಸಮಾಜದ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು, ರವಿಶಂಕರ್, ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಸದಸ್ಯ ಸಿದ್ದರಾಜು, ಕರ್ನಾಟಕ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಪಾಲಿಕೆ ಮಾಜಿ ಸದಸ್ಯರಾದ ಲೋಕೇಶ್‌ಪಿಯಾ, ಎಂ.ಸತೀಶ್, ಮೈಸೂರು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಕೆ.ಆರ್.ಬ್ಯಾಂಕ್ ನಿರ್ದೇಶಕ ಶಿವಪ್ರಕಾಶ್, ಕರ್ನಾಟಕ ರಾಜ್ಯ ನಾಯಕರ ಯುವಸೇನೆ ಅಧ್ಯಕ್ಷ ದೇವರಾಜ್ ಟಿ.ಕಾಟೂರ್, ನಾಯಕ ನೌಕರರ ಸಂಘದ ಅಧ್ಯಕ್ಷ ಜಗದೀಶ್ವರಮೂರ್ತಿ ಉಪಸ್ಥಿತರಿದ್ದರು.

ದುರ್ಗಾದೇವಿ ಮೂರ್ತಿ ಪ್ರತಿಷ್ಠಾಪನೆ



ಮೈಸೂರಿನ ವಾರ್ಡ್ ನಂ.23ರ ಬೆಳ್ಳಿಕಟ್ಟೆ ಮೀಸಲಿನಲ್ಲಿರುವ ಶ್ರೀ ದುರ್ಗಮ್ಮ ಉಚ್ಚಗೆಂಲಮ್ಮ ಸನ್ನಿಧಿಯಲ್ಲಿ ದುರ್ಗಾದೇವಿ ಮೂರ್ತಿ ಪ್ರತಿಷ್ಠಾಪನೆ, ದುರ್ಗಾದೇವಿ ಅಮ್ಮನವರಿಗೆ 108 ಕಲಶ ಮಹಾ ಕುಂಬಾಭಿಷೇಕ ಏರ್ಪಡಿಸಲಾಯಿತು. ನಂತರ ದ್ರವ್ಯಾಹುತಿ ಕಾಲಕತ್ವ ಹೋಮ, ಆದಿವಾಸ ಹೋಮ, ಗಣಹೋಮ, ಮಹಾಲಕ್ಷ್ಮಿ ಹೋಮ, ಗಣಪತಿ ಹೋಮ ಮಾಡಿಸಲಾಯಿತು. ನಂತರ ಶಾಸಕ ಕೆ.ಹರೀಶ್ ಗೌಡ ದೇವಸ್ಥಾನವನ್ನು ಉದ್ಘಾಟಿಸಿದರು. ಈ ಸಂದರ್ಭ ದೇವಸ್ಥಾನದ ಸದಸ್ಯರಾದ ಭಗವಾನ್, ಮುಕುಂದ, ಚೇತನ್, ರಮೇಶ್, ಸ್ಥಳೀಯರಾದ ಭೂಶಿತ್, ನವೀನ್ ಉಪಸ್ಥಿತರಿದ್ದರು

ಬಿ.ಎಂ.ತನ್ಮಯಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಬಿ.ವಿ.ಸುರೇಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಬಿ.ಎಂ. ತನ್ಮಯ ಅವರು ಭೂ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನೂರಾರು ಮಂದಿಗೆ ವೈದ್ಯಕೀಯ, ಆರೋಗ್ಯ ತಪಾಸಣೆ ಶಿಬಿರ



ಮೈಸೂರಿನ ಅಮರ್‌ದೀಪ್ ಗ್ಯಾಸ್ ಸರ್ವಿಸ್ ಮತ್ತು ಪಟೇಲ್ಸ್ ಮಾರ್ಟ್ ವತಿಯಿಂದ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಮಹಾಕಾಳಿ ಕಾಂಪ್ಲೆಕ್ಸ್‌ನಲ್ಲಿ ನಡೆಸಿದ ಉಚಿತ ಆರೋಗ್ಯ ಮತ್ತು ವೈದ್ಯಕೀಯ ತಪಾಸಣಾ ಶಿಬಿರದಲ್ಲಿ ನೂರಾರು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಶಿಬಿರದಲ್ಲಿ ನೇತ್ರ ತಪಾಸಣೆ, ಶುಗರ್, ರಕ್ತದೊತ್ತಡ, ಮೂಳೆ ಸಾಂದ್ರತೆ, ನರರೋಗ ತಪಾಸಣೆ, ಹೆಚ್.ಬಿ. ಪರೀಕ್ಷೆ ಸೇರಿದಂತೆ ಇನ್ನಿತರ ತಪಾಸಣೆ ನಡೆಸಲಾಯಿತು. ಅಮರ್‌ದೀಪ್ ಗ್ಯಾಸ್ ಸರ್ವಿಸ್‌ನ ವ್ಯವಸ್ಥಾಪಕ ನಿರ್ದೇಶಕ ಮೆಹುಲ್ ಜೆ.ಪಟೇಲ್ ಮತ್ತು ಮುಖಂಡರು ಈ ಶಿಬಿರದ ನೇತೃತ್ವ ವಹಿಸಿದ್ದರು.

ಆ.13ಕ್ಕೆ ಕನ್ನಡ ದೇಶ ಭಕ್ತಿಗೀತೆಗಳ ಸಮೂಹ ಗೀತಗಾಯನ ಸ್ಪರ್ಧೆ

ಮೈಸೂರು, ಜು.27– ನಗರದ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ ತನ್ನ ಸೂರ್ಯಸಖಿ ಸಾಹಿತ್ಯವೇದಿಕೆ ವತಿಯಿಂದ ಆಗಸ್ಟ್ 13ರಂದು ಕನ್ನಡ ದೇಶಭಕ್ತಿಗೀತೆಗಳ ಸಮೂಹ ಗೀತಗಾಯನ ಸ್ಪರ್ಧೆ ಜೈಹಿಂದ್ ಕಾರ್ಯಕ್ರಮ ಏರ್ಪಡಿಸಿದೆ.

ಇಪ್ಪತ್ತಕ್ಕಿಂತ ಹೆಚ್ಚಿನ ವಯೋಮಾನದ ಮಹಿಳೆಯರು, ಪುರುಷರು ಈ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಒಂದು ಗುಂಪಿನಲ್ಲಿ ಕನಿಷ್ಠ ಮೂರು, ಗರಿಷ್ಠ ಆರು ಗಾಯಕರು ಕನ್ನಡ ದೇಶ ಭಕ್ತಿಗೀತೆಗಳನ್ನು ಹಾಡಬಹುದು.

ಸ್ಪರ್ಧಿಗಳು ಕೇಸರಿ ಬಿಳಿ ಅಥವಾ ಹಸಿರು ಬಣ್ಣದ ಯಾವುದೇ ಬಗೆಯ ಭಾರತೀಯ ಉಡುಪನ್ನು ಧರಿಸಿ ಸ್ಪರ್ಧೆಗೆ ಹಾಜರಾಗಬೇಕು, ಸಾಹಿತ್ಯವನ್ನು ನೋಡಿಕೊಂಡು ಕೂಡ ಹಾಡಬಹುದು. ಯಾವುದೇ ಹಿಮ್ಮೇಳನ ವಾದ್ಯಗಳನ್ನು ಬಳಸುವಂತಿಲ್ಲ. ಸ್ಪರ್ಧೆಗೆ ಹತ್ತು ನಿಮಿಷ ಮುಂಚಿತವಾಗಿಯೇ ಹಾಜರಿರಬೇಕು, ಸ್ಥಳದಲ್ಲಿ ನೋಂದಾವಣೆಗೆ ಅವಕಾಶವಿರುವುದಿಲ್ಲ. ಆಗಸ್ಟ್ ಎಂಟನೇ ತಾರೀಕಿನ ಒಳಗೆ ತಮ್ಮ ತಂಡದ ಮಾಹಿತಿಯನ್ನು ನೀಡಿ ನೋಂದಾಯಿಸಿಕೊಳ್ಳಬಹುದು.

ಅಂದು ಅಪರಾಹ್ನ ಎರಡು ಗಂಟೆಗೆ ಸ್ಪರ್ಧೆಗಳು ರಾಮಕೃಷ್ಣನಗರದ ಜಯಲಕ್ಷ್ಮಿದೇವಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ನಡೆಯಲಿದೆ. ಸಂಜೆ 4 ಗಂಟೆಗೆ ಸೇನಾ ಮೆಡಲ್ ಪಡೆದಿರುವ ಲೆಫ್ಟಿನೆಂಟ್ ಕರ್ನಲ್ ಆರ್.ಹೆಚ್. ಸಂದೀಪ್ ಬಹುಮಾನ ವಿತರಿಸಲಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ 8310306882, 9964790442 ಸಂಪರ್ಕಿಸಿ.

ದೇವರು ಇದ್ದಾನೋ ಇಲ್ಲವೋ ಗೊತ್ತಿಲ್ಲ

ನಮಗೆ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರೇ ದೈವಿ ಸ್ವರೂಪ

● ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ● 'ಅಂಬೇಡ್ಕರ್ ವಿಚಾರಧಾರೆ ; ನಾನೇಕೆ ಒಪ್ಪುತ್ತೇನೆ' ಕೃತಿ ಬಿಡುಗಡೆ

ಮೈಸೂರು,ಜು.27(ಪಿಎಂ)– ದೇವರು ಇದ್ದಾನೋ ಇಲ್ಲವೋ ಗೊತ್ತಿಲ್ಲ ಆದರೆ ನಮಗೆ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರೇ ದೈವಿ ಸ್ವರೂಪ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಮೈಸೂರು ರತ್ನ ಸಾಂಸ್ಕೃತಿಕ ಪ್ರತಿಷ್ಠಾನ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಾಹಿತಿ ಪೂರೀಗಾಲಿ ಮರಡೇಶಮೂರ್ತಿ ಸಂಪಾದಕತ್ವದಲ್ಲಿ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಕುರಿತು 101 ಬರಹಗಾರರ ಲೇಖನಗಳನ್ನು ಒಳಗೊಂಡ 'ಅಂಬೇಡ್ಕರ್ ವಿಚಾರಧಾರೆ ; ನಾನೇಕೆ ಒಪ್ಪುತ್ತೇನೆ' ಕೃತಿ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಸಮಾನತೆ, ಅಸ್ಪೃಶ್ಯತೆ ನಡುವೆಯೂ ಜೀವನದಲ್ಲಿ ಸಾಧಿಸಬೇಕೆಂಬ ಛಲ ಹೊಂದಿದವರಿಗೆ ಅಂಬೇಡ್ಕರ್ ಶಕ್ತಿ ತುಂಬುತ್ತಾರೆ. ಗುರಿಯನ್ನು ತಲುಪಿಸುತ್ತಾರೆ. ಪೂಜೆ ಮಾಡಿದ ದೇವರುಗಳು ಯಾರೂ ನಮಗೆ ಶಿಕ್ಷಣ–ಸೌಲಭ್ಯ ನೀಡಲಿಲ್ಲ. ಘನತೆಯ ಬದುಕು ಕಲ್ಪಿಸಲಿಲ್ಲ. ಸಂವಿಧಾನದ ಮೂಲಕ ನಮಗೆ ಶಿಕ್ಷಣ–ಸವಲತ್ತು ಕಲ್ಪಿಸಿಕೊಟ್ಟ ಅಂಬೇಡ್ಕರ್ ಅವರೇ ನಮಗೆ ದೇವರು. ನನ್ನನ್ನು ದೇವರು ಎಂದು ಕರೆಯಬೇಡಿ ಎಂದು ಅಂಬೇಡ್ಕರ್ ಅವರೇ ಹೇಳಿದ್ದಾರೆ. ಅದಾಗ್ಯೂ ಅಂಬೇಡ್ಕರ್ ಅವರೇ ನಮಗೆ ದಿವ್ಯಶಕ್ತಿ–ಸರ್ವಶಕ್ತಿಯಾಗಿದ್ದು, ಅವರು ತೋರಿದ ದಾರಿಯಲ್ಲಿ ಸಾಗೋಣ ಎಂದರು.



ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ 'ಅಂಬೇಡ್ಕರ್ ವಿಚಾರಧಾರೆ ; ನಾನೇಕೆ ಒಪ್ಪುತ್ತೇನೆ' ಕೃತಿ ಬಿಡುಗಡೆ ಮಾಡಲಾಯಿತು.

ಇಂದಿಗೂ ಅಸ್ಪೃಶ್ಯತೆ ಆಚರಣೆ ಚಾಲ್ತಿಯಲ್ಲಿದ್ದು, ಸ್ವಾತಂತ್ರ್ಯ, ಸಂವಿಧಾನ ಇಲ್ಲದ ಸಂದರ್ಭದಲ್ಲಿ ಪರಿಸ್ಥಿತಿ ಹೇಗಿತ್ತು ಎಂದು ಆಲೋಚಿಸಬೇಕು. ನಮ್ಮ ಪೂರ್ವಿಕರು ಕೆರೆ ನೀರನ್ನೂ ಮುಟ್ಟದೇ ಕಡುಕಷ್ಟ ಅನುಭವಿಸಿದ್ದಾರೆ. ಶಿಕ್ಷಣ, ಸವಲತ್ತು ಹಾಗೂ ಸಮಾನತೆಯಿಂದ ವಂಚಿತವಾಗಿ ತಳ ಸಮುದಾಯಗಳು ಅನುಭವಿಸಿದ ನೋವು, ಸಂಕಷ್ಟ ಅರಿತಿದ್ದ ಅಂಬೇಡ್ಕರ್, ಈ ದೇಶಕ್ಕೆ ಯಾವುದು ಅಗತ್ಯ ಎಂಬುದನ್ನು ತಮ್ಮ ಬದುಕು, ಬರಹದ ಮೂಲಕ ಸಾರಿದರು. ಇಂದಿಗೂ ಅಸಮಾನತೆ ಜೀವಂತವಾಗಿದ್ದು, ಅಂಬೇಡ್ಕರ್ ಹೋರಾಟದ ಅರಿವು ಅಗತ್ಯ ಎಂದು ತಿಳಿಸಿದರು.

ಕೃತಿ ಬಿಡುಗಡೆಗೊಳಿಸಿದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಮಾತ ನಾಡಿ, ನಮ್ಮ ದೇಶದಲ್ಲಿ ನ್ಯಾಯಪರ ಚಿಂತನೆ ಹಿಂದಿನಿಂದಲೂ ಇದೆ. ಬಸವಣ್ಣ ತಿಳಿಸಿದ ದಯೆಯೇ ಧರ್ಮ ಎಂಬುದು ಇಲ್ಲಿನ ಮಣ್ಣಿನ ಗುಣವಾಗಿದೆ. ಅಂತಹ ಮೌಲ್ಯವನ್ನು ಸಾರಿದ ಅಂಬೇಡ್ಕರ್ ಮಾನವೀಯ ಮೂರ್ತಿ. ಈ ಕೃತಿಯು ಅಂಬೇಡ್ಕರ್ ಸಂದೇಶಗಳನ್ನು ಸಾರುತ್ತದೆ. 101 ಮಂದಿ ಬರಹಗಾರರು ಈ ಕೃತಿಗಾಗಿ ತಾವು ಪ್ರಭಾವಗೊಂಡ ಬಗೆಯನ್ನು ಲೇಖನಗಳ ಮೂಲಕ ಅನಾವರಣಗೊಳಿಸಿದ್ದು, ಇದು ಎಲ್ಲರೂ ಓದಬೇಕಾದ ಪುಸ್ತಕ. ಮಾನವರ ನಡುವೆ ಇಂದಿಗೂ ತಾರತಮ್ಯ ಗಳಿವೆ. ಇಂತಹ ಸನ್ನಿವೇಶದಲ್ಲಿ ಅಂಬೇಡ್ಕರ್ ನಮ್ಮ ಆಶಾಕಿರಣ, ಅವರ ವ್ಯಕ್ತಿತ್ವ ಮಾರ್ಗದರ್ಶಿ ಎಂದು ಹೇಳಿದರು.

ವಿಶ್ವಪಥ ಮಾಸಿಕವನ್ನು ಸಮಾಜಸೇವಕ ಡಾ.ಕೆ.ರಘುರಾಂ ವಾಜಪೇಯಿ ಹಾಗೂ ವಿಶ್ವಪಥ ಕೈಪಿಡಿಯನ್ನು ಭಗವಾನ್ ಬುದ್ಧ ಶಿಕ್ಷಣ ಸಂಸ್ಥೆಗಳ ಡಾ.ಯಮದೂರು ಸಿದ್ದರಾಜು ಬಿಡುಗಡೆ ಮಾಡಿದರು. ಡಿ.ಈರೇಶ್ ನಗರ್ಲೆ ಕೃತಿ ಕುರಿತು ಮಾತನಾಡಿದರು.

ಇದೇ ವೇಳೆ ಅಂಬೇಡ್ಕರ್ ಭವನಕ್ಕೆ ಭೂಮಿ ನೀಡಿದ ಕೆಂಗಾಕಿ ಬಸವಯ್ಯ, ಅಂತರ ರಾಷ್ಟ್ರೀಯ ವಿಶೇಷಚೇತನ ಕ್ರೀಡಾಪಟು ಎಂ.ಪ್ರಭುಸ್ವಾಮಿ, ನಂಜನಗೂಡಿನ ಮಕ್ಕಳ ಮನೆ ಸಂಸ್ಥಾಪಕ ಡಿ.ಜಿ.ಸೋಮಶೇಖರ ಮೂರ್ತಿ, ಪತ್ರಕರ್ತ ರಾಂಪುರ ಪುಟ್ಟಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ದಸಂಸ ಮುಖಂಡರೂ ಆದ ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಹರಿಹರ ಆನಂದಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮಾನವ ಹಕ್ಕುಗಳ ಹೋರಾಟಗಾರ ಪ್ರಸನ್ನ, ಡೀಡ್ ಸಂಸ್ಥೆ ನಿರ್ದೇಶಕ ಎಸ್.ಶ್ರೀಕಾಂತ್, ಸಾಹಿತಿ ಪೂರೀಗಾಲಿ ಮರಡೇಶ ಮೂರ್ತಿ ಮತ್ತಿತರರು ಹಾಜರಿದ್ದರು.


ತ್ರಿವೇಣಿ ಜನ್ಮದಿನ; ಕಥಾ ಸ್ಪರ್ಧೆ

ಮೈಸೂರು: ಲೇಖಕಿ ತ್ರಿವೇಣಿ ಜನ್ಮದಿನದ ಅಂಗವಾಗಿ ಲೇಖಿಕಾ ಸಾಹಿತ್ಯ ವೇದಿಕೆ ಹಾಗೂ ತ್ರಿವೇಣಿ ಶಂಕರ್ ಸಾಹಿತ್ಯ ಪ್ರತಿಷ್ಠಾನವು ರಾಜ್ಯಮಟ್ಟದ ಮನೋವೈಜ್ಞಾನಿಕ ಕಥಾಸ್ಪರ್ಧೆ ಆಯೋಜಿಸಿವೆ. ಹತ್ತುಪುಟಗಳ ಮಿತಿಯ ಕಥೆಗಳನ್ನು ಆಗಸ್ಟ್ 10ರೊಳಗೆ Shylajaasuresh@gmail.com ಇಲ್ಲಿಗೆ ಕಳಿಸಬಹುದು. ಪ್ರಥಮ, ದ್ವಿತೀಯ ಹಾಗೂ ತೃತೀಯ ನಗದು ಬಹುಮಾನ, ಸ್ಮರಣಿಕೆ ಜೊತೆಗೆ ಸನ್ಮಾನವೂ ಇರಲಿದೆ. ಹೆಚ್ಚಿನ ವಿವರಗಳಿಗೆ 9916378955 ಅನ್ನು ಸಂಪರ್ಕಿಸಬಹುದು ಎಂದು ಲೇಖಿಕಾ ಸಾಹಿತ್ಯ ವೇದಿಕೆ ಸಂಚಾಲಕಿ ಶೈಲಜಾ ಸುರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಕಾನೂನು ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ

ಮೈಸೂರು,ಜು.27–ಮೈಸೂರು ನಗರ ಹಾಗೂ ಗ್ರಾಮಾಂತರ(ಜಿಲ್ಲಾ) ಕಾಂಗ್ರೆಸ್ ಕಾನೂನು ಘಟಕಗಳ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಕಾಂಗ್ರೆಸ್ ಕಚೇರಿಯಲ್ಲಿ ನಡೆಯಿತು.

ಮೈಸೂರು ಜಿಲ್ಲಾ ಕಾಂಗ್ರೆಸ್ ಕಾನೂನು ಘಟಕದ ನೂತನ ಅಧ್ಯಕ್ಷರಾಗಿ ಎ.ಆರ್. ಕಾಂತರಾಜ್, ಕಾರ್ಯಾಧ್ಯಕ್ಷರಾಗಿ ಎನ್.ನಂದೀಶ್, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಆರ್.ಚರಣ್‌ರಾಜ್, ಉಪಾಧ್ಯಕ್ಷರಾಗಿ ಅಭಿಷೇಕ್ ಪಾಳ್ಯ, ಎಸ್.ಪಿ.ಮಹೇಶ್, ಸೈಯದ್ ಕಾಸಿಂ, ಎನ್.ಲೋಕೇಶ್, ಮಂಜುಳಾ, ಚಂದ್ರಶೇಖರ್, ಕಾರ್ಯದರ್ಶಿಯಾಗಿ ಸಂದೀಪ ಮತ್ತು ನಗರ ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷರಾಗಿ ಎಸ್.ಪಿ.ಮಂಜುನಾಥ್, ಉಪಾಧ್ಯಕ್ಷರಾಗಿ ಹೆಚ್.ಎಂ. ಮಹೇಶ್, ಕೋಮಲ, ತನುಜಾ ಮಹೇಶ್, ಪರಂಜ್ಯೋತಿ, ಕಾರ್ಯದರ್ಶಿಯಾಗಿ ಎಂ.ಸಂತೋಷ ಅಧಿಕಾರ ವಹಿಸಿಕೊಂಡರು. ಇವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಕ್ಷದ ಧ್ವಜ ನೀಡಿ ಶುಭಕೋರಿದರು.



ಮೈಸೂರು ಕಾಂಗ್ರೆಸ್ ಭವನದಲ್ಲಿ ನಗರ ಹಾಗೂ ಗ್ರಾಮಾಂತರ(ಜಿಲ್ಲಾ) ಕಾಂಗ್ರೆಸ್ ಕಾನೂನು ಘಟಕಗಳ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಡಿ.ತಿಮ್ಮಯ್ಯ, ರವಿಶಂಕರ್, ಎ.ಆರ್.ಕಾಂತರಾಜ್, ಎನ್.ಭಾಸ್ಕರ್, ಡಾ.ಬಿ.ಜೆ.ವಿಜಯಕುಮಾರ್, ಆರ್.ಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ನಂತರ ಮಾತನಾಡಿದ ಸಚಿವರು, ಸಾಮಾಜಿಕ ನ್ಯಾಯ ಇಲ್ಲದಿದ್ದರೆ ಸ್ವಾತಂತ್ರ್ಯಕ್ಕೆ ಅರ್ಥವೇ ಇರುವುದಿಲ್ಲ ಎಂಬುದನ್ನು ಸಂವಿಧಾನ ತಿಳಿಸುತ್ತದೆ. ಕಾಂಗ್ರೆಸ್ ಪಕ್ಷ ಗಾಂಧೀಜಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಆಶಯದಡಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡುತ್ತಿದೆ. ಈ ನಿಟ್ಟಿನಲ್ಲಿ ಕಾನೂನು ಘಟಕವು ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಕಾಂಗ್ರೆಸ್ ಸೇರಿದರೆ ಚಳವಳಿ ಆರಂಭ ಎಂದರ್ಥ. ಚಳವಳಿಯಿಂದ ನೈತಿಕತೆ ಬಂದರೆ, ನೈತಿಕತೆ ವ್ಯಕ್ತಿತ್ವ ರೂಪಿಸುವ ಮೂಲಕ ಇತಿಹಾಸ ನಿರ್ಮಿಸುತ್ತದೆ. ಸಮಾಜದಿಂದ ಕೋಮುವಾದ, ಮತೀಯವಾದ, ಅಸ್ಪೃಶ್ಯತೆಯನ್ನು ತೆಗೆದುಹಾಕಬೇಕಿದೆ. ಸಾಮಾಜಿಕ ನ್ಯಾಯ, ಆರ್ಥಿಕ ಸ್ವಾವಲಂಬನೆಗಾಗಿ ನಿರಂತರ ಹೋರಾಟದ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಕಾನೂನು ಘಟಕದ ಜವಾಬ್ದಾರಿ ಹೆಚ್ಚಿದೆ. ಕಾರ್ಯಾಗಾರ ಹಾಗೂ ವಿಚಾರಸಂಕಿರಣಗಳ ಮೂಲಕ ಹೆಚ್ಚು ಜನರಿಗೆ ಕಾನೂನು ವಿಚಾರಗಳನ್ನು ತಲುಪಿಸಿ ಎಂದು ಹೇಳಿದರು.

ಕಾನೂನು ಘಟಕದ ನೂತನ ಜಿಲ್ಲಾಧ್ಯಕ್ಷ ಎ.ಆರ್.ಕಾಂತರಾಜ್ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಶೀರ್ವಾದದೊಂದಿಗೆ ಇಂದು ಜವಾಬ್ದಾರಿ ಸ್ವೀಕರಿಸಿದ್ದೇನೆ. ಹುಟ್ಟು ಹೋರಾಟಗಾರನಾಗಿ ಸಂವಿಧಾನ ರಕ್ಷಿಸುವ ಹಾಗೂ ಸಾಮಾಜಿಕ ನ್ಯಾಯದ ಪರವಾಗಿ ನಿಲ್ಲುವ ದನಿಯಾಗಿ ಕಾನೂನು ಘಟಕವನ್ನು ಮುನ್ನಡೆಸುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಂವಿಧಾನ ಸಂರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಶಾಸಕ ಡಿ.ರವಿ ಶಂಕರ್, ಮೈಸೂರು ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಲೋಕೇಶ್ ಸಿ.ಎಂ.ಜಗದೀಶ್, ಸಿ.ಬಸವರಾಜು, ತಿಮ್ಮಾಚಾರಿ, ಅರವಿಂದ, ಶಿವಾನಂದಸ್ವಾಮಿ, ಪುಟ್ಟಸ್ವಾಮಿ, ಮಾದೇವಸ್ವಾಮಿ, ಪುಟ್ಟಸಿದ್ದೇಗೌಡ, ಹೆಚ್.ಎಸ್. ಪುಟ್ಟರಸ, ಜಿ.ಮಹದೇವ, ಪ್ರಭು ಕೆ.ಚರಣ್‌ರಾಜ್, ಮನೋನ್ಮಣಿ, ಮೈತ್ರಿ, ಮೀನಾಕ್ಷಿ ಮತ್ತಿತರರು ಭಾಗವಹಿಸಿದ್ದರು.

ಮೈಸೂರು ಮಿತ್ರ

25 ವಾಹನಗಳಿಗೆ ಟ್ರಕ್ ಡಿಕ್ಕಿ; ಮಹಿಳೆ ಸಾವು

ಪುಣೆ: ಪುಣೆ–ಮುಂಬೈ ಎಕ್ಸ್‌ಪ್ರೆಸ್ ವೇನಲ್ಲಿ ನಡೆದ ಭೀಕರ ಸರಣಿ ಅಪಘಾತದಲ್ಲಿ ಓರ್ವ ಮಹಿಳೆ ಸಾವನ್ನಪ್ಪಿ, ಹಲವರು ಗಾಯಗೊಂಡಿದ್ದಾರೆ. ಶನಿವಾರ (ಜು.26) ಸಂಜೆ ವೇಳೆ ಈ ಘಟನೆ ನಡೆದಿದ್ದು, ಎಕ್ಸ್‌ಪ್ರೆಸ್ ವೇನಲ್ಲಿ ಗಂಟೆಗಟ್ಟಲೆ ಟ್ರಾಫಿಕ್ ಜಾಮ್‌ಗೆ ಕಾರಣವಾಗಿದೆ. ಪುಣೆ–ಮುಂಬೈ ಎಕ್ಸ್‌ಪ್ರೆಸ್ ವೇನ ಖೋಪಲಿ ಎಕ್ಸಿಟ್ ಬಳಿ ಸರಕು ಸಾಗಾಣಿಕಾ ಕಂಟೈನರ್ ಟ್ರಕ್ಕೊಂದರ ಬ್ರೇಕ್ ಫೇಲ್ ಆದ ಪರಿಣಾಮ ಈ ಅಪಘಾತ ಸಂಭವಿಸಿದೆ. ಟ್ರಕ್ ಪುಣೆ–ಮುಂಬೈ ಎಕ್ಸ್‌ಪ್ರೆಸ್ ವೇನಲ್ಲಿನ ಸುಮಾರು 25 ವಾಹನಗಳಿಗೆ ಡಿಕ್ಕಿಯಾಗಿದ್ದು, ಹಲ ವಾರು ವಾಹನಗಳು ಜಖಂಗೊಂಡಿವೆ. ಕಂಟೈನರ್ ಟ್ರಕ್ ನಿಯಂತ್ರಣ ತಪ್ಪಿ ಇತರ ವಾಹನಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಈ ಸರಣಿ ಅಪಘಾತ ನಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಘಟನೆಯಲ್ಲಿ ಓರ್ವ ಮಹಿಳೆ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮೃತ ಮಹಿಳೆಯನ್ನು ಒಸ್ಮಾನಾಬಾದ್ ನಿವಾಸಿ 35 ವರ್ಷದ ಅನಿತಾ ಖಂಡೆ ಎಂದು ಗುರುತಿಸಲಾಗಿದೆ. ವೇಗವಾಗಿ ಬಂದ ಕಂಟೈನರ್ ಟ್ರಕ್‌ನ ಬ್ರೇಕ್ ವೈಫಲ್ಯ ದಿಂದ ಈ ಅಪಘಾತ ಸಂಭವಿಸಿದೆ ಎಂದು ಹೇಳಲಾಗುತ್ತಿದೆ. ಅಪಘಾತ ಸಂಭವಿಸಿದ ಸ್ವಲ್ಪ ಸಮಯದ ನಂತರ ಅಗ್ನಿಶಾಮಕ ದಳ ಮತ್ತು ಆಂಬ್ಯುಲೆನ್ಸ್ ಸೇವೆಗಳು ಸ್ಥಳಕ್ಕೆ ಧಾವಿಸಿವೆ. ಕೂಡಲೇ ಗಾಯಾಳುಗಳನ್ನು ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗಳಿಗೆ ಕಳುಹಿಸಿದ್ದಾರೆ.

ಟೇಕ್ ಆಫ್ ಆಗುವ ಮುನ್ನವೇ ಅಮೆರಿಕನ್ ಏರ್ಲೈನ್ಸ್ ಬೆಂಕಿಗಾಹುತಿ



ಅಮೆರಿಕಾ: ಡೆನ್ವರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾರತೀಯ ಕಾಲಮಾನ ನಿನ್ನೆ ಶನಿವಾರ ಮಿಯಾ ಮಿಗೆ ತೆರಳುತ್ತಿದ್ದ ಅಮೆರಿಕನ್ ಏರ್ಲೈನ್ಸ್ ವಿಮಾನ ಲ್ಯಾಂಡಿಂಗ್ ಗೇರ್ ಅಸಮರ್ಪಕ ಕಾರ್ಯದಿಂದಾಗಿ ಬೆಂಕಿ ಮತ್ತು ಹೊಗೆ ಉಂಟಾದ ಕಾರಣ ಟೇಕ್ ಆಫ್‌ನ್ನು ಸ್ಥಗಿತಗೊಳಿಸಬೇಕಾಯಿತು. ಇದು ತುರ್ತು ಸ್ಥಳಾಂತರಿಸುವಿಕೆಗೆ ಕಾರಣವಾಯಿತು. ಎಲ್ಲಾ 173 ಪ್ರಯಾಣಿಕರನ್ನು ವಿಮಾನದಿಂದ ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು, ಆದರೂ ಒಬ್ಬ ವ್ಯಕ್ತಿಗೆ ಸಣ್ಣಪುಟ್ಟ ಗಾಯವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬೋಯಿಂಗ್ 737 MAX 8 ಹಾರಾಟ ನಡೆಸಿದ AA–3023 ವಿಮಾನದಲ್ಲಿ ಟೈರ್ ನಿರ್ವಹಣೆ ಸಮಸ್ಯೆಯಿಂದಾಗಿ ತುರ್ತು ಪರಿಸ್ಥಿತಿ ಉಂಟಾಗಿದೆ ಎಂದು ವಿಮಾನಯಾನ ಸಂಸ್ಥೆ ನಂತರ ವರದಿ ಮಾಡಿದೆ. ಪ್ರಯಾಣಿಕರು ಭಯಭೀತರಾಗಿ ತುರ್ತು ಚ್ಯೂಟ್‌ಗಳಿಂದ ಕೆಳಗೆ ಜಾರಿದಾಗ ವಿಮಾನದ ಸುತ್ತಲೂ ಹೊಗೆ ಆವರಿಸಿ ಕೊಂಡಿತು. ರನ್‌ವೇಯಲ್ಲಿ ಸ್ಥಳಾಂತರಿಸುವಿಕೆ ನಡೆಯುತ್ತಿದ್ದಂತೆ ಲ್ಯಾಂಡಿಂಗ್ ಗೇರ್ ಬೆಂಕಿಯಲ್ಲಿ ಕಾಣಿಸಿಕೊಂಡಿತು.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಮೈಸೂರಿನಲ್ಲಿ... ಮೈ-ಸೂರು

ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿ ಮೂಲೆ ಮತ್ತು ಮಧ್ಯಂತರ ನಿವೇಶನಗಳ ಇ–ಹರಾಜು ಪ್ರಕಟಣೆ ಸಂಖ್ಯೆ/ಮೈ.ಅ.ಪ್ರಾ/ಇ.ಹ.ಪ್ರ/01/2025–26 ದಿನಾಂಕ:25.07.2025,ರ ಪ್ರಕಟಣೆ ಹೊರಡಿಸಲು ಉದ್ದೇಶಿಸಿರುವ ವಿವರ.

1) ಇ–ಹರಾಜನ್ನು ಆರಂಭಿಸುವ ದಿನಾಂಕ: 31.07.2025 ರ ಭಾರತೀಯ ಕಾಲಮಾನ ಸಂಜೆ 6.00 ಗಂಟೆಯ ನಂತರ
2) ಕ್ರ.ಸಂ.1 ರಿಂದ 50 ರವರೆಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 12.08.2025 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ–ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 16.08.2025 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 18.08.2025 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
3) ಕ್ರ.ಸಂ.51 ರಿಂದ 100 ರವರೆಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 12.08.2025 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ–ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 19.08.2025 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 20.08.2025 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
4) ಕ್ರ.ಸಂ.101 ರಿಂದ 150 ರವರೆಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 12.08.2025 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ–ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 21.08.2025 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 22.08.2025 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
5) ಕ್ರ.ಸಂ.151 ರಿಂದ 200 ರವರೆಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 12.08.2025 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ–ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 25.08.2025 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 26.08.2025 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)."

ಕ್ರ ಸಂ	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ ಉ–ದ	ಅಳತೆ ಮೀ ಗಳಲ್ಲಿ ಪೂ–ಪ	ವಿಸ್ತೀರ್ಣ ಚ.ಮೀ ಗಳಲ್ಲಿ	ಚ.ಮೀ.ಗೆ ನಿಗದಿ ಪಡಿಸಿರುವ ದರ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
	ಮೂಲೆ ಹಾಗೂ ಮಧ್ಯಂತರ ನಿವೇಶನಗಳು								
1	ನಂಜನಗೂಡು ಬಸವನಗುಡಿ ಬ್ಲಾಕ್	ಹೆಚ್.ಐ.ಜಿ.–19	ಮಧ್ಯಂತರ	ದಕ್ಷಿಣ 9.00	18.00	10.00	180.00	36503.00	65.71
2	ನಂಜನಗೂಡು ಬಸವನಗುಡಿ ಬ್ಲಾಕ್	ಹೆಚ್.ಐ.ಜಿ.–20/21	ಮಧ್ಯಂತರ	ಉತ್ತರ 12.00	18.00	16.50	297.00	36503.00	108.41
3	ನಂಜನಗೂಡು ಬಸವನಗುಡಿ ಬ್ಲಾಕ್	ಎಂ.ಐ.ಜಿ.–41	ಮಧ್ಯಂತರ	ದಕ್ಷಿಣ 12.00	(14.60+16.00)/2	9.00	137.70	36503.00	50.26
4	ನಂಜನಗೂಡು ಬಸವನಗುಡಿ ಬ್ಲಾಕ್	ಎಂ.ಐ.ಜಿ.–42	ಮಧ್ಯಂತರ	ದಕ್ಷಿಣ 12.00	(12.60+14.60)/2	9.00	122.40	36503.00	44.68
5	ನಂಜನಗೂಡು ಬಸವನಗುಡಿ ಬ್ಲಾಕ್	ಎಂ.ಐ.ಜಿ.–44	ಮಧ್ಯಂತರ	ದಕ್ಷಿಣ 12.00	(12.50+13.50)/2	9.00	117.00	36503.00	42.71
6	ನಂಜನಗೂಡು ಬಸವನಗುಡಿ ಬ್ಲಾಕ್	ಎಂ.ಐ.ಜಿ.–54	ಮಧ್ಯಂತರ	ಉತ್ತರ 12.00	22.00	8.00	176.00	36503.00	64.25
7	ನಾಚಹನಹಳ್ಳಿ–ಕುಪ್ಪಲೂರು 3ನೇ ಹಂತ 'ಡಿ' ಬ್ಲಾಕ್	99	ಮೂಲೆ	ಪಶ್ಚಿಮ 9.00	13.00	18.00	234.00	79256.00	185.46
8	ಜೆ.ಪಿ.ನಗರ 1ನೇ ಹಂತ 'ಎಫ್' ಬ್ಲಾಕ್	72	ಮೂಲೆ	ಪೂ–ಉ 9.00	24.00	(18.00+19.00)/2	444.00	79256.00	351.90
9	ಶ್ರೀರಾಂಪುರ 3ನೇ ಹಂತ	2516	ಮಧ್ಯಂತರ	ಪೂರ್ವ 9.00	9.00	15.00	135.00	45776.00	61.80
10	ಶ್ರೀರಾಂಪುರ 3ನೇ ಹಂತ	2519	ಮಧ್ಯಂತರ	ಪೂರ್ವ 9.00	9.00	15.00	135.00	45776.00	61.80
11	ಶ್ರೀರಾಂಪುರ 3ನೇ ಹಂತ	2522	ಮಧ್ಯಂತರ	ಪೂರ್ವ 9.00	9.00	15.00	135.00	45776.00	61.80
12	ಶ್ರೀರಾಂಪುರ 3ನೇ ಹಂತ	2525	ಮಧ್ಯಂತರ	ಪೂರ್ವ 9.00	9.00	15.00	135.00	45776.00	61.80
13	ಶ್ರೀರಾಂಪುರ 3ನೇ ಹಂತ	2530	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
14	ಶ್ರೀರಾಂಪುರ 3ನೇ ಹಂತ	2536	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
15	ಶ್ರೀರಾಂಪುರ 3ನೇ ಹಂತ	2538	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
16	ಶ್ರೀರಾಂಪುರ 3ನೇ ಹಂತ	2539	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
17	ಶ್ರೀರಾಂಪುರ 3ನೇ ಹಂತ	2541	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
18	ಶ್ರೀರಾಂಪುರ 3ನೇ ಹಂತ	2543	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
19	ಶ್ರೀರಾಂಪುರ 3ನೇ ಹಂತ	2546	ಮಧ್ಯಂತರ	ಪೂರ್ವ 9.00	9.00	12.00	108.00	45776.00	49.44
20	ಶ್ರೀರಾಂಪುರ 3ನೇ ಹಂತ	2548	ಮಧ್ಯಂತರ	ಪೂರ್ವ 9.00	9.00	12.00	108.00	45776.00	49.44
21	ಶ್ರೀರಾಂಪುರ 3ನೇ ಹಂತ	2550	ಮಧ್ಯಂತರ	ಪೂರ್ವ 9.00	9.00	12.00	108.00	45776.00	49.44
22	ಶ್ರೀರಾಂಪುರ 3ನೇ ಹಂತ	2551	ಮಧ್ಯಂತರ	ಪೂರ್ವ 9.00	9.00	12.00	108.00	45776.00	49.44
23	ಶ್ರೀರಾಂಪುರ 3ನೇ ಹಂತ	2553	ಮಧ್ಯಂತರ	ಪೂರ್ವ 9.00	9.00	12.00	108.00	45776.00	49.44
24	ಶ್ರೀರಾಂಪುರ 3ನೇ ಹಂತ	2560	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
25	ಶ್ರೀರಾಂಪುರ 3ನೇ ಹಂತ	2563	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
26	ಶ್ರೀರಾಂಪುರ 3ನೇ ಹಂತ	2564	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
27	ಶ್ರೀರಾಂಪುರ 3ನೇ ಹಂತ	2566	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
28	ದಟ್ಟಗಳ್ಳಿ 3ನೇ ಹಂತ	ಇ.ಡಬ್ಲ್ಯೂ.ಎಸ್–144/ಎ	ಮೂಲೆ	ಪೂ–ಉ 18.00	10.00	6.00	60.00	64986.00	38.99
29	ವಿಜಯನಗರ 4ನೇ ಹಂತ 2ನೇ ಫೇಸ್	109/4	ಮೂಲೆ	ಪೂ–ಉ 9.00	12.00	(4.10+7.45)/2	69.30	86009.00	59.60
30	ವಿಜಯನಗರ 4ನೇ ಹಂತ 2ನೇ ಘಟ್ಟ	8066	ಮೂಲೆ	ಪ–ದ 9–12	(6.50+13.50)/2	9.00	90.00	86009.00	77.41
31	ವಿಜಯನಗರ 4ನೇ ಹಂತ 2ನೇ ಘಟ್ಟ	9631	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
32	ವಿಜಯನಗರ 4ನೇ ಹಂತ 2ನೇ ಘಟ್ಟ	9632	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
33	ವಿಜಯನಗರ 4ನೇ ಹಂತ 2ನೇ ಘಟ್ಟ	9633	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
34	ವಿಜಯನಗರ 4ನೇ ಹಂತ 2ನೇ ಘಟ್ಟ	9634	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
35	ವಿಜಯನಗರ 4ನೇ ಹಂತ 2ನೇ ಘಟ್ಟ	9635	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
36	ವಿಜಯನಗರ 4ನೇ ಹಂತ 2ನೇ ಘಟ್ಟ	9636	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
37	ವಿಜಯನಗರ 4ನೇ ಹಂತ 2ನೇ ಘಟ್ಟ	9637	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
38	ವಿಜಯನಗರ 4ನೇ ಹಂತ 2ನೇ ಘಟ್ಟ	9638	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
39	ವಿಜಯನಗರ 4ನೇ ಹಂತ 2ನೇ ಘಟ್ಟ	9639	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
40	ವಿಜಯನಗರ 4ನೇ ಹಂತ 2ನೇ ಘಟ್ಟ	9640	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
41	ವಿಜಯನಗರ 4ನೇ ಹಂತ 2ನೇ ಘಟ್ಟ	9641	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
42	ವಿಜಯನಗರ 4ನೇ ಹಂತ 2ನೇ ಘಟ್ಟ	9642	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
43	ವಿಜಯನಗರ 4ನೇ ಹಂತ 2ನೇ ಘಟ್ಟ	9643	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
44	ವಿಜಯನಗರ 4ನೇ ಹಂತ 2ನೇ ಘಟ್ಟ	9646	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
45	ವಿಜಯನಗರ 4ನೇ ಹಂತ 2ನೇ ಘಟ್ಟ	9647	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
46	ವಿಜಯನಗರ 4ನೇ ಹಂತ 2ನೇ ಘಟ್ಟ	9648	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
47	ವಿಜಯನಗರ 4ನೇ ಹಂತ 2ನೇ ಘಟ್ಟ	9651	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
48	ವಿಜಯನಗರ 4ನೇ ಹಂತ 2ನೇ ಘಟ್ಟ	9652	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
49	ವಿಜಯನಗರ 4ನೇ ಹಂತ 2ನೇ ಘಟ್ಟ	9653	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
50	ವಿಜಯನಗರ 4ನೇ ಹಂತ 2ನೇ ಘಟ್ಟ	9656	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
51	ವಿಜಯನಗರ 4ನೇ ಹಂತ 2ನೇ ಘಟ್ಟ	9657	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
52	ವಿಜಯನಗರ 4ನೇ ಹಂತ 2ನೇ ಘಟ್ಟ	9659	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
53	ವಿಜಯನಗರ 4ನೇ ಹಂತ 2ನೇ ಘಟ್ಟ	9660	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
54	ವಿಜಯನಗರ 4ನೇ ಹಂತ 2ನೇ ಘಟ್ಟ	9661	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
55	ವಿಜಯನಗರ 4ನೇ ಹಂತ 2ನೇ ಘಟ್ಟ	9662	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
56	ವಿಜಯನಗರ 4ನೇ ಹಂತ 2ನೇ ಘಟ್ಟ	9598	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
57	ವಿಜಯನಗರ 4ನೇ ಹಂತ 2ನೇ ಘಟ್ಟ	9599	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
58	ವಿಜಯನಗರ 4ನೇ ಹಂತ 2ನೇ ಘಟ್ಟ	9600	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
59	ವಿಜಯನಗರ 4ನೇ ಹಂತ 2ನೇ ಘಟ್ಟ	9601	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
60	ವಿಜಯನಗರ 4ನೇ ಹಂತ 2ನೇ ಘಟ್ಟ	9602	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
61	ವಿಜಯನಗರ 4ನೇ ಹಂತ 2ನೇ ಘಟ್ಟ	9603	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
62	ವಿಜಯನಗರ 4ನೇ ಹಂತ 2ನೇ ಘಟ್ಟ	9604	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
63	ವಿಜಯನಗರ 4ನೇ ಹಂತ 2ನೇ ಘಟ್ಟ	9609	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
64	ವಿಜಯನಗರ 4ನೇ ಹಂತ 2ನೇ ಫೇಸ್	10298	ಮೂಲೆ	ಪ–ಉ 24–18	24.00	(17.40+14.60)/2	384.00	86009.00	330.27
65	ವಿಜಯನಗರ 4ನೇ ಹಂತ 2ನೇ ಫೇಸ್	12056	ಮೂಲೆ	ಪ–ಉ 24–9	23.20	(16.60+13.20)/2	345.68	86009.00	297.32
66	ವಿಜಯನಗರ 4ನೇ ಹಂತ 2ನೇ ಫೇಸ್	12256	ಮಧ್ಯಂತರ	ಪಶ್ಚಿಮ 9.00	18.00	27.00	486.00	59275.00	288.08
67	ವಿಜಯನಗರ 4ನೇ ಹಂತ 2ನೇ ಫೇಸ್	12258	ಮಧ್ಯಂತರ	ಪಶ್ಚಿಮ 9.00	18.00	27.00	486.00	59275.00	288.08
68	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	38	ಮೂಲೆ	ಪ–ದ 9.00	12.00	(10.75+10.45)/2	127.20	99318.00	126.33
69	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	125	ಮಧ್ಯಂತರ	ದಕ್ಷಿಣ 12.00	17.50	12.00	210.00	97371.00	204.48
70	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	126	ಮಧ್ಯಂತರ	ದಕ್ಷಿಣ 12.00	17.50	12.00	210.00	97371.00	204.48
71	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	127	ಮಧ್ಯಂತರ	ದಕ್ಷಿಣ 12.00	17.50	12.00	210.00	97371.00	204.48
72	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	130	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
73	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	131	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
74	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	132	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
75	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	133	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
76	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	134	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
77	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	135	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
78	ವಿಜಯನಗರ 2ನೇ ಹಂತ	2503	ಮೂಲೆ	ಪೂ–ಉ 12–6	8.80	(17.60+20.00)/2	165.44	99318.00	164.31
79	ವಿಜಯನಗರ 2ನೇ ಹಂತ	2522	ಮೂಲೆ	ಪೂ–ದ 12–6	9.00	(6.80+10.30)/2	76.95	99318.00	76.43
80	ವಿಜಯನಗರ 2ನೇ ಹಂತ	2542	ಮೂಲೆ	ಪೂ–ದ 12–6	8.70	(8.50+11.80)/2	88.31	99318.00	87.71
81	ವಿಜಯನಗರ 2ನೇ ಹಂತ	2675	ಮೂಲೆ	ಪೂ–ದ 12.00	12.00	(8.40+14.20)/2	135.60	99318.00	134.68
82	ವಿಜಯನಗರ 2ನೇ ಹಂತ	2716/ಐ	ಮೂಲೆ	ಪೂ–ದ 12.00	18.00	(9.50+15.50)/2	225.00	99318.00	223.47
83	ವಿಜಯನಗರ 2ನೇ ಹಂತ	3877	ಮೂಲೆ	ಉ–ಪ 18–9	(2.00+6.00)/2	18.00	72.00	99318.00	71.51
84	ಹೆಬ್ಬಾಳು 1ನೇ ಹಂತ	1190/ಐ	ಮಧ್ಯಂತರ	ದಕ್ಷಿಣ 9.00	18.00	12.00	216.00	73539.00	158.84
85	ಹೆಬ್ಬಾಳು 1ನೇ ಹಂತ	1190/ಹೆಚ್	ಮಧ್ಯಂತರ	ದಕ್ಷಿಣ 9.00	18.00	12.00	216.00	73539.00	158.84
86	ಹೆಬ್ಬಾಳು 3ನೇ ಹಂತ	1269	ಮಧ್ಯಂತರ	ಪಶ್ಚಿಮ 9.00	9.00	12.00	108.00	81292.00	87.80
87	ಹೆಬ್ಬಾಳು 3ನೇ ಹಂತ	1275	ಮಧ್ಯಂತರ	ಪಶ್ಚಿಮ 9.00	8.85	12.00	106.20	81292.00	86.33
88	ಹೆಬ್ಬಾಳು 3ನೇ ಹಂತ	1277	ಮಧ್ಯಂತರ	ಪಶ್ಚಿಮ 9.00	9.00	11.30	101.70	81292.00	82.67
89	ಹೆಬ್ಬಾಳು 3ನೇ ಹಂತ	1279	ಮಧ್ಯಂತರ	ಪಶ್ಚಿಮ 9.00	9.00	11.00	99.00	81292.00	80.48
90	ಹೆಬ್ಬಾಳು 3ನೇ ಹಂತ	1292	ಮೂಲೆ	ಪೂರ್ವ 9.00	17.30	12.00	207.60	82918.00	172.14
91	ಹೆಬ್ಬಾಳು 3ನೇ ಹಂತ	1293	ಮೂಲೆ	ದ–ಪ 9–9	11.00	11.60	127.60	82918.00	105.80
92	ಹೆಬ್ಬಾಳು 3ನೇ ಹಂತ	2880	ಮೂಲೆ	ಪೂ–ದ 9–9	6.00	7.50	45.00	82918.00	37.31
93	ಹೆಬ್ಬಾಳು 3ನೇ ಹಂತ	2903	ಮಧ್ಯಂತರ	ಪಶ್ಚಿಮ 9.00	9.00	12.00	108.00	81292.00	87.80
94	ಹೆಬ್ಬಾಳು 3ನೇ ಹಂತ	2904	ಮಧ್ಯಂತರ	ಪಶ್ಚಿಮ 9.00	9.00	12.00	108.00	81292.00	87.80
95	ಹೆಬ್ಬಾಳು 3ನೇ ಹಂತ	2914	ಮೂಲೆ	ಉ–ಪೂ 9–9	8.00	12.00	96.00	82918.00	79.60
96	ಹೆಬ್ಬಾಳು 3ನೇ ಹಂತ	2915	ಮಧ್ಯಂತರ	ಪೂರ್ವ 9.00	9.00	12.00	108.00	81292.00	87.80
97	ಹೆಬ್ಬಾಳು 1ನೇ ಹಂತ	ಹೆಚ್1/2	ಮಧ್ಯಂತರ	ಉತ್ತರ 9.00	13.50	6.00	81.00	73539.00	59.57
98	ಹೆಬ್ಬಾಳು 1ನೇ ಹಂತ	ಹೆಚ್1/5	ಮಧ್ಯಂತರ	ಉತ್ತರ 9.00	13.50	6.00	81.00	73539.00	59.57
99	ಹೆಬ್ಬಾಳು 1ನೇ ಹಂತ	ಹೆಚ್1/6	ಮೂಲೆ	ಉ–ಪೂ 9.00	13.50	5.80	78.30	74725.00	58.51
100	ಹೆಬ್ಬಾಳು 1ನೇ ಹಂತ	ಹೆಚ್1/7	ಮೂಲೆ	ಉ–ಪ 9.00	12.80	6.30	80.64	74725.00	60.26
101	ಹೆಬ್ಬಾಳು 1ನೇ ಹಂತ	ಹೆಚ್1/12	ಮೂಲೆ	ಉ–ಪೂ 9–18	(5.00+9.00)/2	4.20	29.40	74725.00	21.97
102	ಹೆಬ್ಬಾಳು 1ನೇ ಹಂತ	ಹೆಚ್1/18	ಮೂಲೆ	ದ–ಪ 9.00	9.00	6.00	54.00	74725.00	40.35
103	ಹೆಬ್ಬಾಳು 1ನೇ ಹಂತ	ಹೆಚ್1/19	ಮೂಲೆ	ದ–ಪೂ 9.00	8.90	6.00	53.40	74725.00	39.90
104	ಹೆಬ್ಬಾಳು 1ನೇ ಹಂತ	ಹೆಚ್1/20	ಮಧ್ಯಂತರ	ದಕ್ಷಿಣ 9.00	8.90	6.00	53.40	73539.00	39.27
105	ಹೆಬ್ಬಾಳು 1ನೇ ಹಂತ	ಹೆಚ್1/21	ಮಧ್ಯಂತರ	ದಕ್ಷಿಣ 9.00	8.90	6.00	53.40	73539.00	39.27
106	ಹೆಬ್ಬಾಳು 1ನೇ ಹಂತ	ಹೆಚ್1/22	ಮಧ್ಯಂತರ	ದಕ್ಷಿಣ 9.00	8.90	6.00	53.40	73539.00	39.27
107	ಹೆಬ್ಬಾಳು 1ನೇ ಹಂತ	ಹೆಚ್1/23	ಮಧ್ಯಂತರ	ದಕ್ಷಿಣ 9.00	8.90	6.00	53.40	73539.00	39.27
108	ಹೆಬ್ಬಾಳು 1ನೇ ಹಂತ	ಹೆಚ್1/24	ಮೂಲೆ	ದ–ಪ 9.00	8.90	5.80	51.62	74725.00	38.57
109	ಹೆಬ್ಬಾಳು 1ನೇ ಹಂತ	ಹೆಚ್1/25	ಮೂಲೆ	ಉ–ಪ 9.00	8.80	6.00	52.80	74725.00	39.45
110	ಹೆಬ್ಬಾಳು 1ನೇ ಹಂತ	ಹೆಚ್1/26	ಮಧ್ಯಂತರ	ಉತ್ತರ 9.00	8.80	6.00	52.80	73539.00	38.83
111	ಹೆಬ್ಬಾಳು 1ನೇ ಹಂತ	ಹೆಚ್1/28	ಮಧ್ಯಂತರ	ಉತ್ತರ 9.00	8.80	6.00	52.80	73539.00	38.83
112	ಹೆಬ್ಬಾಳು 1ನೇ ಹಂತ	ಹೆಚ್1/29	ಮಧ್ಯಂತರ	ಉತ್ತರ 9.00	8.80	6.00	52.80	73539.00	38.83
113	ಹೆಬ್ಬಾಳು 1ನೇ ಹಂತ	ಹೆಚ್1/30	ಮೂಲೆ	ಉ–ಪೂ 9.00	8.80	6.00	52.80	74725.00	39.45
114	ಹೆಬ್ಬಾಳು 1ನೇ ಹಂತ	ಹೆಚ್1/33	ಮಧ್ಯಂತರ	ಉತ್ತರ 9.00	8.80	6.00	52.80	73539.00	38.83
115	ಹೆಬ್ಬಾಳು 1ನೇ ಹಂತ	ಹೆಚ್1/36	ಮೂಲೆ	ಉ–ಪೂ 9–18	8.70	5.50	47.85	74725.00	35.76
116	ಹೆಬ್ಬಾಳು 1ನೇ ಹಂತ	ಹೆಚ್1/42	ಮೂಲೆ	ಪ–ದ 9.00	9.00	6.00	54.00	74725.00	40.35
117	ಹೆಬ್ಬಾಳು 1ನೇ ಹಂತ	ಹೆಚ್1/43	ಮೂಲೆ	ಪೂ–ದ 9.00	9.00	5.40	48.60	74725.00	36.32
118	ಹೆಬ್ಬಾಳು 1ನೇ ಹಂತ	ಹೆಚ್1/45	ಮಧ್ಯಂತರ	ದಕ್ಷಿಣ 9.00	9.00	6.00	54.00	73539.00	39.71
119	ಹೆಬ್ಬಾಳು 1ನೇ ಹಂತ	ಹೆಚ್1/46	ಮಧ್ಯಂತರ	ದಕ್ಷಿಣ 9.00	9.00	6.00	54.00	73539.00	39.71
120	ಹೆಬ್ಬಾಳು 1ನೇ ಹಂತ	ಹೆಚ್1/47	ಮಧ್ಯಂತರ	ದಕ್ಷಿಣ 9.00	9.00	6.00	54.00	73539.00	39.71
121	ಹೆಬ್ಬಾಳು 1ನೇ ಹಂತ	ಹೆಚ್1/48	ಮೂಲೆ	ದ–ಪ 9.00	9.00	6.00	54.00	74725.00	40.35
122	ಹೆಬ್ಬಾಳು 1ನೇ ಹಂತ	ಹೆಚ್1/49	ಮೂಲೆ	ಉ–ಪ 9.00	9.00	6.00	54.00	74725.00	40.35
123	ಹೆಬ್ಬಾಳು 1ನೇ ಹಂತ	ಹೆಚ್1/51	ಮಧ್ಯಂತರ	ಉತ್ತರ 9.00	9.00	6.00	54.00	73539.00	39.71
124	ಹೆಬ್ಬಾಳು 1ನೇ ಹಂತ	ಹೆಚ್1/54	ಮೂಲೆ	ಉ–ಪೂ 9.00	9.00	5.80	52.20	74725.00	39.01
125	ಹೆಬ್ಬಾಳು 1ನೇ ಹಂತ	ಹೆಚ್1/67	ಮೂಲೆ	ಪೂ–ದ 18.00	8.70	6.00	52.20	74725.00	39.01
126	ಹೆಬ್ಬಾಳು 1ನೇ ಹಂತ	ಹೆಚ್1/72	ಮೂಲೆ	ದ–ಪ 18.00	8.70	5.50	47.85	74725.00	35.76
127	ಹೆಬ್ಬಾಳು 2ನೇ ಹಂತ	1123	ಮೂಲೆ	ಪ–ಉ 9.00	(3.60+5.90)/2	9.00	42.75	64489.00	27.57
128	ದೇವನೂರು 3ನೇ ಹಂತ	3526/ಎ	ಮಧ್ಯಂತರ	ಪೂರ್ವ 9.00	6.00	9.00	54.00	70400.00	38.02
129	ದೇವನೂರು 3ನೇ ಹಂತ	3526/ಬಿ	ಮಧ್ಯಂತರ	ಪೂರ್ವ 9.00	6.00	9.00	54.00	70400.00	38.02
130	ದೇವನೂರು 3ನೇ ಹಂತ	3526/ಸಿ	ಮಧ್ಯಂತರ	ಪೂರ್ವ 9.00	6.00	9.00	54.00	70400.00	38.02
131	ದೇವನೂರು 3ನೇ ಹಂತ	3526/ಡಿ	ಮಧ್ಯಂತರ	ಪೂರ್ವ 9.00	6.00	9.00	54.00	70400.00	38.02
132	ದೇವನೂರು 3ನೇ ಹಂತ	3526/ಇ	ಮಧ್ಯಂತರ	ಪೂರ್ವ 9.00	6.00	9.00	54.00	70400.00	38.02
133	ದೇವನೂರು 3ನೇ ಹಂತ	3774	ಮಧ್ಯಂತರ	ಉತ್ತರ 9.00	9.00	6.00	54.00	70400.00	38.02
134	ದೇವನೂರು 3ನೇ ಹಂತ	3775	ಮಧ್ಯಂತರ	ಉತ್ತರ 9.00	9.00	6.00	54.00	70400.00	38.02
135	ದೇವನೂರು 3ನೇ ಹಂತ	3776	ಮಧ್ಯಂತರ	ಉತ್ತರ 9.00	9.00	6.00	54.00	70400.00	38.02
136	ದೇವನೂರು 3ನೇ ಹಂತ	3777	ಮಧ್ಯಂತರ	ಉತ್ತರ 9.00	9.00	6.00	54.00	70400.00	38.02
137	ದೇವನೂರು 2ನೇ ಹಂತ 2ನೇ ಫೇಸ್	2131	ಮೂಲೆ	ಉತ್ತರ 18.00	18.00	12.00	216.00	70400.00	152.06
138	ದೇವನೂರು 2ನೇ ಹಂತ 2ನೇ ಫೇಸ್	2157	ಮೂಲೆ	ಉತ್ತರ 18.00	18.00	12.00	216.00	70400.00	152.06
139	ದೇವನೂರು 2ನೇ ಹಂತ 2ನೇ ಫೇಸ್	2819	ಮೂಲೆ	ಪೂರ್ವ 18–9	15.00	24.00	360.00	70400.00	253.44
140	ದೇವನೂರು 2ನೇ ಹಂತ 2ನೇ ಫೇಸ್	2897	ಮೂಲೆ	ಉತ್ತರ 18.00	18.00	12.00	216.00	70400.00	152.06
141	ದೇವನೂರು 2ನೇ ಹಂತ 2ನೇ ಫೇಸ್	2918	ಮೂಲೆ	ಉತ್ತರ 24.00	24.00	15.00	360.00	70400.00	253.44
142	ದೇವನೂರು 2ನೇ ಹಂತ 2ನೇ ಫೇಸ್	2941	ಮಧ್ಯಂತರ	ಪಶ್ಚಿಮ 9.00	12.00	18.00	216.00	45420.00	98.11
143	ಕೆಸರೆ 3ನೇ ಹಂತ	789	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
144	ಕೆಸರೆ 3ನೇ ಹಂತ	790	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
145	ಕೆಸರೆ 3ನೇ ಹಂತ	791	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
146	ಕೆಸರೆ 3ನೇ ಹಂತ	792	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
147	ಕೆಸರೆ 3ನೇ ಹಂತ	793	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
148	ಕೆಸರೆ 3ನೇ ಹಂತ	795	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
149	ಕೆಸರೆ 3ನೇ ಹಂತ	796	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
150	ಕೆಸರೆ 3ನೇ ಹಂತ	800	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
151	ಕೆಸರೆ 3ನೇ ಹಂತ	804	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
152	ಕೆಸರೆ 3ನೇ ಹಂತ	805	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
153	ಕೆಸರೆ 3ನೇ ಹಂತ	806	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
154	ಕೆಸರೆ 3ನೇ ಹಂತ	807	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
155	ಕೆಸರೆ 3ನೇ ಹಂತ	808	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
156	ಕೆಸರೆ 3ನೇ ಹಂತ	809	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
157	ಕೆಸರೆ 3ನೇ ಹಂತ	811	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
158	ಕೆಸರೆ 3ನೇ ಹಂತ	816	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
159	ಕೆಸರೆ 3ನೇ ಹಂತ	817	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
160	ಕೆಸರೆ 3ನೇ ಹಂತ	818	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91

ಮುಂದುವರೆದಿದೆ...2

ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಸರಿಸಾಟಿ ಯಾರಿದ್ದಾರೆ?

ಸಿದ್ದರಾಮಯ್ಯನವರಿಗೆ ಹೋಲಿಸುವುದು ಸರಿಯಲ್ಲ; ಯತೀಂದ್ರ ಸಿದ್ದರಾಮಯ್ಯ ವಿರುದ್ಧ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಪರೋಕ್ಷ ವಾಗ್ದಾಳಿ

ಮಂಡ್ಯ,ಜು.27– ಹಳೇ ಮೈಸೂರು ಭಾಗ ಸುಭೀಕ್ಷವಾಗಿ, ಅಭಿವೃದ್ಧಿಯಾಗಿ, ಇಲ್ಲಿನ ಜನ ಸಂತೃಪ್ತ ಜೀವನ ನಡೆಸುತ್ತಿದ್ದಾರೆಂದರೆ ಅದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರಣ. ಅವರ ಅಭಿವೃದ್ಧಿ ಕೆಲಸಗಳಿಗೆ ಅನ್ಯರನ್ನು ಹೋಲಿಕೆ ಮಾಡುವುದು ತಪ್ಪು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒಡೆಯರ್‌ಗೆ ಹೋಲಿಸಿದ್ದ ವಿಧಾನಪರಿಷತ್ ಸದಸ್ಯ ಯತೀಂದ್ರ ಅವರ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಸರಿಸಾಟಿ ಯಾರಿದ್ದಾರೆ? ಎಂದು ಪ್ರಶ್ನಿಸಿದರು.

ಭಾನುವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಎನ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ 10 ಸಾವಿರ ಮಂದಿಗೆ ಹೆಲ್ಮೆಟ್ ವಿತರಣೆ ಹಾಗೂ ಕ್ಷೇತ್ರದ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಂಡ್ಯ ಜಿಲ್ಲೆ ರಾಜ್ಯದಲ್ಲಿ ಹೆಸರು ಮಾಡಲು ಕಾರಣ ಕೆಆರ್‌ಎಸ್ ಅಣೆಕಟ್ಟೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಈ ಡ್ಯಾಂ ಅನ್ನು



ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದವರಿಗೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಹೆಲ್ಮೆಟ್ ವಿತರಿಸಿದರು.

ನಿರ್ಮಿಸಿ ರೈತರು ಬೆಳೆ ಬೆಳೆಯಲು ಅವಕಾಶ ಮಾಡಿಕೊಟ್ಟರು. ಜೊತೆಗೆ ಮಂಡ್ಯ, ಮೈಸೂರು, ಬೆಂಗಳೂರು, ತಮಿಳುನಾಡಿನ ಜನ ನೀರು ಕುಡಿಯಲು ಕಾರಣವಾಗಿದ್ದಾರೆ. ಕೆಆರ್‌ಎಸ್ ಇಲ್ಲದಿದ್ದರೆ ನಮ್ಮ ಕಥೆ ಏನಾಗುತ್ತಿತ್ತು. ನೀರು ತಮಿಳುನಾಡಿಗೆ ಹರಿದು ಕೊಂಡು ಹೋಗುತ್ತಿತ್ತು. ಈ ಮೂಲಕ ಡ್ಯಾಂ ಕಟ್ಟಿ ಲಕ್ಷಾಂತರ ಜನರ ಬದುಕು ಕಟ್ಟಿಕೊಟ್ಟ ಒಡೆಯರ್‌ಗೆ ಬೇರೆಯವರನ್ನು ಹೋಲಿಕೆ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಒಡೆಯರ್ ಅವರು ಸಕ್ಕರೆ ಕಾರ್ಖಾನೆ, ಶಿಂಷಾದಲ್ಲಿ ವಿದ್ಯುತ್ ಉತ್ಪಾದನೆ, ಸೋಪು ಕಾರ್ಖಾನೆ, ಮೈಸೂರು ವಿವಿ ನಿರ್ಮಾಣ ಮಾಡಿದರು. ಅವರಿಗೆ ಸರಿಸಾಟಿ ಯಾರಾದರೂ ಇದ್ದಾರೆಯೇ? ಅವರು ತಮ್ಮ ಮನೆಗೆ ಏನೂ ಮಾಡಿಕೊಂಡಿಲ್ಲ, ಸಮಾಜಕ್ಕೆ ಕೊಡುಗೆ

> ಬಾಲಗಂಗಾಧರಸ್ವಾಮೀಜಿ ಮಠವನ್ನು ವಿದ್ಯಾಕೇಂದ್ರ ಮಾಡಿದರು. ರಾಮನಗರ ಶಾಖಾ ಮಠದಲ್ಲಿ ಕಣ್ಣಿಲ್ಲದ ಮಕ್ಕಳಿಗೆ ವಿದ್ಯೆ ಕೊಟ್ಟಿದ್ದಾರೆ. ಬಡವರಿಗೆ, ಜಾತಿ, ಮತ ನೋಡದೇ ವಿದ್ಯೆ ಕೊಟ್ಟಿದ್ದಾರೆ. ಕೇವಲ ಮಠದಲ್ಲಿ ಕುಳಿತು ಪ್ರವಚನ ಕೊಡದೇ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ಶ್ರೀಗಳು ನಮಗೆ ದಾರಿ ದೀಪವಾಗಿದ್ದಾರೆ. ಕಾವಿ ಹಾಕಿರುವ ಮಠಾಧೀಶರು ಅವರದ್ದೇ ಕೊಡುಗೆಯನ್ನು ಸಮಾಜಕ್ಕೆ ಕೊಟ್ಟರೆ, ಇತ್ತ ಒಡೆಯರ್ ಅವರು ತನ್ನದೇ ಆದ ಕೊಡುಗೆಯನ್ನು ನೀಡಿದ್ದಾರೆ. – ಆರ್.ಅಶೋಕ್

ಕೊಟ್ಟಿದ್ದಾರೆ. ಅನೇಕ ರಾಜರ ಜೊತೆಗೆ ಕಲ್ಬುರ್ಗಿ, ಬೀದರ್ ಆಳಿದವರು ಬಂದ ಹಣವನ್ನು ಮನೆ, ಮಠಕ್ಕೆ ಇಟ್ಟುಕೊಂಡರು. ಸಮಾಜಕ್ಕೆ ಅವರ ಕೊಡುಗೆ ಶೂನ್ಯ. ಒಡೆಯರ್ ಮನೆಯ ಒಡವೆಯನ್ನು ಅಡವಿಟ್ಟು ಕೆಆರ್‌ಎಸ್ ಕಟ್ಟಿದರು. ಅದಕ್ಕೆ ಜನ ಈಗಲು ಒಡೆಯರ್ ಅವರನ್ನು ಸ್ಮರಿಸುತ್ತಾರೆ ಎಂದರು.

ಕೆಲವರು ನಾವೇ ಸಮಾಜ ಸುಧಾರಕರು, ಎಲ್ಲಾ ಜಾತಿ, ಸಮುದಾಯಕ್ಕೆ ನ್ಯಾಯ ಕೊಟ್ಟಿದ್ದು ನಾನೇ ಎನ್ನುತ್ತಾರೆ. ನಾನು ಎಂಬ ಅಹಂಕಾರ ಸಾಕಷ್ಟಿದೆ. ಆ ಕಾಲದಲ್ಲೇ ಒಡೆಯರ್ ಅವರು ಎಲ್ಲಾ ಸಮುದಾಯವನ್ನು ಗುರುತಿಸಿ ಪ್ರಾತಿನಿಧ್ಯ ಕೊಟ್ಟರು. ಇದರಿಂದ ಹಳೇ ಮೈಸೂರು ಭಾಗ ಅಭಿವೃದ್ಧಿ ಕಂಡಿದೆ. ನಾನು ಯಾರಿಗೆ ಯಾರನ್ನು ಹೋಲಿಕೆ ಮಾಡಲ್ಲ. ಏಕೆಂದರೆ ನನ್ನ ತಲೆ ಕೆಟ್ಟಿಲ್ಲ ಚೆನ್ನಾಗಿದೆ ಎಂದು ವ್ಯಂಗ್ಯವಾಡಿದರು.

ಸಮಾಜಕ್ಕೆ ಒಳ್ಳೆಯ ಕೆಲಸ ಮಾಡಬೇಕೆಂಬ ಕನಸು ರಾಜಕಾರಣಿಗಳಿಗೂ ಇರಬೇಕು. ಪ್ರತಿ ಚುನಾವಣಾ ಸಮಯದಲ್ಲೂ ಮಂಡ್ಯದ ಜನ ನ್ಯಾಯದ ತಕ್ಕಡಿಯನ್ನು ಸಮರ್ಪಕವಾಗಿ ತೂಗಿಸುತ್ತಾರೆ. ಇಲ್ಲಿನ ಜನಕ್ಕೆ ಗೆದ್ದವರನ್ನು ಬೀಳಿಸುವುದು ಗೊತ್ತು, ಸೋತವರನ್ನು ಕೈ ಹಿಡಿದು ಮೇಲಕ್ಕೆತ್ತುವುದು ಸಹ ಗೊತ್ತು. ನಾವು ಜನಕ್ಕೆ ಏನು ಒಳ್ಳೆಯದನ್ನು ಮಾಡಬೇಕೆಂದು ಯೋಚಿಸಬೇಕು. ರಾಜಕಾರಣಿಗಳಾದ ನಾವು ಜನಕ್ಕೆ ತಿನ್ನಲು ಮೀನನ್ನು ಕೊಡಬಾರದು. ಜನರೇ ಮೀನನ್ನು ಹಿಡಿದು ತಿನ್ನುವ ಹಾಗೆ ಜೊತೆಗೆ ಬೇರೆಯವರಿಗೂ ತಿನ್ನಿಸುವ ಹಾಗೆ ಶಕ್ತಿ ತುಂಬಬೇಕು ಎಂದು ಹೇಳಿದರು.

ಬಿಜೆಪಿ ಮುಖಂಡ ಸಚ್ಚಿದಾನಂದ ಕಳೆದ 2 ವರ್ಷಗಳಿಂದ ಶ್ರೀರಂಗ ಪಟ್ಟಣ ಕ್ಷೇತ್ರಕ್ಕೆ ಅಧಿಕಾರ ಇಲ್ಲದಿದ್ದರೂ ಸಾಕಷ್ಟು ಶ್ರಮಿಸುತ್ತಿದ್ದಾರೆ. ನಾನು ಕಂದಾಯ ಸಚಿವನಾಗಿದ್ದಾಗ ಶ್ರೀರಂಗಪಟ್ಟಣದ ಕೆಆರ್‌ಎಸ್‌ನಲ್ಲಿ ಹಕ್ಕುಪತ್ರ ವಿತರಣೆ ಮಾಡಿಸಿದರು. 50 ವರ್ಷಗಳಿಂದ ಅವರಿಗೆ ಹಕ್ಕುಪತ್ರ ಇರಲಿಲ್ಲ, ಆದರೆ ಹಕ್ಕುಪತ್ರ ಕೊಡಿಸುವ ಕೆಲಸ ಮಾಡಿದರು. ಮೊನ್ನೆ ಸಹ ಹೆಲ್ಮೆಟ್ ಕೊಡ ಬೇಕೆಂಬ ನಿಟ್ಟಿನಲ್ಲಿ ಜನರ ಜೀವ ಕಾಪಾಡುವ ನಿಟ್ಟಿನಲ್ಲಿ 10 ಸಾವಿರ ಹೆಲ್ಮೆಟ್ ಹಂಚಿದ್ದಾರೆ. ಮುಂದಿನ ದಿನಗ ಳಲ್ಲಿ ಸಚ್ಚಿದಾನಂದ ಒಳ್ಳೆಯ ನಾಯಕರಾಗಿ, ಬೆಳೆಯಲಿ, ಅವರಿಗೆ ಅಧಿಕಾರ ಸಿಗಲಿ ಎಂದು ಆಶಿಸಿದರು.

> ಕೆಂಗಲ್ ಹನುಮಂತಯ್ಯ ವಿಧಾನಸೌಧ ಕಟ್ಟಿದರೆ, ಎಸ್.ಎಂ.ಕೃಷ್ಣ ಅವರು ಬೆಂಗಳೂರು ನಗರಕ್ಕೆ ಕಾಯಕಲ್ಪ ಕೊಟ್ಟು ಕೋಟಿಗಟ್ಟಲೇ ಆದಾಯ ಬರುವಂತೆ ಮಾಡಿದ್ದಾರೆ. ಆದರೆ ಇತ್ತೀಚಿಗೆ ಅಧಿಕಾರದಲ್ಲಿರುವವರು ಮಾತ್ರ ನಾವೇ ಬೆಂಗಳೂರನ್ನು ಅಭಿವೃದ್ಧಿ ಮಾಡುತ್ತಿದ್ದೇವೆಂದು ಹೇಳಿಕೊಂಡು ಓಡಾಡುತ್ತಿದ್ದಾರೆ. – ಆರ್.ಅಶೋಕ್.

ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಹೆಲ್ಮೆಟ್ ಮತ್ತು ಮೆಡಿಕಲ್ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಿದರು. ಆದಿಚುಂಚನಗಿರಿ ಮಠದ ಪೀಠಾಧಿಪತಿ ಶ್ರೀ ನಿರ್ಮಲಾನಂದನಾಥಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ವೇದಿಕೆಯಲ್ಲಿ ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ, ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ, ಮಾಜಿ ಸಚಿವ ಕೆ.ಸಿ.ನಾರಾಯಣ ಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ, ಮುಖಂಡರಾದ ಅಶೋಕ್ ಜಯರಾಂ, ಶ್ರೀಧರ್, ಯಮದೂರು ಸಿದ್ದರಾಜು, ಅಶೋಕ್, ಪೀಹಳ್ಳಿ ರಮೇಶ್ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ಕ್ರ ಸಂ	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ		ವಿಸ್ತೀರ್ಣ ಚ.ಮೀ ಗಳಲ್ಲಿ	ಚ.ಮೀ.ಗೆ ನಿಗಧಿ ಪಡಿಸಿರುವ ದರ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
					ಉ–ದ	ಪೂ–ಪ			
161	ಕೆಸರೆ 3ನೇ ಹಂತ	819	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
162	ಕೆಸರೆ 3ನೇ ಹಂತ	821	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
163	ಕೆಸರೆ 3ನೇ ಹಂತ	822	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
164	ಕೆಸರೆ 3ನೇ ಹಂತ	823	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
165	ಕೆಸರೆ 3ನೇ ಹಂತ	824	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
166	ಕೆಸರೆ 3ನೇ ಹಂತ	826	ಮಧ್ಯಂತರ	ದಕ್ಷಿಣ 9.00	9.00	6.00	54.00	333173.00	17.91
167	ಕೆಸರೆ 3ನೇ ಹಂತ	1243	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
168	ಕೆಸರೆ 3ನೇ ಹಂತ	1257	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
169	ಕೆಸರೆ 3ನೇ ಹಂತ	1288	ಮಧ್ಯಂತರ	ಪಶ್ಚಿಮ 9.00	6.00	9.00	54.00	33173.00	17.91
170	ಕೆಸರೆ 3ನೇ ಹಂತ	1289	ಮಧ್ಯಂತರ	ಪಶ್ಚಿಮ 9.00	6.00	9.00	54.00	33173.00	17.91
171	ಕೆಸರೆ 3ನೇ ಹಂತ	1333	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
172	ಕೆಸರೆ 3ನೇ ಹಂತ	1344	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
173	ಕೆಸರೆ 3ನೇ ಹಂತ	1354	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
174	ಕೆಸರೆ 3ನೇ ಹಂತ	1360	ಮಧ್ಯಂತರ	ಪಶ್ಚಿಮ 9.00	6.00	9.00	54.00	33173.00	17.91
175	ಕೆಸರೆ 3ನೇ ಹಂತ	1361	ಮಧ್ಯಂತರ	ಪಶ್ಚಿಮ 9.00	6.00	9.00	54.00	33173.00	17.91
176	ಕೆಸರೆ 3ನೇ ಹಂತ	1365	ಮಧ್ಯಂತರ	ದಕ್ಷಿಣ 9.00	6.00	9.00	54.00	33173.00	17.91
177	ದಟ್ಟಗಳ್ಳಿ 'ಕೆ' ಬ್ಲಾಕ್ (ರಾಮಕೃಷ್ಣನಗರ)	6/ಎ	ಮೂಲೆ	ಉ–ಪೂ 9.00	(0.00+13.50)/2	15.40	103.95	64853.00	67.41
178	ದಟ್ಟಗಳ್ಳಿ 'ಐ' ಬ್ಲಾಕ್ (ರಾಮಕೃಷ್ಣನಗರ)	21/ಬಿ	ಮೂಲೆ	ದ–ಪ 9.00	18.00	(14.50+15.30)/2	268.20	64853.00	173.94
179	ದಟ್ಟಗಳ್ಳಿ 'ಹೆಚ್' ಬ್ಲಾಕ್ (ರಾಮಕೃಷ್ಣನಗರ)	36/ಬಿ	ಮೂಲೆ	ದ–ಪ 18.00	(7.00+18.50)/2	19.30	246.07	64853.00	159.58
180	ದಟ್ಟಗಳ್ಳಿ 'ಹೆಚ್' ಬ್ಲಾಕ್ (ರಾಮಕೃಷ್ಣನಗರ)	106/ಸಿ	ಮೂಲೆ	ದ–ಪ 18.00	(13.00+18.50)/2	18.00	283.50	64853.00	183.86
181	ದಟ್ಟಗಳ್ಳಿ 'ಹೆಚ್' ಬ್ಲಾಕ್ (ರಾಮಕೃಷ್ಣನಗರ)	175/ಡಿ	ಮೂಲೆ	ದ–ಪೂ 18.00	(7.50+12.40)/2	18.00	179.10	64853.00	116.15
182	ದಟ್ಟಗಳ್ಳಿ 'ಹೆಚ್' ಬ್ಲಾಕ್ (ರಾಮಕೃಷ್ಣನಗರ)	176/ಡಿ	ಮೂಲೆ	ದ–ಪ 18.00	(11.80+18.00)/2	18.00	268.20	64853.00	173.94
183	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	28	ಮೂಲೆ	ಪೂ–ದ 9–11.50	12.00	(8.50+19.50)/2	168.00	64986.00	109.18
184	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	56/ಎ	ಮೂಲೆ	ಪ–ದ 9–9	9.00	(6.00+11.30)/2	77.85	64986.00	50.59
185	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	79/ಎ	ಮೂಲೆ	ಪೂ–ದ 9–9	9.00	(4.40+12.50)/2	76.05	64986.00	49.42
186	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	80/ಎ	ಮೂಲೆ	ಪೂ–ಉ 9–9	9.90	(4.20+12.50)/2	82.66	64986.00	53.72
187	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	121/ಎ	ಮೂಲೆ	ಪೂ–ದ 9–9	9.00	(8.00+16.50)/2	110.25	64986.00	71.65
188	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	213	ಮೂಲೆ	ಪೂ–ದ 9–11.5	(5.30+20.00)/2	18.00	227.70	64986.00	147.97
189	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	214	ಮೂಲೆ	ಪೂ–ದ 9–11.50	(11.50+20.00)/2	9.50	149.62	64986.00	97.23
190	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	129	ಮೂಲೆ	ಪೂ–ಉ 9.00	9.00	6.00	54.00	49616.00	26.79
191	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	137	ಮಧ್ಯಂತರ	ಉತ್ತರ 9.00	9.00	6.00	54.00	48643.00	26.27
192	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	142	ಮಧ್ಯಂತರ	ಉತ್ತರ 9.00	9.00	6.00	54.00	48643.00	26.27
193	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	143	ಮಧ್ಯಂತರ	ಉತ್ತರ 9.00	9.00	6.00	54.00	48643.00	26.27
194	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	666	ಮಧ್ಯಂತರ	ದಕ್ಷಿಣ 12.00	12.00	9.00	108.00	48643.00	52.53
195	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	668	ಮಧ್ಯಂತರ	ದಕ್ಷಿಣ 12.00	12.00	9.00	108.00	48643.00	52.53
196	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	671	ಮಧ್ಯಂತರ	ದಕ್ಷಿಣ 12.00	12.00	9.00	108.00	48643.00	52.53
197	ಸಾತಗಳ್ಳಿ 1ನೇ ಹಂತ	1151	ಮಧ್ಯಂತರ	ಉತ್ತರ 9.00	18.00	12.00	216.00	39844.00	86.06
198	ಸಾತಗಳ್ಳಿ 1ನೇ ಹಂತ	1152	ಮಧ್ಯಂತರ	ಉತ್ತರ 9.00	18.00	12.00	216.00	39844.00	86.06
199	ಸಾತಗಳ್ಳಿ 1ನೇ ಹಂತ	1153	ಮಧ್ಯಂತರ	ಉತ್ತರ 9.00	18.00	12.00	216.00	39844.00	86.06
200	ಸಾತಗಳ್ಳಿ 1ನೇ ಹಂತ	1618	ಮಧ್ಯಂತರ	ಪಶ್ಚಿಮ 9.00	15.00	24.00	360.00	39844.00	143.44
			ಒಟ್ಟು						14205.35

ಇ–ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ.

1) ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು, ಭಾರತ ದೇಶದಲ್ಲಿ ನೋಂದಣಿಯಾಗಿರುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪೆನಿಗಳು/ಟ್ರಸ್ಟ್‌ಗಳು ಭಾಗವಹಿಸಬಹುದಾಗಿದೆ. **2)** ಇ–ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಇ–ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ New e-Auction Bidding user manual ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್– 080–46010000 ಮತ್ತು 080–68948777 ಗೆ ಸಂಪರ್ಕಿಸಬಹುದು. 3) ಹರಾಜಿನಲ್ಲಿ ಪಾಲ್ಗೊಳ್ಳುವವರು https://kppp.karnataka.gov.in ವೆಬ್‌ಸೈಟ್ ನಿಂದ ನಿಗಧಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಬೇಕಾಗಿರುತ್ತದೆ. 4) ಇ–ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬೇಕು. **5)** ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು, ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಮುಂತಾದವುಗಳನ್ನು ಖುದ್ದಾಗಿ ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವುದು. ರಸ್ತೆಯ ಅಗಲದ ವ್ಯತ್ಯಾಸ ಅಥವಾ ಇನ್ನಾವುದೇ ಕಾರಣಗಳಿಂದ ಹರಾಜಿನಲ್ಲಿ ಪಡೆದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ / ಬದಲಿ ನಿವೇಶನ ನೀಡಲಾಗುವುದಿಲ್ಲ ಹಾಗೂ ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. **6)** ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು. **7)** ಇ–ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕ್ಷಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಡೆಲ್ಟಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 16.00 ಆಗಿದ್ದು, ನೀವು 15.57 ಕ್ಕೆ ಬಿಡ್ ಮಾಡಿದಾಗ 16.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ. **8)** ಹರಾಜಿಗೊಳಪಡಿಸಲ್ಪಟ್ಟಿರುವ ನಿವೇಶನಗಳ ದರ ರೂ.1.00 ಕೋಟಿಗಿಂತ ಕಡಿಮೆ ಇದ್ದರೆ ರೂ.2.00 ಲಕ್ಷ ಇ.ಎಂ.ಡಿ ಮತ್ತು ನಿವೇಶನಗಳ ದರ ರೂ.1.00 ಕೋಟಿ ಹಾಗೂ ಅಧಿಕವಿದ್ದಲ್ಲಿ ರೂ.4.00 ಲಕ್ಷ ಇ.ಎಂ.ಡಿ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ICICI ಬ್ಯಾಂಕ್‌ಗೆ DEBIT CARD/CREDIT CARD/NET BANKING ಮೂಲಕ ಪಾವತಿಸಬೇಕಾಗಿರುತ್ತದೆ. ಇದರೊಂದಿಗೆ ಹರಾಜು ಸೇವಾ ಶುಲ್ಕವನ್ನು ಬಿಡ್ಡುದಾರರೇ ಭರಿಸತಕ್ಕದ್ದು. **9)** ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.25,000/– ಮತ್ತು ರೂ.1.00 ಕೋಟಿ ಹಾಗೂ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ರೂ.1,00,000/– ಗಳಾಗಿರುತ್ತದೆ. **10)** ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕೃತವಾದ ಬಗ್ಗೆ https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ (ಇ.ಎಂ.ಡಿ. ರೂ.4.00 ಲಕ್ಷ ಅಥವಾ ರೂ.2.00 ಲಕ್ಷ ಹೊರತು ಪಡಿಸಿ) ಬಿಡ್ಡು ಅಂಗೀಕರಿಸಿದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮೈ.ಅ.ಪ್ರಾ, ಮೈಸೂರು ರವರ ಹೆಸರಿನಲ್ಲಿರುವ Commissioner MDA Mysore, Bank of Baroda, Account No.89260100004660 (IFSC Code No. BARB0VJMUDA, 5ನೇ ಅಕ್ಷರ ಸೊನ್ನೆ ಆಗಿರುತ್ತದೆ), ಖಾತೆಗೆ ಪಾವತಿ ಮಾಡಬಹುದಾಗಿರುತ್ತದೆ. ಶೇಕಡ 25 ರಷ್ಟು ಹಣ ಪಾವತಿಸಿದ ಬಗ್ಗೆ ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು. ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಸದರಿ ನಿವೇಶನವನ್ನು ಮರು ಹರಾಜಿಗೆ ಒಳಪಡಿಸಲಾಗುವುದು. **11)** ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮೈ.ಅ.ಪ್ರಾ. ಕಾಯ್ದಿರಿಸಿಕೊಂಡಿದೆ. **12)** ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆ) ನಿಯಮ ಕಲಂ 6(2) ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. **13)** ಇ–ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು https://kppp.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ. **14)** ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು. **15)** ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಸಹ ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಸೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು. **16)** ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿ ರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ. **17)** ಆದಾಯ ತೆರಿಗೆ ಕಾಯ್ದೆ 1961 ರ ಕಾಲಂ 194 ಐಎ ಪ್ರಕಾರ ಹರಾಜಾದ ಸ್ವತ್ತಿನ ಒಟ್ಟು ಮೊತ್ತವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ ಹರಾಜು ಖರೀದಿದಾರರು ನಿವೇಶನದ ಒಟ್ಟು ಮೊತ್ತದಲ್ಲಿ ಶೇಕಡ 1 ರಷ್ಟು ಮೊತ್ತವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆ ಪಾವತಿಸತಕ್ಕದ್ದು. **18)** ಹರಾಜು ಪ್ರಕಟಣೆಯಲ್ಲಿ ನೀಡಿರುವ ರೇಖಾಂಶ ಮತ್ತು ಅಕ್ಷಾಂಕಗಳು ಕೆಲವೊಮ್ಮೆ ಕೈತಪ್ಪಿನಿಂದ ನಿಖರವಾಗಿ ನಿವೇಶನವನ್ನು ಗುರುತಿಸದೇ ಇದ್ದ ಪಕ್ಷದಲ್ಲಿ ಪ್ರಕಟಣೆಯಲ್ಲಿ ನೀಡಿರುವ ಸಂಬಂಧಪಟ್ಟ ಅಭಿಯಂತರರನ್ನು ಸಂಪರ್ಕಿಸಿ ಖಚಿತಪಡಿಸಿಕೊಳ್ಳಬಹುದಾಗಿದೆ. ರೇಖಾಂಶ ಮತ್ತು ಅಕ್ಷಾಂಕಗಳು ವ್ಯತ್ಯಾಸವಾಗಿರುವುದಾಗಿ ತಿಳಿಸಿ ಪಾವತಿಸಿರುವ ಹಣವನ್ನು ಮರುಪಾವತಿ ಕೋರಿದ್ದಲ್ಲಿ ಮರುಪಾವತಿಸಲು ಅವಕಾಶವಿರುವುದಿಲ್ಲ. 19) ನಿವೇಶನಗಳ ಸ್ಥಳದ (Location), ಅಭಿಮುಖ, ರಸ್ತೆ ಅಳತೆ ಇನ್ನಿತರೆ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ **ಅ)** ವಲಯ ಕಛೇರಿ–1 – 1. ನಂಜನಗೂಡು ಬಸವನಗುಡಿ ಬ್ಲಾಕ್, ನಾಚನಹಳ್ಳಿ–ಕುಪ್ಪಲೂರು 3ನೇ ಹಂತ, ಜೆ.ಪಿ.ನಗರ ಬಡಾವಣೆ, ಶ್ರೀರಾಂಪುರ 2ನೇ ಹಂತ ಮತ್ತು 3ನೇ ಹಂತ ಬಡಾವಣೆ – ಶ್ರೀ. ಕಾಂತರಾಜ ಚಾರಿ.ಎಸ್, ಕಿ.ಅ., ಮೊಬೈಲ್ ನಂ.8660240351. **ಆ)** ವಲಯ ಕಛೇರಿ–3 – ವಿಜಯನಗರ 3ನೇ ಹಂತ ಮತ್ತು ವಿಜಯನಗರ 4ನೇ ಹಂತ ಬಡಾವಣೆ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. **ಇ)** ವಲಯ ಕಛೇರಿ–4– ಹೆಬ್ಬಾಳು 1, 2 ಮತ್ತು 3ನೇ ಹಂತ ಬಡಾವಣೆ, ವಿಜಯನಗರ 2ನೇ ಹಂತ ಬಡಾವಣೆ – ಶ್ರೀಮತಿ. ಪವಿತ್ರ.ಆರ್,ಸ.ಅ., ಮೊಬೈಲ್ ನಂ.8197542740. **ಉ)** ವಲಯ ಕಛೇರಿ–5ಬಿ – ದೇವನೂರು 2ನೇ ಹಂತ 2ನೇ ಫೇಸ್ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452.

ಊ) ವಲಯ ಕಛೇರಿ–7 – ದಟ್ಟಗಳ್ಳಿ 2ನೇ ಹಂತ ಎಲ್ಲಾ ಬ್ಲಾಕ್ (ರಾಮಕೃಷ್ಣನಗರ) – ಶ್ರೀಮತಿ. ಪವಿತ್ರ.ಆರ್, ಸ.ಅ., ಮೊಬೈಲ್ ನಂ.8197542740. **ಋ)** ವಲಯ ಕಛೇರಿ–8 – ಸಾತಗಳ್ಳಿ 1ನೇ ಮತ್ತು ಹಂಚ್ಯಾ–ಸಾತಗಳ್ಳಿ 'ಬಿ' ವಲಯ ಬಡಾವಣೆ – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640. **20)** ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು www.mudamysore.gov.in ವೆಬ್‌ಸೈಟ್‌ನಿಂದ ನೋಡಬಹುದಾಗಿದೆ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ– 0821–2421629 ಅನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

DIPR/MYSORE/01/SHIRDI SAI/2025-26

ಸಹಿ/– ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಮಾಳಗೂರಿನಲ್ಲಿ ಚಿರತೆ ದಾಳಿ: ರೈತನಿಗೆ ಗಂಭೀರ ಗಾಯ

ಲಕ್ಷ್ಮೀಪುರದಲ್ಲೂ ಚಿರತೆ ಪ್ರತ್ಯಕ್ಷ, ಆತಂಕದಲ್ಲಿ ಗ್ರಾಮಸ್ಥರು

ಕೆ.ಆರ್.ಪೇಟೆ, ಜು.27– ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಮಾಳಗೂರು ಗ್ರಾಮದಲ್ಲಿ ಚಿರತೆಯ ದಾಳಿಗೆ ರೈತ ಗಂಭೀರವಾಗಿ ಗಾಯಗೊಂಡಿರುವ ಘಟನೆ ಶುಕ್ರವಾರ ಸಂಜೆ ಸಂಭವಿಸಿದೆ.


ಸಂತೇಬಾಚಹಳ್ಳಿ ಹೋಬಳಿಯ ಮಾಳಗೂರು ಗ್ರಾಮದ ರೈತ ಶಿವರಾಮೇಗೌಡ ಅವರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಶಿವರಾಮೇಗೌಡರು ಹಸುವನ್ನು ಮೇಯಿಸುತ್ತಿದ್ದಾಗ ಈ ದಾಳಿ ನಡೆದಿದೆ.

ನಾನು ಹಸು ಮೇಯಿಸುತ್ತಿದ್ದಾಗ ಹಸು ಮೇಲೆ ದಾಳಿ ಮಾಡಲು ಮುಂದಾದ ಚಿರತೆ ನಾನು ಅಲ್ಲಿದ್ದ ಕಾರಣ ನನ್ನ ಮೇಲೆ ದಾಳಿ ಮಾಡಿದೆ. ಮುಖ ಹಾಗೂ ಎದೆ ಭಾಗದಲ್ಲಿ ಗಂಭೀರ ಗಾಯವಾಗಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಕೂಡಲೆ ಚಿರತೆ ಸೆರೆ ಹಿಡಿದು ರೈತರಿಗೆ ಅನುಕೂಲ ಮಾಡಿಕೊಡಬೇಕು. ಇಲ್ಲದಿದ್ದರೆ ಅರಣ್ಯ ಇಲಾಖೆಯ ಅಧಿಕಾ ರಿಗಳ ಮನೆ ಮುಂದೆ ತೆರಳಿ ಪ್ರತಿಭಟನೆ ಮಾಡುತ್ತೇವೆ ಎಂದು ಗಾಯಾಳು ಶಿವರಾಮೇಗೌಡ ಎಚ್ಚರಿಕೆ ನೀಡಿದರು.

ಕೆ.ಆರ್.ಪೇಟೆ ದುಂಡಶೆಟ್ಟಿ ಲಕ್ಷ್ಮಮ್ಮ ಸ್ಮಾರಕ ಸರ್ಕಾರಿ ತಾಲೂಕು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ರೈತ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಈಗಲಾದರೂ ಅರಣ್ಯ ಇಲಾಖೆಯ ಅಧಿಕಾರಿಗಳು ಚಿರತೆ ಕಾಣಿಸಿಕೊಂಡ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಕಾರ್ಯಾಚರಣೆ ನಡೆಸಿ ಚಿರತೆ ಹಾವಳಿಯನ್ನು ದೂರ ಮಾಡಬೇಕು ಎಂದು ರೈತ ಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ ಆಗ್ರಹಿಸಿದ್ದಾರೆ.

ಚಿರತೆ ಪ್ರತ್ಯಕ್ಷ: ತಾಲೂಕಿನ ಕಸಬಾ ಹೋಬಳಿಯ ಲಕ್ಷ್ಮೀಪುರ ಗ್ರಾಮದ ಬಳಿ ರಾತ್ರಿ ಚಿರತೆ ಪ್ರತ್ಯಕ್ಷವಾಗಿದೆ. ರಸ್ತೆ ಬದಿಯಲ್ಲಿ ಕಾರಿನಲ್ಲಿ ಹೋಗುತ್ತಿದ್ದ ಪ್ರಯಾಣಿಕರಿಗೆ ಚಿರತೆ ಕಾಣಿಸಿಕೊಂಡಿದೆ. ತಕ್ಷಣ ಕಾರಿನಲ್ಲಿ ಹೋಗುತ್ತಿದ್ದವರು ಚಿರತೆಯ ಚಲನವಲನವನ್ನು ತಮ್ಮ ಮೊಬೈಲ್‌ನಲ್ಲಿ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟಿದ್ದಾರೆ.

ತಾಲೂಕು ಅಂಬರೀಶ್ ಅಭಿಮಾನಿಗಳ ಸಂಘದ ಅಧ್ಯಕ್ಷ ಅಗ್ರಹಾರಬಾಚಹಳ್ಳಿ ಜಬೀಉಲ್ಲಾ ಅವರು ಕಾರಿನಲ್ಲಿ ಮೈಸೂರಿನಿಂದ ಬರುವಾಗ ಮುರುಕನಹಳ್ಳಿ



ಲಕ್ಷ್ಮೀಪುರದ ಬಳಿ ಕಾಣಿಸಿಕೊಂಡಿರುವ ಚಿರತೆ.

ತೋಟಗಾರಿಕಾ ಫಾರಂ ಕಾಂಪೌಂಡ್ ಮೇಲೆ ಕುಳಿತಿದ್ದ ಚಿರತೆಯು ರಸ್ತೆ ದಾಟಲು ಪ್ರಯತ್ನಿಸುತ್ತಿರುವುದು ಕಂಡು ಬಂದಿದೆ. ಆದರೆ ರಸ್ತೆಯಲ್ಲಿ ಕಾರಿನಲ್ಲಿ ಚಲಿಸುವ ಸಾರ್ವಜನಿಕರನ್ನು ಕಂಡು ವಾಪಸ್ ಫಾರಂನೊಳಗೆ ಹೋಗಿದೆ.

ಪಾಂಡವಪುರದಲ್ಲಿ ರಾಜ್ಯ ಮಟ್ಟದ ಶ್ವಾನಗಳ ಪ್ರದರ್ಶನ

200ಕ್ಕೂ ಹೆಚ್ಚು 35 ತಳಿಯ ಶ್ವಾನಗಳು ಭಾಗಿ, ಪ್ರೇಕ್ಷಕರ ಮೆಚ್ಚುಗೆ ಪಡೆದ ಶ್ವಾನಗಳು

ಪಾಂಡವಪುರ, ಜು.27– ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ಸಾರಥ್ಯದಲ್ಲಿ ಸ್ನೇಹಲೋಕ ಚಲುವರಾಜು ಅವರ ಸ್ಮರಣಾರ್ಥ ಪಾಂಡವ ಪೆಟ್ ಲವರ್ಸ್ ವತಿಯಿಂದ ರಾಜ್ಯಮಟ್ಟದ ಶ್ವಾನಪ್ರದರ್ಶನ ನಡೆಯಿತು.

ಇದೇ ಮೊದಲ ಬಾರಿಗೆ ನಡೆದ ರಾಜ್ಯಮಟ್ಟದ ಶ್ವಾನ ಪ್ರದರ್ಶನ ಕಾರ್ಯಕ್ರಮವನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು. ಶ್ವಾನ ಪ್ರದರ್ಶನದಲ್ಲಿ ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದ 35ಕ್ಕೂ ಅಧಿಕ ವಿವಿಧ ಜಾತಿಯ 200ಕ್ಕೂ ಹೆಚ್ಚು ನಾಯಿಗಳು ಭಾಗವಹಿಸಿ ಪ್ರದರ್ಶನ ನೀಡಿದವು. ಶ್ವಾನ ಪ್ರದರ್ಶನದಲ್ಲಿ ಭಾಗವಹಿಸಲು ಮಾಲೀಕರು ಕರೆತಂದಿದ್ದ ಶ್ವಾನಗಳಿಗೆ ವಿವಿಧ ವಿನ್ಯಾಸಗಳಿಂದ ಅಲಂಕಾರಗೊಳಿಸಿ ಕರೆತಂದು ಪ್ರದರ್ಶನ ನಡೆಸಿದರು.

ತೀರ್ಪುಗಾರರಾಗಿ ಭಾಗವಹಿಸಿದ್ದ ಬೆಂಗಳೂರಿನ ವಿಶ್ವಾಸ್ ಬಸವರಾಜು ಹಾಗೂ ಶೇಖರ್ ರಾವ್ ಅವರು ಶ್ವಾನ ಪ್ರದರ್ಶನದಲ್ಲಿ ಭಾಗವಹಿಸಿ ಶ್ವಾನಗಳ ನಡಿಗೆ, ಮುಖಭಾವ, ವಿನ್ಯಾಸ, ಕೌಶಲತೆ ಹಾಗೂ ಸ್ವಚ್ಛತೆ ಕುರಿತು ವೀಕ್ಷಣೆ ಮಾಡುವ ಮೂಲಕ ಬಹುಮಾನಕ್ಕೆ ಆಯ್ಕೆ ಮಾಡಿದರು.

ಶ್ವಾನ ಪ್ರದರ್ಶನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ ಶ್ವಾನಕ್ಕೆ ಮೊದಲ ಬಹುಮಾನ 1.50ಲಕ್ಷ ನೀಡಲಾಯಿತು. ಭಾಗವಹಿಸಿದ ಎಲ್ಲಾ ಶ್ವಾನಗಳಿಗೂ ಸಮಾಧಾನಕರ ಬಹುಮಾನ ನೀಡಲಾಯಿತು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಪಾಂಡವ ಪೆಟ್ ಲವರ್ಸ್ ವತಿಯಿಂದ ನಡೆಯುತ್ತಿರುವ ರಾಜ್ಯಮಟ್ಟದ ಶ್ವಾನ ಪ್ರದರ್ಶನಕ್ಕೆ ರಾಜ್ಯದ



ಶ್ವಾನ ಪ್ರದರ್ಶನದಲ್ಲಿ ಭಾಗವಹಿಸಿರುವ ವಿವಿಧ ಜಾತಿ ತಳಿಯ ಶ್ವಾನಗಳು.

ನಾನಾ ಭಾಗಗಳಿಂದ 200ಕ್ಕೂ ಅಧಿಕ ಶ್ವಾನಗಳು ಭಾಗವಹಿಸಿವೆ, ನಿಯತ್ತಿಗೆ ಹೆಸರಾಗಿರುವ ಶ್ವಾನಗಳ ಪ್ರದರ್ಶನ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಶ್ವಾನ ಪ್ರಿಯರು ಶ್ವಾನಗಳನ್ನು ತಮ್ಮ ಮಕ್ಕಳಂತೆ ಪಾಲನೆ ಪೋಷಣೆ ಮಾಡಿ ಆರೈಕೆ ಮಾಡುತ್ತಾರೆ. ದೇಶದ ದೊಡ್ಡ ಉದ್ಯಮಿಯಾದ ರತನ್ ಟಾಟಾ ಅವರು ಸಾವನ್ನಪ್ಪಿದ್ದ ಸಂದರ್ಭದಲ್ಲಿ ಅವರು ಸಾಕಿದ್ದ ಶ್ವಾನ ಹೋಗಿ ಅವರ ಮೃತದೇಹಕ್ಕೆ ಮುತ್ತಿಡುತ್ತದೆ ಎಂದರೆ ಮನುಷ್ಯರ ಮೇಲೆ ಶ್ವಾನಗಳು ಪ್ರೀತಿ ಎಷ್ಟಿದೆ ಎನ್ನುವುದನ್ನು ನಾವೆಲ್ಲರು ಮನಗಾಣಬೇಕು ಎಂದರು.

ನಾನು ಸಹ ಮನೆಯಲ್ಲಿ ಶ್ವಾನಗಳನ್ನು ಸಾಕಿದ್ದೇನೆ, ನನ್ನ ಸ್ನೇಹಿತ ಮತ್ತಿಕೆರೆ ಜಯರಾಮು ಅವರು ನೀಡಿದ ಶ್ವಾನ ಎಂಬ ತಳಿಗೆ ಸುಬ್ಬ(ರಾಕಿ) ಎಂದು ಹೆಸರಿಟ್ಟಿದ್ದೇನೆ, ಜತೆಗೆ ಬೈರ ಎಂಬ ಮತ್ತೊಂದು ಶ್ವಾನ ಸಾಕಿದ್ದೇವೆ, ನಮಗೆ ಅದರ ಮೇಲೆ ಪ್ರೀತಿ ಎಷ್ಟಿದೆ ಎಂದರೆ ನಾವು ಎಲ್ಲೇ ಇದ್ದರೂ ದಿನಕ್ಕೊಮ್ಮೆಯಾದರು ವಿಡಿಯೋ ಕಾಲ್ ಮಾಡಿ ನೋಡಿ ಅದರೊಂದಿಗೆ ಮಾತನಾಡುತ್ತೇವೆ. ಮನುಷ್ಯರು ಸಹ ಜೀವನದಲ್ಲಿ ಶ್ವಾನದಿಂದ ನಿಯತ್ತು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಸಮಾರಂಭದಲ್ಲಿ ಪುರಸಭೆ ಅಧ್ಯಕ್ಷೆ ಜ್ಯೋತಿಲಕ್ಷ್ಮಿ, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಪುರಸಭೆ ಮಾಜಿ ಅಧ್ಯಕ್ಷ ಆರ್.ಸೋಮಶೇಖರ್, ಎಂ.ಗಿರೀಶ್, ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ಎ.ಮಲ್ಲೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಚಲುವೇಗೌಡ, ಬಿಜೆಪಿ ಮುಖಂಡ ಎಚ್.ಎನ್.ಮಂಜುನಾಥ್, ಜೆಡಿಎಸ್ ಮುಖಂಡ ಚಿಕ್ಕಾಡೆ ಚೇತನ್, ತೀರ್ಪುಗಾರರಾದ ವಿಶ್ವಾಸ್ ಬಸವರಾಜು, ಶೇಖರ್ ರಾವ್, ಆಯೋಜಕರಾದ ಯೋಗರಾಜು, ಕಿರಣ್‌ರಾಜ್, ಚೇತನ್, ರಾಜೇಶ್, ಸೋಮು, ಕುಮಾರ ಸೇರಿದಂತೆ ಹಲವರು ಭಾಗವಹಿಸಿದ್ದರು.

ಆಪ್ತ ಸಮಾಲೋಚಕರ ಹುದ್ದೆಗೆ ನೇರ ಸಂದರ್ಶನ

ಮಂಡ್ಯ,ಜು.27– ಮಂಡ್ಯ ಜಿಲ್ಲಾ ಆಸ್ಪತ್ರೆಯ (ಮಿಮ್ಸ್) ರಕ್ತ ನಿಧಿ ಕೇಂದ್ರಕ್ಕೆ ಗುತ್ತಿಗೆ ಆಧಾರದ ಮೇಲೆ ಖಾಲಿಯಿರುವ ಒಂದು ಆಪ್ತ ಸಮಾಲೋಚಕರ ಹುದ್ದೆಗೆ ನೇಮಕ ಮಾಡಲು ಅರ್ಹ ಅಭ್ಯರ್ಥಿಗಳನ್ನು ನೇರ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ.

ಮೈಸೂರು ಬೆಂಗಳೂರು ಮುಖ್ಯ ರಸ್ತೆಯಲ್ಲಿರುವ ಮಿಮ್ಸ್ ಮುಂಭಾಗದಲ್ಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಆ.5 ರಂದು ಬೆಳಿಗ್ಗೆ 10.30 ಗಂಟೆಗೆ ನೇರ ಸಂದರ್ಶನವನ್ನು ನಿಗದಿಪಡಿಸಲಾಗಿದೆ. ಆಸಕ್ತರು ಅಗತ್ಯ ದಾಖಲಾತಿಗಳೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಅಂಗೀಕೃತ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದ ಸಂಸ್ಥೆಯಿಂದ ಸ್ನಾತಕೋತ್ತರ ಪದವಿ MSW ಅಥವಾ ಅದಕ್ಕೆ ಸಮಾನವಾದ ವಿದ್ಯಾರ್ಹತೆ ಎಂದರೆ ಮನಃಶಾಸ್ತ್ರ ಮನೋವಿಜ್ಞಾನ ವಿಷಯದಲ್ಲಿ ಪಡೆದ ಸ್ನಾತಕೋತ್ತರ ಪದವಿ ಹಾಗೂ 2 ವರ್ಷ ರಕ್ತ ಕೇಂದ್ರದಲ್ಲಿ ಕೆಲಸ ಮಾಡಿದ ಅನುಭವ ಹೊಂದಿರಬೇಕು.

ಹೆಚ್ಚಿನ ಮಾಹಿತಿಗಾಗಿ https.//mims.karnataka. gov ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆ.2 ರಂದು ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ

ಮಂಡ್ಯ,ಜು.27– ಜು.30ರಂದು ಏರ್ಪಡಿಸಲಾಗಿದ್ದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳ ಕಾರ್ಯಕ್ರಮವೂ ಸೇರಿದಂತೆ) ಮೊದಲ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಲ್ಪಟ್ಟಿದ್ದು, ಈ ಸಭೆಯನ್ನು ಜು.30ರ ಬದಲು ಆಗಸ್ಟ್ 2 ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಅಧಿಕಾರಿಗಳು ಸಭೆಗೆ ತಮ್ಮ ಅಧೀನ ಸಿಬ್ಬಂದಿ, ಅಧಿಕಾರಿಗಳನ್ನು ನಿಯೋಜಿಸದೇ ಸಂಬಂಧಪಟ್ಟ ಅಧಿಕಾರಿಗಳೇ ಮಾಹಿತಿಯೊಡನೆ ಖುದ್ದು ಹಾಜರಾಗಬೇಕೆಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾವಿನಲ್ಲೂ ಒಂದಾದ ತಾಯಿ ಮಗ

ಕೆ.ಆರ್.ಪೇಟೆ,ಜು.27– ತಾಯಿ ಮತ್ತು ಮಗ ಸಾವಿನಲ್ಲೂ ಒಂದಾಗಿರುವ ಘಟನೆ ತಾಲೂಕಿನ ಕಸಬಾ ಹೋಬಳಿಯ ಹರಿಹರಪುರ ಗ್ರಾಮದಲ್ಲಿ ಸಂಭವಿಸಿದೆ.





ಗ್ರಾಮದ ನಿವಾಸಿ ನಿವೃತ್ತ ಶಿಕ್ಷಕ ದಿ.ಕಾಳೇಗೌಡರ ಧರ್ಮಪತ್ನಿ ಸಾಕಮ್ಮ(90) ಹಾಗೂ ಇವರ ಪುತ್ರ ಎಂ.ಕೆ. ಗಂಗಾಧರ್ ತಿಲಕ್(68) ನಿಧನರಾಗಿದ್ದಾರೆ.

ಸಾಕಮ್ಮನವರು ವಯೋಸಹಜವಾಗಿ ಗ್ರಾಮದಲ್ಲಿ ಸಾವನ್ನಪ್ಪಿದ್ದರು. ತಾಯಿ ಸಾವಿನಿಂದ ಮನನೊಂದ ಮೊದಲೇ ಅನಾರೋಗ್ಯದಿಂದ ಬಳಲುತ್ತಿದ್ದ ಗಂಗಾಧರ್ ತಿಲಕ್ ತಾಯಿ ಸಾವನ್ನಪ್ಪಿದ 24 ಗಂಟೆಯಲ್ಲಿ ನಿಧನರಾಗಿದ್ದಾರೆ. ಹಿರಿಯ ಪತ್ರಕರ್ತ ಎಂ.ಕೆ.ಹರಿಚರಣ್ ತಿಲಕ್ ಅವರು 24 ಗಂಟೆಯಲ್ಲಿ ತಾಯಿ ಸಾಕಮ್ಮ ಮತ್ತು ಅಣ್ಣ ಎಂ.ಕೆ. ಗಂಗಾಧರ್ ತಿಲಕ್ ಕಳೆದುಕೊಂಡಿದ್ದಾರೆ. ಇದರಿಂದ ಕುಟುಂಬದ ಆಕ್ರಂದನ ಮುಗಿಲು ಮುಟ್ಟಿದೆ. ತಾಯಿ ಸಾಕಮ್ಮ, ಮಗ ಎಂ.ಕೆ.ಬಾಲಗಂಗಾಧರ್ ತಿಲಕ್ ಅವರು ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ. ಮೃತರಿಬ್ಬರ ಅಂತ್ಯಕ್ರಿಯೆಯು ಹರಿಹರಪುರ ಗ್ರಾಮದಲ್ಲಿ ಕುಟುಂಬದ ತೀವ್ರ ಆಕ್ರಂದನ ನಡುವೆ ನಡೆಯಿತು.

ಹಾರಂಗಿ ಜಲಾಶಯದಿಂದ 25 ಸಾವಿರ ಕ್ಯೂಸೆಕ್ಸ್ ನೀರು ನದಿಗೆ ಬಿಡುಗಡೆ

ಕುಶಾಲನಗರ: ಕಾವೇರಿ ಹಾಗೂ ಹಾರಂಗಿ ಜಲಾನಯನ ಪ್ರದೇಶದಲ್ಲಿ ನಿರಂತರ ಮಳೆ ಸುರಿಯುತ್ತಿದ್ದು,ಇದರಿಂದ ಹಾರಂಗಿ ಜಲಾಶಯಕ್ಕೆ ಒಳಹರಿವಿನಲ್ಲಿ ಏರಿಕೆ ಕಂಡು ಬಂದ ಹಿನ್ನೆಲೆಯಲ್ಲಿ ಸಂಜೆ 25 ಸಾವಿರ ಕ್ಯೂಸೆಕ್ಸ್ ನೀರನ್ನು ನದಿಗೆ ಬಿಡುಗಡೆ ಮಾಡಲಾಯಿತು.

ಕಣಿವೆ ರಾಮಲಿಂಗೇಶ್ವರ ದೇವಾಲಯ ಬಳಿ ಹಾರಂಗಿ ಹಾಗೂ ಕಾವೇರಿ ನದಿಗಳು ಸಂಗಮಗೊಂಡು ಹರಿಯುತ್ತಿದ್ದು, ನದಿಯ ನೀರಿನ ಮಟ್ಟದಲ್ಲಿ ಏರಿಕೆ ಕಂಡುಬಂದಿದೆ. ನದಿಗೆ ಅಡ್ಡವಾಗಿ ತೂಗು ಸೇತುವೆ ನಿರ್ಮಾಣ ಮಾಡಲಾಗಿದ್ದು, ಸೇತುವೆ ಬಳಿ ಜನರು ನೀರಿನ ಹರಿವಿನ ದೃಶ್ಯವನ್ನು ವೀಕ್ಷಣೆ ಮಾಡುತ್ತಿರುವುದು ಕಂಡು ಬಂದಿದೆ. ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಹಳ್ಳ, ಕೊಳ್ಳಗಳಲ್ಲಿ ನೀರಿನ ಹರಿವು ಏರತೊಡಗಿದೆ.

ಕಾವೇರಿ ನದಿಯ ನೀರಿನ ಮಟ್ಟದಲ್ಲಿ ಏರಿಕೆ ಕಂಡು ಬರುತ್ತಿದ್ದು, ನದಿ ಪಾತ್ರದ ಜನತೆ ಸುರಕ್ಷಿತ ಸ್ಥಳಗಳಿಗೆ ತೆರಳಬೇಕು. ಮೀನುಗಾರರು ಎಚ್ಚರಿಕೆಯಿಂದ ಇರುವಂತೆ ನೀರಾವರಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಪುಟ್ಟಸ್ವಾಮಿ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮುಳುಗಿದ ಸೇತುವೆ : ಹಾರಂಗಿ ಜಲಾಶಯದಿಂದ ಹೆಚ್ಚಿನ ನೀರನ್ನು ನದಿಗೆ ಹರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಕೆಳಸೇತುವೆ ಮೇಲೆ ನೀರು ಹರಿಯುತ್ತಿರುವುದರಿಂದ ವಾಹನ ಸಂಚಾರ ಬಂದ್ ಆಗಿದೆ ಇದರಿಂದ ಅಕ್ಕಪಕ್ಕದ ಗ್ರಾಮಗಳಾದ ಯಡವನಾಡು, ಹುದುಗೂರು, ಅತ್ತೂರು, ದೊಡ್ಡಸೂರು, ಹಾರಂಗಿ ಭಾಗಕ್ಕೆ ಸಂಪರ್ಕ ಕಡಿತಗೊಂಡಿದೆ. ಈ ಗ್ರಾಮಗಳ ಜನರು ಹತ್ತಾರು ಕಿಮೀ ದೂರ ಕ್ರಮಿಸಿ ಕೂಡಿಗೆ ಮಾರ್ಗವಾಗಿ ತಮ್ಮ ಗ್ರಾಮಗಳಿಗೆ ತೆರಳಬೇಕಾಗಿದೆ.

ತಹಶೀಲ್ದಾರ್ ಕಿರಣ್ ಗೌರಯ್ಯ ಮತ್ತು ಕಂದಾಯ ಅಧಿಕಾರಿಗಳು ಮಳೆಯಾಗಿ ಉಂಟಾಗಿರುವ ಹಾನಿ ಪ್ರಮಾಣ ಹಾಗೂ ನದಿ ದಂಡೆಯಲ್ಲಿ ಸ್ಥಿತಿಗತಿಗಳ ಪರಿಶೀಲನೆ ನಡೆಸಿದರು.

ಹುಲಿ ದಾಳಿಗೆ ಹಸು ಬಲಿ

ಮಡಿಕೇರಿ: ಗದ್ದೆಯಲ್ಲಿ ಮೇಯಲು ಬಿಟ್ಟಿದ ಹಸುವನ್ನು ಹುಲಿ ಕೊಂದು ಸ್ವಲ್ಪ ಭಾಗವನ್ನು ತಿಂದು ಹಾಕಿರುವ ಘಟನೆ ವಿರಾಜಪೇಟೆ ತಾಲೂಕು ಬಿಟ್ಟಂಗಾಲ ಪಂಚಾಯಿತಿ ವ್ಯಾಪ್ತಿಯ ವಿ.ಬಾಡಗ ಗ್ರಾಮದಲ್ಲಿ ನಡೆದಿದೆ. ಅಲ್ಲಿನ ನಿವಾಸಿ ತೀತಿಮಾಡ ಬೋಪಣ್ಣ ಅಯ್ಯಪ್ಪ ಗದ್ದೆಯಲ್ಲಿ ಮೇಯಲು ಬಿಟ್ಟಿದ್ದ ಹಸು ಕಾಣೆಯಾಗಿತ್ತು. ಹುಡುಕಾಟ ನಡೆಸಿದ ಸಂದರ್ಭ ಪಕ್ಕದ ತೋಟದಲ್ಲಿ ಹಸುವಿನ ಕಳೇಬರ ಪತ್ತೆಯಾಗಿದೆ. 15 ಲೀಟರ್ ಹಾಲು ಕೊಡುತ್ತಿದ್ದ ಹಸು ಹುಲಿ ದಾಳಿಗೆ ಬಲಿಯಾಗಿದ್ದು ಬೋಪಣ್ಣ ಅವರಿಗೆ ನಷ್ಟ ಉಂಟಾಗಿದೆ. ಈ ಘಟನೆಯಿಂದ ಗ್ರಾಮಸ್ಥರು ಕೂಡ ಹುಲಿಯ ಭಯದಲ್ಲೇ ಕಾಲ ಕಳೆಯುವಂತಾಗಿದೆ. ಹಸುವನ್ನು ಕಳೆದುಕೊಂಡ ಮಾಲೀಕರಿಗೆ ಅರಣ್ಯ ಇಲಾಖೆ ಸೂಕ್ತ ಪರಿಹಾರ ನೀಡಬೇಕು. ತಕ್ಷಣವೇ ಹುಲಿ ಸೆರೆ ಹಿಡಿಯಲು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಪತ್ರಕರ್ತರ ಸಂಘದಿಂದ 'ಯೋಧರೆ ನಾವೆಂದೂ ಮರೆಯೋದಿಲ್ಲ ನಿಮ್ಮನ್ನು' ವಿನೂತನ ಕಾರ್ಯಕ್ರಮ



ಪತ್ರಕರ್ತರ ಸಂಘ ಮತ್ತು ರೋಟರಿ ಮಿಸ್ಟಿ ಹಿಲ್ಸ್ ಸಂಸ್ಥೆ ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಯೋಧರಿಗೆ ಗೌರವ ನಮನ ಸಲ್ಲಿಸಿದವು

ಮಡಿಕೇರಿ, ಜು.27– ಹಣತೆ ಉರಿಸಿ, ಪುಷ್ಪಗಳನ್ನು ಅರ್ಪಿಸಿ ದೇಶ ಭಕ್ತಿಯ ಹಾಡುಗಳೊಂದಿಗೆ ಯೋಧರು ಹಾಗೂ ಭಾರತ ಮಾತೆಗೆ ಜಯ ಘೋಷಣೆಗಳ ಮೂಲಕ ವಿನೂತನ ರೀತಿಯಲ್ಲಿ ಕೊಡಗು ಪತ್ರಕರ್ತರ ಸಂಘ ಮತ್ತು ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಯೋಧರಿಗೆ ಗೌರವ ನಮನ ಸಲ್ಲಿಸಲಾಯಿತು.

ನಗರದ ಗೌಡ ಸಮಾಜದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲೆಯಾದ್ಯಂತ 75 ಸಂಘ ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಂಡು ಅಮರ್ ಜವಾನ್ ಸ್ಮಾರಕದ ಪ್ರತಿಕೃತಿಗೆ ಪುಷ್ಪಾರ್ಚನೆ ಮಾಡಿ ಹಣತೆ ಬೆಳಗಿ ಯೋಧರಿಗೆ ಭಾವಪೂರ್ಣ ಗೌರವ ನಮನ ಸಲ್ಲಿಸಿದರು. 'ಯೋಧರೆ ನಾವೆಂದೂ ಮರೆಯೋದಿಲ್ಲ ನಿಮ್ಮನ್ನು' ಎಂಬ ಸಂದೇಶ ಸಾರುವ ಕಾರ್ಯಕ್ರಮವನ್ನು ಕಾರ್ಗಿಲ್ ಸಮರದಲ್ಲಿ ಹುತಾತ್ಮರಾದ ಪೆಮ್ಮಂಡ ಕಾವೇರಪ್ಪ ಪತ್ನಿ ಪೆಮ್ಮಂಡ ಶೋಭಾ ಕಾವೇರಪ್ಪ ದೀಪ ಬೆಳಗಿಸಿ ಉದ್ಘಾಟಿಸಿದರು.

ಪ್ರತಿ ದಿನವೂ ನಮ್ಮ ರಕ್ಷಣೆಗಾಗಿ ಶ್ರಮ ವಹಿಸುತ್ತಿರುವ ಯೋಧರನ್ನು ರಕ್ಷಿಸು ಎಂಬ ಪ್ರಾರ್ಥನೆಯನ್ನು ಎಲ್ಲರೂ ಪ್ರತೀ ದಿನ ಮನೆಗಳಲ್ಲಿ ಮಾಡುವಂತಾಗಬೇಕು ಎಂದು ವಿಕ್ರಂದತ್ತ ಆಶಿಸಿದರು.

ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ.ಮಾತನಾಡಿ, ರಸ್ತೆಗಳಿಗೆ ಗಣ್ಯಾತಿಗಣ್ಯರ ಹೆಸರನ್ನು ನಾಮಕರಣ ಮಾಡುವ ಸಂದರ್ಭದಲ್ಲಿ ಹುತಾತ್ಮ ಯೋಧರ ಹೆಸರನ್ನೂ ರಸ್ತೆಗಳು, ಬೀದಿಗಳಿಗೆ ನಾಮಕರಣ ಮಾಡುವ ನಿಟ್ಟಿನಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದಿಂದ ಸೂಚಿಸುವ ಸಂಬಂಧಿತ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಆದ್ಯತೆ ನೀಡಬೇಕೆಂದು ಕೋರಿದರು.

ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ರತ್ನಾಕರ್ ರೈ ಮಾತನಾಡಿ, ಕಳೆದ ವರ್ಷದಿಂದ ರೋಟರಿ ಮಿಸ್ಟಿ ಹಿಲ್ಸ್ ದೀಪನಮನ ಕಾರ್ಯಕ್ರಮದ ಮೂಲಕ ಯೋಧರಿಗೆ ಗೌರವ ಸಲ್ಲಿಸುವಲ್ಲಿ ನಿರತವಾಗಿದ್ದು ಪ್ರತೀ ವರ್ಷವೂ ಕಾರ್ಯ ಕ್ರಮವನ್ನು ಯೋಧರಿಗಾಗಿ ಮೀಸ ಲಿಡುವುದಾಗಿ ಹೇಳಿದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ ದೇಶದ ಪ್ರತಿಯೊಬ್ಬರು ದೇಶಭಕ್ತಿಯನ್ನು ಬೆಳೆಸಿಕೊಂಡಲ್ಲಿ, ನಮ್ಮ ನಾಡು, ನಮ್ಮ ದೇಶ ಸಮೃದ್ಧವಾಗುವುದರಲ್ಲಿ ಯಾವುದೇ ಅನುಮಾನ ಬೇಡ ದೇಶದ ಸೈನ್ಯಕ್ಕೆ ಯೋಧರನ್ನು ನೀಡಿದಷ್ಟು ಬೇರೆ ಯಾವ ರಾಜ್ಯದಿಂದಲೂ ಇಲ್ಲ ಎಂದು ಹೇಳಿದರು.

ವೇದಿಕೆಯಲ್ಲಿದ್ದ ಅಮರ್ ಜವಾನ್ ಸ್ಮಾರಕದ ಪ್ರತಿಕೃತಿಗೆ 75 ಸಂಘ ಸಂಸ್ಥೆಗಳ ಪ್ರಮುಖರು ಸರದಿ ಸಾಲಿನಲ್ಲಿ ಬಂದು ಪುಷ್ಪಾರ್ಚನೆ ಮಾಡಿ ಗೌರವ ಸೆಲ್ಯೂಟ್ ಮಾಡುವ ಮೂಲಕ ನಮನ ಸಲ್ಲಿಸಿದರು. ನೂರಾರು ಮಂದಿ ಹಣತೆಗಳನ್ನು ಬೆಳಗಿ ಅಮರ್ ಜವಾನ್ ಸ್ಮಾರಕದ ಮುಂದಿಟ್ಟು ಕಾರ್ಗಿಲ್ ಹುತಾತ್ಮರಿಗೆ ಬೆಳಕಿನಾರತಿ ಮೂಲಕ ಶ್ರದ್ಧಾಂಜಲಿ ಅರ್ಪಿಸಿದರು.

ಶ್ರೀರಾಮಾಂಜನೇಯ ಭಜನಾ ಮಂಡಳಿಯ ಕೆ.ಕೆ.ಮಹೇಶ್ ಕುಮಾರ್, ಗಾಯಕ ರವಿಭೂತನಕಾಡು, ಮೈಸೂರಿನ ಪಾವನ ಇವೆಂಟ್ಸ್‌ನ ಗಾಯಕ, ಗಾಯಕಿಯರು, ಪತ್ರಕರ್ತರಾದ ಜಿ.ಚಿದ್ವಿಲಾಸ್, ಸಂಧ್ಯಾ ಚಿದ್ವಿಲಾಸ್, ಟಿ..ಕೆ.ಸುಧೀರ್ ಅವರುಗಳು ದೇಶ ಭಕ್ತಿ ಗೀತೆಗಳನ್ನು ಹಾಡಿದರು.

ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ, ಅರೆಭಾಷೆ ಸಾಹಿತ್ಯ ಸಂಸ್ಕೃತಿ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಾಜಿ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ತೀತಿರ ಧರ್ಮಜಾ ಉತ್ತಪ್ಪ ಪತ್ರಕರ್ತರ ಸಂಘದ ಕಾರ್ಯದರ್ಶಿ ಸುರೇಶ್ ಬಿಳಿಗೇರಿ, ರೋಟರಿ ಮಿಸ್ಟಿಹಿಲ್ಸ್ ಅಧ್ಯಕ್ಷ ರತ್ನಾಕರ್ ರೈ, ಕಾರ್ಯದರ್ಶಿ ಬಿ.ಕೆ. ಕಾರ್ಯಪ್ಪ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಪಾನಿಕುಟ್ಟೀರ ಕುಟ್ಟಪ್ಪ, ವಿವಿಧ ಶಾಲಾ, ಕಾಲೇಜುಗಳ ಎನ್‌ಸಿಸಿ ಕೆಡೆಟ್‌ಗಳು, ಮಾಜಿ ಯೋಧರು, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪ್ರಥಮ ಪದವಿ ತರಗತಿ ಪ್ರವೇಶಕ್ಕೆ ಅವಕಾಶ

ಮಡಿಕೇರಿ: ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 2025–26 ರ ಶೈಕ್ಷಣಿಕ ಸಾಲಿನ ಪ್ರಥಮ ಬಿ.ಎ, ಬಿಕಾಂ ಮತ್ತು ಬಿ.ಬಿ.ಎ ಪದವಿ ತರಗತಿ ಪ್ರವೇಶಕ್ಕೆ ಜು.31 ಕಡೆಯ ದಿನವಾಗಿದೆ. ಪ್ರಥಮ ವರ್ಷದ ಬಿ.ಬಿ.ಎ ಪದವಿಗೆ ಪ್ರವೇಶಾತಿ ಉಚಿತವಾಗಿರುತ್ತದೆ ಎಂದು ಪ್ರಾಂಶುಪಾಲ ಪ್ರೊ ದಯಾನಂದ ಕೆ.ಸಿ ತಿಳಿಸಿದ್ದಾರೆ.

ಮಳೆ ಅಬ್ಬರ : ಜಿಲ್ಲೆಯಾದ್ಯಂತ ಆರೆಂಜ್ ಅಲರ್ಟ್



ಮಡಿಕೇರಿ: ಜಿಲ್ಲೆಯಾದ್ಯಂತ ಬಿರುಗಾಳಿ ಸಹಿತ ಪುಷ್ಯ ಮಳೆ ಅಬ್ಬರಿಸುತ್ತಿದ್ದು, ಆತಂಕ ಸೃಷ್ಟಿಸಿದೆ. ಈ ನಡುವೆ ಭಾರತೀಯ ಹವಾಮಾನ ಇಲಾಖೆ ಜಿಲ್ಲೆಯಾದ್ಯಂತ ಆರೆಂಜ್ ಅಲರ್ಟ್ ಘೋಷಿಸಿದ್ದು, ಮತ್ತಷ್ಟು ಮಳೆ ಮುಂದುವರೆಯುವ ಎಲ್ಲಾ ಸಾಧ್ಯತೆಗಳಿವೆ ಎಂದು ಮುನ್ಸೂಚನೆ ನೀಡಿದೆ. ಬಿರುಗಾಳಿ ಸಹಿತ ಮಳೆ ಸುರಿಯುತ್ತಿರುವ ಕಾರಣ 24 ಗಂಟೆಗಳ ಅವಧಿಯಲ್ಲಿ ಹತ್ತಾರು ವಾಸದ ಮನೆಗಳ ಗೋಡೆ ಕುಸಿದು ಬಿದ್ದಿದ್ದು, ಮನೆ ಮಂದಿ ಅಪಾಯದಿಂದ ಪಾರಾಗಿದ್ದಾರೆ.

ಕಟ್ಟಡ ಮನೆಗಳಿಗೆ ಹಾನಿ: ಅಬ್ಬರಿಸುತ್ತಿರುವ ಪುಷ್ಯ ಮಳೆಯಿಂದ ಅಮ್ಮತ್ತಿ ಹೋಬಳಿ ಪುಲಿಯೇರಿ ಗ್ರಾಮದ ರಜೀಶ್ ಎಂಬವರ ಮನೆ ಮೇಲೆ ವಿದ್ಯುತ್ ಕಂಬ ತುಂಡಾಗಿ ಬಿದ್ದಿದೆ. ಅಲ್ಲೇ ಪಕ್ಕದಲ್ಲಿ ನಿಲ್ಲಿಸಿದ್ದ ಕಾರಿನ ಮೇಲೆ ವಿದ್ಯುತ್ ಕಂಬ ಬಿದ್ದಿದ್ದು ಕಾರಿಗೆ ಹಾನಿಯಾಗಿದೆ. ಸೋಮವಾರಪೇಟೆ ಹರದೂರು ಗ್ರಾಮ ಪಂಚಾಯಿತಿ ಕಟ್ಟಡದ ಮೇಲೆ ಭಾರೀ ಗಾತ್ರದ ಮರ ಬಿದ್ದಿದ್ದು, ಕಟ್ಟಡ ಪಕ್ಕದ ಅಂಗನವಾಡಿ ಕೇಂದ್ರದ ಶೌಚಾಲಯ ಕಟ್ಟಡಕ್ಕೂ ಹಾನಿಯಾಗಿದೆ. ಶನಿವಾರಸಂತೆ ಹೋಬಳಿ ಮಾದೆಗೋಡು ಗ್ರಾಮದ ನಿವಾಸಿ ಎಂ.ಎನ್ ದಿವಾಕರ ಮನೆ ಮಳೆಗೆ ಕುಸಿದಿದೆ. ಮನೆಯ ಗೋಡೆಗಳು ಬಿರುಕು ಬಿಟ್ಟಿದ್ದು ಸಂಪೂರ್ಣ ಕುಸಿಯುವ ಸಾಧ್ಯತೆಗಳು ಕಂಡು ಬಂದಿದೆ.

ಸುಂಟಿಕೊಪ್ಪ ಹೋಬಳಿ ಉಳುಗುಲಿ ಗ್ರಾಮದ ಎನ್.ಆರ್.ನಂಜಪ್ಪ ಮನೆ ಮೇಲೆ ಮರ ಬಿದ್ದು ಹಾನಿಯಾಗಿದೆ. ನಾಪೋಕ್ಲು ಹೋಬಳಿ ಎಮ್ಮೆ ಮಾಡು ಗ್ರಾಮದ ಕರೀಂ .ಟಿ.ಎ ಮನೆಯ ಮುಂಭಾಗದ ಗೋಡೆ ಕುಸಿದು ಬಿದ್ದಿದ್ದು. ಕುಟುಂಬವನ್ನು ಬೇರೆಡೆಗೆ ಸ್ಥಳಾಂತರಕ್ಕೆ ಸಲಹೆ ನೀಡಲಾಗಿದೆ. ಸಂಪಾಜೆ ಗ್ರಾಮದ ಭೋಜಪ್ಪ ಎ.ಬಿ. ಮನೆ ಮೇಲೆ ಭಾರಿ ಗಾತ್ರದ ಮರ ಬಿದ್ದಿದ್ದು ಮನೆಗೆ ತೀವ್ರ ಹಾನಿಯಾಗಿದೆ. ಕುಶಾಲನಗರ ಕೂಡುಮಂಗಳೂರು ಗ್ರಾಪಂ ಚಿಕ್ಕತ್ತೂರು ಗ್ರಾಮದ ನಿವಾಸಿ ಮಹಾದೇವಿ ಎಂಬವರ ಮನೆ ಮಳೆಯಿಂದ ತೀವ್ರ ಹಾನಿಯಾಗಿದೆ. ಇವರ ಪಾರ್ಶ್ವವಾಯು ಪೀಡಿತ ಪತಿ ಕೆಂಚ ಅವರನ್ನು ಸಂಬಂಧಿಕರ ಮನೆಗೆ ಸ್ಥಳಾಂತರಿಸಲಾಗಿದೆ. ಶ್ರೀಮಂಗಲ ಹೋಬಳಿ ಬೀರುಗ ಗ್ರಾಮದ ಮುಕ್ಕಾಟಿರ ಕಾಶಿ ಕಾರ್ಯಪ್ಪ ಅವರ ಮನೆ ಗೋಡೆ ಕುಸಿದು ಬಿದ್ದು ಹಾನಿಯಾಗಿದೆ. ಮಡಿಕೇರಿ ಹೋಬಳಿ ಕರ್ಣಂಗೇರಿ ಗ್ರಾಮದ ರಜಾಕ್ ಅವರ ಮನೆಯ ಒಂದು ಭಾಗದ ಗೋಡೆ ಮಳೆಯಿಂದ ಕುಸಿದು ಬಿದ್ದಿದೆ. ಭಾರೀ ಗಾಳಿಗೆ ಪೇರೂರು ಗ್ರಾಮದ ಬೆಳ್ಯವ್ವ ಅವರ ಮನೆಯ ಶೀಟ್‌ಗಳು ಹಾರಿ ಹೋಗಿ ನಷ್ಟ ಸಂಭವಿಸಿದೆ.

ನದಿ ಪ್ರವಾಹ ಆತಂಕ: ಭಾಗಮಂಡಲ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾದ ಪರಿಣಾಮ ತ್ರಿವೇಣಿ ಸಂಗಮ ಪ್ರವಾಹ ನೀರಿನಲ್ಲಿ ಮುಳುಗಡೆಯಾಗಿದೆ. ಮಡಿಕೇರಿ ನಗರ, ಮುಕ್ಕೋಡ್ಲು ಸೂರ್ಲಬ್ಬಿ ಗಾಳಿಬೀಡು, ಮುಟ್ಲು, ಕುಂಬಾರಗಡಿಗೆ ವ್ಯಾಪ್ತಿಯಲ್ಲಿ ಎಡೆಬಿಡದೆ ಮಳೆಯಾಗುತ್ತಿದ್ದು, ಹಟ್ಟಿಹೊಳೆ ಮತ್ತು ಮಾದಾಪುರ ಹೊಳೆಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಕಾವೇರಿ ನದಿ ಮತ್ತು ಹಾರಂಗಿ ಜಲಾಶಯದ ನೀರು ಕಣಿವೆ ಗ್ರಾಮ ದಲ್ಲಿ ಸಂಗಮವಾಗುತ್ತಿದ್ದು, ಕಣಿವೆ ತೂಗು ಸೇತುವೆಯನ್ನು ಬಂದ್ ಮಾಡಲಾಗಿದೆ.

ಸಂಘದ ಏಳಿಗೆಗೆ ಒಗ್ಗಟ್ಟಿನಿಂದ ಕೆಲಸ ಮಾಡಿ: ಕೊಟ್ಟುಕತ್ತಿರ ಪಿ.ಸೋಮಣ್ಣ



ಕೊಡಗು ಮಾಜಿ ಸೈನಿಕರ ಸಂಘ ವಾರ್ಷಿಕ ಮಹಾ ಸಭೆಯಲ್ಲಿ ಕೊಡಗು ಶೌರ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು

ವಿರಾಜಪೇಟೆ: ಮಾಜಿ ಸೈನಿಕರಿಗೆ ಸಿಗುವಂತ ಸೌಲಭ್ಯಗಳಿಗಾಗಿ ಸಂಘದ ಪದಾಧಿಕಾರಿಗಳು ಒಗ್ಗಟ್ಟಿನಿಂದ ಸಂಘದ ಏಳಿಗೆಗೆ ಕೆಲಸ ಮಾಡ ಬೇಕಾಗಿದೆ ಎಂದು ಅಖಿಲ ಕರ್ನಾಟಕ ಮಾಜಿ ಸೈನಿಕರ ಜಿಲ್ಲಾ ಘಟಕದ ಅಧ್ಯಕ್ಷ ಕೊಟ್ಟುಕತ್ತಿರ ಪಿ.ಸೋಮಣ್ಣ ಹೇಳಿದರು.

ಅಖಿಲ ಕರ್ನಾಟಕ ಕೊಡಗು ಮಾಜಿ ಸೈನಿಕರ ಸಂಘ ಕೊಡಗು ಶೌರ್ಯ ಪ್ರಶಸ್ತಿ ಪುರಸ್ಕಾರ ವಾರ್ಷಿಕ ಮಹಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಸೈನಿಕರ ಸಂಘದಲ್ಲಿ ಯಾವುದೇ ಭೇದಭಾವಗಳಿಲ್ಲ. ಅಧ್ಯಕ್ಷನಾಗಿ ನನ್ನ ಅವಧಿಯ ಐದು ವರ್ಷಗಳಲ್ಲಿ ಮಾಜಿ ಸೈನಿಕರಿಗೆ ನಿವೃತ್ತ ವೇತನ, ಕ್ಯಾಂಟಿನ್ ನೌಕರಿ, ಸೈನಿಕರು ಸೇವೆ ಸಲ್ಲಿಸಿ ನಿವೃತ್ತರಾದ ನಂತರ ಬ್ಯಾಂಕ್ ಕರ್ತವ್ಯಕ್ಕೆ ಎರಡು ವರ್ಷ ಹೆಚ್ಚಿಸಲಾಗಿದೆ. ಕಷ್ಟದಲ್ಲಿರುವರಿಗೆ ಸಂಘದ ವತಿಯಿಂದ ಸಹಕಾರ ನೀಡಲಾಗಿದೆ ಹಾಗೂ ಕಾವೇರಿ ನಾಡಿನಲ್ಲಿದ್ದು ದೇಶಕ್ಕಾಗಿ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ಸನ್ಮಾನ ನೀಡುವುದು ಉತ್ತಮ ಎಂದರು.

ಕರ್ನಲ್ ಪುಟ್ಟಿಚಂಡ ಗಣಪತಿರಿಗೆ ಮಹಾವೀರ ಚಕ್ರ ಪುರಸ್ಕೃತ ಪ್ರಶಸ್ತಿ, ಮೇಜರ್ ಜನರಲ್ ಕುಪ್ಪಂಡ ಸಿ.ನಂಜಪ್ಪ ಅವರಿಗೆ ವೀರ ಚಕ್ರ ಪುರಸ್ಕೃತ ಪ್ರಶಸ್ತಿ, ಕರ್ನಲ್ ಚಂಬಂಡ, ಎಮ್.ತಿಮ್ಮಣ್ಣರಿಗೆ ಶೌರ್ಯ ಚಕ್ರ ಪುರಸ್ಕೃತ ಪ್ರಶಸ್ತಿ, ಲೆ.ಎಮ್.ಪ್ರಸಾದ ಸರ್ಜನ್ ಸೇನಾ ಮೆಡಲ್ ಪುರಸ್ಕೃತ, ಕುಟ್ಟಂಡ ಬಿ.ಲವ ಪೊನ್ನಪ್ಪ (ನಿವೃತ್ತ ಸೇನಾನಿ) ಸೇನಾ ಮೆಡಲ್ ಪುರಸ್ಕೃತ, ಬೊಳ್ಳೆರ ಸಿ.ರೋಶನ್ ಸೇನಾ ಮೆಡಲ್ ಪುರಸ್ಕೃತ, ಮೇಚಂಡ ಜಿ.ಚಿಟ್ಟಿಯಪ್ಪ ಸೇನಾ ಮೆಡಲ್ ಪುರಸ್ಕೃತ, ಪ್ರಶಸ್ತಿಗಳನ್ನು, ಎಸ್.ಎಸ್.ಎಲ್.ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಿತು.

ಸಂಘಟನಾ ಕಾರ್ಯದರ್ಶಿ ಕೆ.ಬಿ.ಲವ ಮಾತನಾಡಿದರು. ಸಮಾರಂಭದಲ್ಲಿ ಕೊಟ್ಟುಕತ್ತಿರ ಪಿ.ಸೋಮಣ್ಣ ಹಾಗೂ ಜಾಲಿ ಸೋಮಣ್ಣ ಸನ್ಮಾನಿಸಲಾಯಿತು. ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಕೊಡಗು ಉಪಾಧ್ಯಕ್ಷ ಎಸ್.ಸುದೀರ್, ಜಿಲ್ಲಾ ಮಹಿಳಾ ಸಂಚಾಲಕಿ ಎಮ್.ಕೆಭಾನಿ, ಕಾರ್ಯದರ್ಶಿ ಸಿಜಿ.ತಿಮ್ಮಯ್ಯ, ಪದಾಧಿಕಾರಿಗಳಾದ ಪಿ.ಜಿ.ಅರುಣ್, ಕೆ.ಬಿ. ಲವ, ಪಿ.ಪಿ.ಕಾರ್ಯಪ್ಪ, ಎಮ್.ಪಿ.ತಿಮ್ಮಯ್ಯ, ಎಂ.ಕೆ.ರಮೇಶ್, ಪೈಲಿ, ಬಿ.ಎನ್.ಸುನೀಲ್, ಪಿ.ಎಸ್.ವಾಸು, ಟಿ.ಕೆ.ಕಾಳಪ್ಪ, ಪೊನ್ನಪ್ಪ, ಸೋಮವಾರಪೇಟೆ ಮೋರ್ಕಂಡ ನಾಣಿಯಪ್ಪ ಸೇರಿದಂತೆ ಐದು ತಾಲೂಕುಗಳಿಂದಲೂ ಸದಸ್ಯರು ಭಾಗವಹಿಸಿದ್ದರು.

ಮೌಲ್ಯಯುತ ಸೇವೆಗೆ ಪತ್ರಕರ್ತರು ಅಣಿಯಾಗಬೇಕು: ಶಾಸಕ ಎಆರ್‌ಕೆ



ತಾಲೂಕು ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಿಕಾ ದಿನಾಚರಣೆಯಲ್ಲಿ ಚಿಕ್ಕಮಾಳಿಗೆ, ನಟರಾಜು, ಜಗದೀಶ ಅವರುಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು

ಕೊಳ್ಳೇಗಾಲ:ಪತ್ರಿಕಾ ರಂಗದಲ್ಲಿ ಮೌಲ್ಯ ಎಂಬುದು ಅತ್ಯಂತ ಅವಶ್ಯಕ. ಪತ್ರಕರ್ತರು ಸಾಮಾಜಿಕ ಕಳಕಳಿಯ ವರದಿಗೆ ಹೆಚ್ಚು ಆದ್ಯತೆ ನೀಡುವ ಮೂಲಕ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕೆಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದ್ದಾರೆ.

ಪಟ್ಟಣದ ತಾಲೂಕು ಪಂಚಾಯ್ತಿ ಸಭಾಂಗಣದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಪರಾಧ ಸುದ್ದಿಗಳಿಗೆ ಆದ್ಯತೆ ನೀಡದೆ ಅಭಿವೃದ್ಧಿ ಪರ ಸುದ್ದಿಗಳಿಗೆ ಹೆಚ್ಚು ಗಮನ ಹರಿಸಬೇಕು, ಸರ್ಕಾರಿ ಕಚೇರಿಗಳ ಆಡಳಿತದಲ್ಲಿ ಯಾವುದೆ ತಪ್ಪುಗಳಿದ್ದರೂ ಅವುಗಳನ್ನು ಬರವಣಿಗೆ ಮೂಲಕ ಪ್ರಶ್ನಿಸುವಂತಾಗಬೇಕೆಂದ ಶಾಸಕ ಕೃಷ್ಣಮೂರ್ತಿ ನಿರ್ಮಾಣ ಹಂತದಲ್ಲಿರುವ ಪತ್ರಿಕಾ ಭವನಕ್ಕೆ ಮಾಜಿ ಸಚಿವ ಮಹೇಶ್ ಮತ್ತು ಮಾಜಿ ಸಂಸದ ವಿ. ಶ್ರೀನಿವಾಸ ಪ್ರಸಾದ್ 10ಲಕ್ಷ ಅನುದಾನ ನೀಡಿ ರುವಂತೆ ನಾನು ಸಹಾ ಭವನದ ನಕ್ಷೆ ಪರಿಶೀಲಿಸಿ ಲಭ್ಯತೆ ಆಧಾರದಲ್ಲಿ ಹೆಚ್ಚಿನ ಅನುದಾನ ನೀಡಲು ಶ್ರಮಿಸುವೆ ಎಂದು ಆಶ್ವಾಸನೆ ನೀಡಿದರು

ಪತ್ರಕರ್ತರ ಸಂಕಷ್ಟಕ್ಕೆ ಸದಾ ಜೊತೆಗಿರುವೆ ಗಾಳಿ ಸುದ್ದಿಗಳಿಗೆ ಬೆಲೆ ನೀಡದೆ ಮಾಧ್ಯಮ ಕ್ಷೇತ್ರಕ್ಕೆ ಇನ್ನಷ್ಟು ಗೌರವ ತಂದುಕೊಡುವ ನಿಟ್ಟಿನಲ್ಲಿ ಪತ್ರಕರ್ತರು ಜವಾಬ್ದಾರಿ ಅರಿಯಬೇಕು, ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸದಲ್ಲಿ ತಮ್ಮ ಜೀವನವನ್ನು ತೊಡಗಿಸಿಕೊಳ್ಳುತ್ತಾರೆ, ಹಾಗಾಗಿಯೇ ಅವರಿಗೆ ಇತರ ಕ್ಷೇತ್ರಗಳಲ್ಲಿರುವವರು ಕೂಡ ಹೆಚ್ಚು ಗೌರವ ನೀಡುತ್ತಾರೆ. ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಕ್ಕಿಂತಲೂ ಪತ್ರಿಕಾ ರಂಗಕ್ಕೆ ಹೆಚ್ಚು ಶಕ್ತಿಯಿದ್ದು ಇದನ್ನು ನಿರೂಪಿಸಿರುವ ಹಿರಿಯ ಪತ್ರಕರ್ತರ ಹೆಸರನ್ನು ಉಳಿಸುವ ನಿಟ್ಟಿನಲ್ಲಿ ಕಿರಿಯ ಪತ್ರಕರ್ತರು ಕಾರ್ಯನಿರ್ವಹಿಸಬೇಕು ಎಂದರು

ಉಪವಿಭಾಗಾಧಿಕಾರಿ ಮಹೇಶ್ ಮಾತನಾಡಿ, ಪತ್ರಿಕೆಗಳು ಜ್ಞಾನ ಹೆಚ್ಚಿಸುವ ಸಂಕೇತವಾಗಿವೆ, ಅದೇ ರೀತಿ ಪತ್ರಿಕಾರಂಗದಲ್ಲಿರುವವರು ಸದಾ ಅಭಿವೃದ್ಧಿ ಹಾಗೂ ಜನಪರ ಸುದ್ದಿಗಳಿಗೆ ಆದ್ಯತೆ ನೀಡುವಂತಾಗಬೇಕು, ಪತ್ರಕರ್ತರ ವೃತ್ತಿ ಅತ್ಯಂತ ಪರಿಣಾಮಕಾರಿಯಾದುದು ಎಂದರು. ತಾಲೂಕಿನ ಪತ್ರಕರ್ತರಾದ ಚಿಕ್ಕಮಾಳಿಗೆ, ಎನ್.ನಟರಾಜು, ಪಿ.ಜಗದೀಶ್ ಅವರನ್ನು ಸಂಘದಿಂದ ವಾರ್ಷಿಕ ಸೇವಾ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ತಾಪಂ ಇಓ ಗುರುಶಾಂತಪ್ಪ, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ದೇವರಾಜ ಕಪ್ಪಸೋಗೆ, ರಾಜ್ಯ ಕಾರ್ಯಕಾರಿಣಿ ಸದಸ್ಯ ಗೂಳಿಪುರ ನಂದೀಶ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಡಿ.ಸಿದ್ದರಾಜು, ಜಿಲ್ಲಾ ಕಾರ್ಯದರ್ಶಿ ಡಿ.ನಟರಾಜು, ಜಿಲ್ಲಾ ನಿರ್ದೇಶಕ ಎನ್. ರಾಜೇಶ್, ತಾಲೂಕು ಸಂಘದ ಉಪಾಧ್ಯಕ್ಷ ಎಂ.ಮರಿಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಂ.ಪವನ್ ಕುಮಾರ್, ಕಾರ್ಯದರ್ಶಿ ಎಂ.ಪಿ.ಮಹೇಶ್, ಮಾಜಿ ಅಧ್ಯಕ್ಷ ನಾಗೇಂದ್ರ ಸ್ವಾಮಿ, ಕೋಟಂಬಳ್ಳಿ ಗುರುಸ್ವಾಮಿ, ರಾಜಶೇಖರ್, ರಾಜು, ಚಂದ್ರಶೇಖರ್, ಅವೀನ್ ಪ್ರಕಾಶ್, ಪ್ರೇಮ್ ಸಾಗರ್, ಸಾಗರ್, ಮಹೇಶ, ಮಲ್ಲಪ್ಪ, ತೇರಂಬಳ್ಳಿ ಕುಮಾರಸ್ವಾಮಿ, ಯೂನುಸ್, ನಿಂಪು ಸಾಗರ್, ಸುರೇಶ್, ವಸಂತ್, ಮೆಲ್ಲಹಳ್ಳಿ ಮಾ ಕುಮಾರ್, ಇನ್ನಿತರಿದ್ದರು.

ಪತ್ರಕರ್ತನ ಮಾನವೀಯತೆ




ಸಂಖ್ಯೆಯ ತಪ್ಪಿನಿಂದಾಗಿ ಯಳಂದೂರಿನ ಪತ್ರಕರ್ತರೊಬ್ಬರು ತಮ್ಮ ಖಾತೆಗೆ ಬಂದಿದ್ದ 1.50 ಲಕ್ಷ ರೂ. ಹಣವನ್ನು ಮಳವಳ್ಳಿಯ ವೀರೇಗೌಡರಿಗೆ ಸಬ್ ಇನ್ಸ್‌ಪೆಕ್ಟರ್ ಆಕರ್ಷ್ ಹಾಗೂ ಎಎಸ್‌ಐ ಅನ್ವರ್‌ಪಾಷರ ಸಮ್ಮುಖದಲ್ಲಿ ಹಿಂದಿರುಗಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಹಣ ಡಬಲ್ ಮಾಡುವುದಾಗಿ ವ್ಯಕ್ತಿಗೆ ವಂಚನೆ

ಚಾಮರಾಜನಗರ, ಜು.27–ಹಣ ಡಬಲ್ ಮಾಡಿಕೊಡುತ್ತೇವೆ ಎಂದು ನಂಬಿಸಿ ತಮಿಳುನಾಡು ಮೂಲದ ವ್ಯಕ್ತಿಯೊಬ್ಬರಿಗೆ ಲಕ್ಷಾಂತರ ರೂ.ವಂಚನೆ ಮಾಡಿರುವ ಘಟನೆ ನಗರದಲ್ಲಿ ನಡೆದಿದೆ.

ತಮಿಳುನಾಡಿನ ಅವಿನಾಷಿಯ ಸಚ್ಚಿದಾನಂದಂ ಎಂಬವರು ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆಯಲ್ಲಿ ನಗರದ ಅನ್ಸಾರಿ, ಸೈಯದ್ ಇಮ್ರಾನ್ ಸೇರಿದಂತೆ 7 ಜನರ ವಿರುದ್ಧ ದೂರು ನೀಡಿದ್ದಾರೆ.

ಘಟನೆಯ ವಿವರ: ಸಚ್ಚಿದಾನಂದಂ ಗಾರ್ಮೆಂಟ್ಸ್ ವ್ಯಾಪಾರಿಯಾಗಿದ್ದು, ರಿಯಲ್ ಎಸ್ಟೇಟ್ ಕೂಡ ಮಾಡುತ್ತಿದ್ದು, ಈತನಿಗೆ ಅನ್ಸಾರಿ ಎಂಬ ವ್ಯಕ್ತಿ ಪರಿಚಯವಾಗಿದ್ದಾನೆ. ಈತ ನಿಮ್ಮ ಹಣವನ್ನು ಡಬಲ್ ಮಾಡಿಕೊಡುತ್ತೇವೆ ಎಂದು ನಂಬಿಸಿ ಚಾಮರಾಜನಗರಕ್ಕೆ ಬರಲು ಹೇಳಿದ್ದಾನೆ. ಈತನ ಮಾತನ್ನು ನಂಬಿದ ಸಚ್ಚಿದಾನಂದಂ 3 ಲಕ್ಷ ರೂ. ಹಣ ತೆಗೆದುಕೊಂಡು ನಗರದ ಖಾಸಗಿ ಹೊಟೇಲ್‌ಗೆ ಬಂದು ರೂಂ ಮಾಡಿಕೊಂಡು ಉಳಿದುಕೊಂಡಿದ್ದಾನೆ ರೂಮ್‌ಗೆ ಪೊಲೀಸ್ ಸಮವಸ್ತ್ರದಲ್ಲಿದ್ದ ವ್ಯಕ್ತಿಯೊಡನೆ ಇತರೆ ನಾಲ್ಕು ಮಂದಿ ಬಂದು ಈತನಿಗೆ ಹೆದರಿಸಿ ನೀನು ಕಾನೂನು ಬಾಹಿರ ಚಟುವಟಿಕೆಯಲ್ಲಿ ಭಾಗಿಯಾಗಿದ್ದೀಯ ನಿನ್ನನ್ನು ಬಂಧಿಸುತ್ತೇವೆ ಎಂದು ಹೇಳಿ ಆತನ ಬಳಿ ಇದ್ದ 3 ಲಕ್ಷ ರೂ.ಗಳನ್ನು ಕಿತ್ತುಕೊಂಡು, ನಿನ್ನ ಮೇಲೆ ಕೇಸ್ ಮಾಡಬಾರದು ಎಂದರೆ ಇನ್ನೂ ಒಂದು ಲಕ್ಷ ರೂ.ಕೊಡುವಂತೆ ಬೇಡಿಕೆ ಇಟ್ಟಿದ್ದಾರೆ. ಆಗ ಆತ ಸೈಯದ್ ಇಮ್ರಾನ್ ಎಂಬುವವರ ಖಾತೆಗೆ 70 ಸಾವಿರ ರೂ.ಗಳನ್ನು ಕಳುಹಿಸಿದಾಗ ನನ್ನನ್ನು ಬಿಟ್ಟು ಕಳುಹಿಸಿದರು ಎಂದು ದೂರಿನಲ್ಲಿ ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪಟ್ಟಣ ಪೊಲೀಸರು ಶೀಘ್ರ ತನಿಖೆ ನಡೆಸಿ ಇಬ್ಬರನ್ನು ಬಂಧಿಸಿದ್ದಾರೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.



ಚಾಮರಾಜನಗರದ ಬಂಡಿಪುರ ಅಭಯ ಅರಣ್ಯದ ಮಂಗಲ ರಸ್ತೆ ಸಮೀಪ ಒಂದು ಮರದ ಮೇಲೆ ಕುಳಿತು ಕ್ಯಾಮರಾಕ್ಕೆ ಪೋಸ್ ಕೊಟ್ಟ ಚಿರತೆ.

ವಿಶ್ವದಲ್ಲೇ ಅಂಬೇಡ್ಕರ್‌ರಂತೆ ಪುಸ್ತಕ ಓದಿದವರು ಯಾರೂ ಇಲ್ಲ

ಪ್ರತಿಭಾ ಪುರಸ್ಕಾರದಲ್ಲಿ ಸಚಿವ ಹೆಚ್.ಸಿ.ಮಹದೇವಪ್ಪ



ಪರಿಶಿಷ್ಟ ಜಾತಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಜಿಲ್ಲಾ ಘಟಕ ನಡೆದ ಅಂಬೇಡ್ಕರ್ ಜಯಂತಿ, ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರಕ್ಕೆ ಪಾತ್ರರಾದ ವಿದ್ಯಾರ್ಥಿಗಳು.

ಚಾಮರಾಜನಗರ, ಜು.27 ವಿಶ್ವದಲ್ಲಿ ಅಂಬೇಡ್ಕರ್ ಅವರ ರೀತಿಯಲ್ಲಿ ಪುಸ್ತಕ ಓದಿದವರು ಯಾರು ಇಲ್ಲ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪ ಹೇಳಿದ್ದಾರೆ

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಪರಿಶಿಷ್ಟ ಜಾತಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಜಿಲ್ಲಾ ಘಟಕದಿಂದ ನಡೆದ ಅಂಬೇಡ್ಕರ್ ಜಯಂತಿ, ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಹಾಗೂ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾಮಾಜಿಕ ವ್ಯವಸ್ಥೆ ವಿರುದ್ಧವಾಗಿ ಆಳವಾದ ಸಂಶೋಧನಾತ್ಮಕ ಅಧ್ಯಯನ ಮಾಡಿ ಎಲ್ಲ ವಿಷಯಗಳಲ್ಲಿ ಇಡೀ ಜಗತ್ತೆ ಮೆಚ್ಚುವಂತೆ ವಿದ್ವತ್ ಸಂಪಾದನೆ ಮಾಡಿ ವಿಶ್ವಜ್ಞಾನಿಯಾದರು ಅದಕ್ಕಾಗಿಯೇ ವಿಶ್ವಸಂಸ್ಥೆಯಲ್ಲಿ ಅಂಬೇಡ್ಕರ್ ಜನ್ಮದಿನವನ್ನು ವಿಶ್ವ ಜ್ಞಾನ ದಿನವನ್ನಾಗಿ ಆಚರಣೆ ಮಾಡುತ್ತಿದೆ. ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡುವುದು ಜಿಲ್ಲಾ ಮಟ್ಟದ ಡಾ. ಬಿ.ಆರ್.ಅಂಬೇಡ್ಕರ್ ಸೇವಾರತ್ನ ಪ್ರಶಸ್ತಿ ಪ್ರದಾನ ಮಾಡುವುದು ಒಂದು ಪ್ರೋತ್ಸಾಹದಾಯಕವಾದ ಕೆಲಸವಾಗಿದೆ. ಎಂದು ತಿಳಿಸಿದರು.

ದಿವ್ಯ ಸಾನಿಧ್ಯ ವಹಿಸಿದ್ದ ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, ಎಸ್‌ಸಿ, ಎಸ್‌ಟಿ ಸಂಘಗಳು ಸಮಸ್ಯೆಗಳ ಸಂಘಗಳಾಗದೆ ಸಮಸ್ಯೆಗಳನ್ನು ಪರಿಹರಿಸುವಂತಾಗಬೇಕು. ಎಂದರು.

ಆರ್ಥಿಕ ಇಲಾಖೆ ಉಪಕಾರ್ಯದರ್ಶಿ ಅರುಳ್‌ಕುಮಾರ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ.ಗಣೇಶಪ್ರಸಾದ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಯೋಗಾನಂದ, ಉಪವಿಭಾಗಾಧಿಕಾರಿ ಮಹೇಶ್ ಮಾತನಾಡಿದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದಿದ್ದ 180ಕ್ಕೂ ಹೆಚ್ಚು ಮಕ್ಕಳಿಗೆ ಕಾಲೇಜು ಬ್ಯಾಗ್, ನೆನಪಿನ ಕಾಣಿಕೆ, ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಜಿಲ್ಲಾ ಮಟ್ಟದ ಡಾ.ಬಿ.ಆರ್.ಅಂಬೇಡ್ಕರ್ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಎಸ್ಪಿ ಡಾ.ಬಿ.ಟಿ. ಕವಿತ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಬಿಂದ್ಯಾ, ಜಿಲ್ಲಾ ನೌಕರರ ಸಂಘದ ಅಧ್ಯಕ್ಷೆ ಡಾ.ರೇಣುಕಾದೇವಿ, ಕಾರ್ಯಾಧ್ಯಕ್ಷ ಮಹದೇವಸ್ವಾಮಿ, ಪೌರಾಯುಕ್ತ ರಾಮದಾಸ್, ತಹಸೀಲ್ದಾರ್ ಗಿರಿಜ, ಸಂಘದ ಜಿಲ್ಲಾಧ್ಯಕ್ಷ ಸಿ.ಕೆ.ರಾಮಸ್ವಾಮಿ, ಪ್ರಧಾನ ಕಾರ್ಯದರ್ಶಿ ನಂಜುಂಡಸ್ವಾಮಿ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

ಬಿಳಿಗಿರಿರಂಗನಬೆಟ್ಟ: ಪ್ರಸಾದ ಸಿಗದೆ ಹೈರಾಣಾಗುತ್ತಿರುವ ಭಕ್ತರು



ಬಿಳಿಗಿರಿರಂಗನಬೆಟ್ಟದ ದಾಸೋಹ ಭವನದಲ್ಲಿ ಪ್ರಸಾದವಿಲ್ಲದೆ ವಾಪಸ್ಸಾಗುತ್ತಿರುವ ಭಕ್ತರು.


ಯಳಂದೂರು, ಜು.27 (ವಿ.ನಾಗರಾಜು)– ಬಿಳಿಗಿರಿರಂಗನಬೆಟ್ಟದ ಬಿಳಿಗಿರಿರಂಗನಾಥ ಸ್ವಾಮಿ ದೇಗುಲದಲ್ಲಿ ಮಧ್ಯಾಹ್ನ ಪ್ರಸಾದ ವ್ಯವಸ್ಥೆಯೂ ಇಲ್ಲದೆ ಪ್ರತಿನಿತ್ಯ ಭಕ್ತರು ಮಧ್ಯಾಹ್ನದ ಪ್ರಸಾದ ಸಿಗದೆ ವಾಪಸ್ಸಾಗುವ ಸ್ಥಿತಿ ನಿರ್ಮಾಣವಾಗಿದೆ.

ಈಗ ಶ್ರಾವಣಮಾಸದಲ್ಲಿ ಶನಿವಾರ ಹಾಗೂ ಭಾನುವಾರ ಬೆಟ್ಟಕ್ಕೆ ಭೇಟಿ ನೀಡುವರ ಸಂಖ್ಯೆ ದುಪ್ಪಟ್ಟಾಗುತ್ತದೆ. ದೇಗುಲದ ಪಕ್ಕದಲ್ಲಿರುವ ಕಮರಿಯಲ್ಲಿ ದಾಸೋಹ ಭವನವೂ ಇದೆ. ಇಲ್ಲಿಗೆ ಬರುವ ಹಲವರು ಪ್ರಸಾದವಿಲ್ಲದೆ ನಿರಾಶೆಯಿಂದ ಹಿಂದಿರುಗುವಂತಾಗಿದೆ ಪ್ರಸಾದದ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ದೇಗುಲದ ಆಡಳಿತ ಮಂಡಳಿ, ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಭಕ್ತರಾದ ಮನು, ರಾಘು ಸೇರಿದಂತೆ ಅನೇಕರ ಆಗ್ರಹವಾಗಿದೆ.

ಅಧಿಕಾರಿಗಳು ನಾಪತ್ತೆ: ಶನಿವಾರ, ಭಾನುವಾರ, ಸರ್ಕಾರಿ ರಜೆ ದಿನಗಳಲ್ಲಿ ಇಲ್ಲಿ ಅಧಿಕಾರಿಗಳೇ ನಾಪತ್ತೆಯಾಗುತ್ತಾರೆ. ಇಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸಿ ಎಂದು ಯಾರಿಗೆ ಹೇಳಬೇಕು ಎಂಬುದು ಭಕ್ತರ ಗೊಂದಲಕ್ಕೆ ಕಾರಣವಾಗಿದೆ. ದೇಗುಲದ ಬಳಿ ತೆರಳುವ ವಾಹನಗಳ ಪಾರ್ಕಿಂಗ್ ಸ್ಥಳದಲ್ಲೂ ಪೊಲೀಸ್ ವ್ಯವಸ್ಥೆ ಇಲ್ಲದೆ ವಾಹನಗಳು ಅಡ್ಡಾದಿಡ್ಡಿಯಾಗಿ ನಿಲ್ಲುತ್ತವೆ. ಒಟ್ಟಿನಲ್ಲಿ ಇಲ್ಲಿಗೆ ಬರುವ ಭಕ್ತರು, ಪ್ರವಾಸಿಗರಿಗೆ ಸೂಕ್ತ ಸೌಲಭ್ಯ ಒದಗಿಸಿ ಕೊಡುವಲ್ಲಿ ಇಲ್ಲಿನ ಆಡಳಿತ ಸೋತಿದೆ. ಕೂಡಲೇ ಸಂಬಂಧಪಟ್ಟವರು ಈ ಬಗ್ಗೆ ಸೂಕ್ತ ಕ್ರಮ ವಹಿಸಬೇಕು. ಇಲ್ಲಿರುವ ಅವ್ಯವಸ್ಥೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂಬುದು ಭಕ್ತರ ಆಗ್ರಹವಾಗಿದೆ.

ಹಾಡಹಗಲೇ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕಳ್ಳತನ

ಗುಂಡ್ಲುಪೇಟೆ, ಜು.27 (ಸೋಮ್.ಜಿ)– ಹಾಡಹಗಲೇ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿರುವ ಘಟನೆ ಶನಿವಾರ ಪಟ್ಟಣದ ದರಾಬೇಂದ್ರೆ ನಗರ ಅಶ್ವಿನಿ ಬಡಾವಣೆಯಲ್ಲಿ ನಡೆದಿದೆ.



ಅಶ್ವಿನಿ ಬಡಾವಣೆಯ ವಿನಾಯಕ ಕಾನ್ವೆಂಟ್ ರಸ್ತೆಯಲ್ಲಿರುವ ವಿಶ್ವನಾಥ್ ಎಂಬವರ ಮನೆಯಲ್ಲಿ ಈ ಕಳ್ಳತನ ನಡೆದಿದ್ದು, ವೃತ್ತಿಯಲ್ಲಿ ಚಾಲಕರಾಗಿರುವ ಇವರು ಕೆಲಸದ ನಿಮಿತ್ತ ಬೆಳಗ್ಗೆ ಹೊರಗಡೆ ಹೋಗಿದ್ದಾಗ ಕಳ್ಳರು ಮುಂಭಾಗದ ಬಾಗಿಲನ್ನು ಮೀಟಿ ಬೀರುವಿನಲ್ಲಿಟ್ಟಿದ್ದ ಸುಮಾರು ಒಂದು ಲಕ್ಷದ ನಲವತ್ತೊಂದು ಸಾವಿರ ರೂ. ಮೌಲ್ಯದ ಚಿನ್ನದ ಕಿವಿಯ ಆಭರಣಗಳನ್ನು ಕಳ್ಳತನ ಮಾಡಿದ್ದಾರೆ. ಈ ಬಗ್ಗೆ ವಿಶ್ವನಾಥ್ ಎಂಬುವರು ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು ಕಳ್ಳರ ಪತ್ತೆಗೆ ವಿಶೇಷ ತಂಡವನ್ನು ರಚನೆ ಮಾಡಲಾಗಿದೆ ಹಾಗೂ ಶೀಘ್ರದಲ್ಲೇ ಕಳ್ಳನನ್ನು ಬಂಧಿಸುವ ವಿಶ್ವಾಸವನ್ನು ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್ ವ್ಯಕ್ತಪಡಿಸಿದ್ದಾರೆ.

ಒಂದನೇ ಪುಟದಿಂದ

ಮೂವರು ದಂಧೆಕೋರರ ಬಂಧನ

ರಿಂಗ್ ರಸ್ತೆಯ ಸರ್ವೀಸ್ ರಸ್ತೆ ಫುಟ್‌ಪಾತ್ ಮೇಲೆ ನಿರ್ಮಿಸಲಾಗಿದ್ದ ಶೆಡ್‌ಗೆ ಲಗ್ಗೆ ಇಟ್ಟಿದ್ದಾರೆ. ಆ ಸಂದರ್ಭದಲ್ಲಿ ಶೆಡ್‌ನಲ್ಲಿದ್ದ ಗುಜರಾತ್‌ನ ಓರ್ವ ಹಾಗೂ ಮುಂಬೈನ ಇಬ್ಬರನ್ನು ವಶಕ್ಕೆ ಪಡೆದು ಶೋಧನಾ ಕಾರ್ಯ ನಡೆಸಿದಾಗ ಶೆಡ್‌ನಲ್ಲಿ 15 ಕೆಜಿ ಎಂಡಿಎಂಎ ಪೌಡರ್ ಮತ್ತು ಬ್ಯಾರಲ್‌ವೊಂದರಲ್ಲಿ ಸುಮಾರು 20 ಕೆಜಿಯಷ್ಟು ಎಂಡಿಎಂಎ ದ್ರವ ವಸ್ತು ಸಿಕ್ಕಿಬಿದ್ದಿದೆ.

ಶೆಡ್‌ನ ಮಾಲೀಕ ಮೈಸೂರಿನ ಅಜ್ಮಲ್ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಲಾಗಿ, ಡ್ರಗ್ಸ್ ಬಗ್ಗೆ ತನಗೇನು ತಿಳಿಯದು, ಹೆಚ್ಚಿನ ಬಾಡಿಗೆ ಸಿಗುತ್ತದೆ ಎಂದು ಇವರಿಗೆ ಶೆಡ್ ಅನ್ನು ಬಾಡಿಗೆಗೆ ಕೊಟ್ಟಿದ್ದೆ ಎಂದು ತಿಳಿದು ಬಂದಿದೆ. ಮಹಾರಾಷ್ಟ್ರ ಪೊಲೀಸರು ಶೆಡ್ ಮಾಲೀಕ ಅಜ್ಮಲ್ ಸೇರಿದಂತೆ ನಾಲ್ವರನ್ನು ಬಂಧಿಸಿ, ಕರೆದೊಯ್ದಿದ್ದಾರೆ.

ಈ ದಂಧೆಕೋರರು ವಿದೇಶದಿಂದ ಎಂಡಿಎಂಎ ಸೇರಿದಂತೆ ಹಲವು ಡ್ರಗ್ಸ್‌ಗಳನ್ನು ಮುಂಬೈಗೆ ತರಿಸಿಕೊಂಡು ದೇಶಾದ್ಯಂತ ತಮ್ಮ ಪೆಟ್ಲರ್‌ಗಳ ಮೂಲಕ ಬಾರಿ ಪ್ರಮಾಣದಲ್ಲಿ ಮಾರಾಟ ಮಾಡುತ್ತಿದ್ದರು ಎಂದು ಹೇಳಲಾಗಿದೆ. ಈ ದಂಧೆಕೋರರು ಯಾವುದೇ ನಗರದಲ್ಲೂ ಸಣ್ಣ ಪ್ರಮಾಣದಲ್ಲಿ ಡ್ರಗ್ಸ್ ಅನ್ನು ಮಾರಾಟ ಮಾಡುತ್ತಿರಲಿಲ್ಲ. ತಾವು ದೊಡ್ಡ ದೊಡ್ಡ ನಗರಗಳ ಗ್ರಾಹಕರಿಗೆ ಡ್ರಗ್ಸ್ ಸರಬರಾಜು ಮಾಡಲು ಅನುಕೂಲವಾಗುವಂತೆ ಯಾವುದಾದರೂ ಸುರಕ್ಷಿತ ಸ್ಥಳವನ್ನು ಆಯ್ಕೆ ಮಾಡಿಕೊಂಡು ಆ ಸ್ಥಳದಲ್ಲಿ ಡ್ರಗ್ಸ್ ಸಂಗ್ರಹಿಸಿ ಇಡುತ್ತಿದ್ದರು. ನಂತರ ಅಲ್ಲಿಂದ ಬೇರೆ ಬೇರೆ ನಗರಗಳಿಗೆ ತಮ್ಮ ಬ್ರೋಕರ್‌ಗಳ ಮೂಲಕ ಡ್ರಗ್ಸ್ ಅನ್ನು ಸರಬರಾಜು ಮಾಡುತ್ತಿದ್ದರು. ಇವರು ಡ್ರಗ್ಸ್ ಸಂಗ್ರಹಿಸಿಟ್ಟಿರುವ ಸ್ಥಳವನ್ನು ಬ್ರೋಕರ್‌ಗಳಿಗೂ ತಿಳಿಯ ದಂತೆ ರಹಸ್ಯವಾಗಿಡಲಾಗುತ್ತಿತ್ತು ಎಂದು ಹೇಳಲಾಗಿದೆ.

ಮಹಾರಾಷ್ಟ್ರ ಪೊಲೀಸರು ಏಪ್ರಿಲ್ ತಿಂಗಳಿನಲ್ಲಿ ಏಳು ಮಂದಿ ಹಾಗೂ ಈಗ ನಾಲ್ವರು ಸೇರಿದಂತೆ ಒಟ್ಟು 11 ಮಂದಿಯನ್ನು ಬಂಧಿಸಿದ್ದು, ಈ ಡ್ರಗ್ಸ್ ವ್ಯವಹಾರದಲ್ಲಿ ದೊಡ್ಡ ಜಾಲವೇ ಕಾರ್ಯನಿರ್ವಹಿಸುತ್ತಿದ್ದೆ ಎಂದು ಹೇಳಲಾಗಿದ್ದು, ಜಾಲವನ್ನು ಬೇಧಿಸುವ ನಿಟ್ಟಿನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಮೈಸೂರು ಪೊಲೀಸರು ಅಲರ್ಟ್: ಡ್ರಗ್ಸ್ ದಂಧೆಕೋರರು ಬಾರೀ ಪ್ರಮಾಣದ ಡ್ರಗ್ಸ್‌ನೊಂದಿಗೆ ಸಿಕ್ಕಿಬಿದ್ದ ಹಿನ್ನೆಲೆಯಲ್ಲಿ ಮೈಸೂರು ಪೊಲೀಸರು ಅಲರ್ಟ್ ಆಗಿದ್ದಾರೆ. ಮಹಾರಾಷ್ಟ್ರದಿಂದ ಬಂದ ದಂಧೆಕೋರರಿಗೆ ಶೆಡ್ ಅನ್ನು ಅಜ್ಮಲ್ ಬಾಡಿಗೆಗೆ ನೀಡಿದ್ದ ಎಂಬುದು ಮಾತ್ರ ಸದ್ಯಕ್ಕೆ ತಿಳಿದುಬಂದಿದೆ. ಆದರೆ, ಮಹಾರಾಷ್ಟ್ರ ದಂಧೆಕೋರರಿಗೆ ಮೈಸೂರಿನ ಸಂಪರ್ಕ ಸಿಕ್ಕಿದ್ದು ಹೇಗೆ?, ಡ್ರಗ್ಸ್ ದಂಧೆಕೋರರ ಮತ್ತೊಂದು ತಂಡ ಇಲ್ಲಿ ಕಾರ್ಯನಿರ್ವಹಿಸುತ್ತಿದೆಯೇ?, ಸ್ಥಳೀಯವಾಗಿ ಯಾರೆಲ್ಲಾ ದಂಧೆಕೋರರಿಗೆ ಸಹಕಾರ ನೀಡುತ್ತಿದ್ದಾರೆ ಎಂಬುದರ ಬಗ್ಗೆ ಮೈಸೂರು ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಮಾಧ್ಯಮಗಳ ಕರೆಗೆ ಸಿಗದ ಪೊಲೀಸ್ ಕಮೀಷ್ನರ್: ಮೈಸೂರು ನಗರದಲ್ಲಿ ಬೆಚ್ಚಿ ಬೀಳುವಂತಹ ಘಟನೆ ನಡೆದಿದೆ. ಮಹಾರಾಷ್ಟ್ರ ಪೊಲೀಸರು ದೊಡ್ಡ ಮಟ್ಟದ ಕಾರ್ಯಾಚರಣೆ ನಡೆಸಿ, ಬಾರೀ ಪ್ರಮಾಣದ ಡ್ರಗ್ಸ್ ಅನ್ನು ಮೈಸೂರು ಪೊಲೀಸರ ಸಹಕಾರದಿಂದಲೇ ವಶಪಡಿಸಿಕೊಂಡಿದ್ದಾರೆ. ಇಂತಹ ದೊಡ್ಡ ಮಟ್ಟದ ಕಾರ್ಯಾಚರಣೆ ನಡೆದಿದ್ದರೂ ಕೂಡ ನಗರ ಪೊಲೀಸ್ ಆಯುಕ್ತರು ಅದರ ಬಗ್ಗೆ ಒಂದು ಸಣ್ಣ ಪ್ರಕಟಣೆಯನ್ನೂ ನೀಡಿಲ್ಲ. ಅಲ್ಲದೆ, ಅವರ ಮೊಬೈಲ್‌ಗೆ ಕರೆ ಮಾಡಿದರೆ ಕಾಲ್ ಫಾರ್ವಡೆಡ್ ಎಂದು ಬರುತ್ತಿದೆ. ಇಂತಹ ಕಾರ್ಯಾಚರಣೆ ನಡೆದಾಗ ಅಧಿಕೃತವಾಗಿ ಅದರ ವಿವರಗಳನ್ನು ಪಡೆಯಲು ಮಾಧ್ಯಮ ಪ್ರತಿನಿಧಿಗಳು ಸಹಜವಾಗಿಯೇ ಕರೆ ಮಾಡುತ್ತಾರೆ ಎಂಬುದು ಪೊಲೀಸ್ ಆಯುಕ್ತರಾದ ಅವರಿಗೂ ತಿಳಿದಿರುವ ವಿಚಾರವೇ ಆಗಿದೆ. ಆದರೂ ಕೂಡ ಮಾಧ್ಯಮ ದವರ ಕರೆಗೆ ಸಿಗದೆ ಪೊಲೀಸ್ ಆಯುಕ್ತರು ಕಾಲ್ ಫಾರ್ವರ್ಡ್ ಮಾಡಿಕೊಂಡಿರುವುದು ಅಚ್ಚರಿಯಾಗಿದೆ.

ವಿಚಾರವಾದಿಗಳು, ನಿವೃತ್ತರ ಆತಂಕ

ಇದರ ಸುಳಿವಿರಲಿಲ್ಲವೇ ಎಂಬ ಪ್ರಶ್ನೆಗಳು ಸಾರ್ವಜನಿಕರನ್ನು ಕಾಡುತ್ತಿವೆ. ಅಷ್ಟಕ್ಕೂ ಮೈಸೂರು ನಗರದಲ್ಲಿ ಇಂತಹ ಆತಂಕಕಾರಿ ಸನ್ನಿವೇಶ ಸೃಷ್ಟಿಯಾಗಿರುವುದು ಇದೇ ಮೊದಲೇನಲ್ಲ. 2006ರ ಅಕ್ಟೋಬರ್‌ನಲ್ಲಿ ವಿಕಾಸಸೌಧದ ಮೇಲೆ ಬಾಂಬ್ ದಾಳಿ ನಡೆಸಲು ಸಂಚು ರೂಪಿಸುತ್ತಿದ್ದ ಇಬ್ಬರು ಪಾಕಿಸ್ತಾನಿ ಉಗ್ರರು ಮೈಸೂರಲ್ಲಿ ಅಡಗಿದ್ದರು. ಸುಮಾರು 25 ವರ್ಷದ ಫಹಾದ್ ಹಾಗೂ ಅಲಿ ಹುಸೇನ್ ಎಂಬ ಉಗ್ರರನ್ನು ವಿಜಯನಗರದಲ್ಲಿ ಸೆರೆ ಹಿಡಿಯಲಾಗಿತ್ತು. ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ಇವರು ಪೊಲೀಸರು ತಡೆದರೂ ನಿಲ್ಲಿಸದೆ ಅವರತ್ತ ಗುಂಡು ಹಾರಿಸಿ, ಪರಾರಿಯಾಗುವಾಗ ಗುಂಡಿನ ಪ್ರತಿದಾಳಿ ನಡೆಸಿ ಬಂಧಿಸಲಾಗಿತ್ತು ಇಬ್ಬರೂ ಜಮ್ಮು-ಕಾಶ್ಮೀರದಲ್ಲಿ ಸಕ್ರಿಯವಾಗಿದ್ದ ಅಲ್-ಬದರ್ ಫೌಂಡೇಶನ್ ಭಯೋತ್ಪಾದಕ ಗುಂಪಿಗೆ ಸೇರಿದವರು ಎನ್ನಲಾಗಿತ್ತು. ಓರ್ವ ಸ್ಫೋಟಕ ತಯಾರಿಸುವಲ್ಲಿ ತರಬೇತಿ ಹೊಂದಿದ್ದ ಎಂದು ಹೇಳಲಾಗಿತ್ತು ಇವರಿಬ್ಬರೂ ಇನ್ನೂ ಜೈಲಿನಲ್ಲಿದ್ದಾರೆ.

ಇನ್ನು 2016ರ ಆಗಸ್ಟ್‌ನಲ್ಲಿ ಜಿಲ್ಲಾ ನ್ಯಾಯಾಲಯ ಆವರಣದ ಶೌಚಾಲಯದೊಳಗೆ ಸ್ಫೋಟ ಸಂಭವಿಸಿತ್ತು. ಸುಧಾರಿತ ಸ್ಫೋಟಕವನ್ನು ಮೂರು ಲೀಟರ್ ಪ್ರೆಶರ್ ಕುಕ್ಕರ್‌ನಲ್ಲಿಟ್ಟು ಸ್ಫೋಟಿಸಿದ್ದು, ಮೈಸೂರನ್ನು ಬೆಚ್ಚಿಬೀಳಿಸಿತ್ತು. ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದರು. ಬಿಗಿ ಭದ್ರತೆ ಇರುವ ನ್ಯಾಯಾಲಯ ಆವರಣದಲ್ಲೇ ಈ ದುಷ್ಕೃತ್ಯ ನಡೆದಿದ್ದರಿಂದ ಇಡೀ ದೇಶದ ಗಮನ ಸೆಳೆದಿತ್ತು ಆ ಸ್ಫೋಟವನ್ನು ಭಯೋತ್ಪಾದಾ ಕೃತ್ಯವೆಂದೇ ಪೊಲೀಸರು ಪರಿಗಣಿಸಿದ್ದರು. ಇದೀಗ ಜನವಸತಿ ಪ್ರದೇಶದ ಬಳಿಯೇ ಅಪಾರ ಪ್ರಮಾಣದ ಡ್ರಗ್ಸ್ ಪತ್ತೆಯಾಗಿದೆ. ದಾಸ್ತಾನು ಮಾತ್ರವಲ್ಲ ಇಲ್ಲಿಯೇ ತಯಾರಿಸಲಾಗುತ್ತಿತ್ತು ಎಂದು ಶಂಕಿಸಲಾಗಿದೆ. ವಿವಿಧ ರಾಜ್ಯಗಳು ಹಾಗೂ ವಿದೇಶಗಳಿಗೆ ಇಲ್ಲಿಂದಲೇ ಸಾಗಿಸಲಾಗುತ್ತಿತ್ತೇ ಎಂಬ ಗುಮಾನಿ ಶುರುವಾಗಿದೆ. ಇಷ್ಟೆಲ್ಲಾ ಚಟುವಟಿಕೆಗಳು ನಡೆಯಬೇಕಾದರೆ ವ್ಯವಸ್ಥಿತ ಜಾಲ ಸಕ್ರಿಯವಾಗಿರಲೇಬೇಕು. ಇದೆಲ್ಲಾ ಪೂರ್ವ ತಯಾರಿ ಇಲ್ಲದೆ ದಿಢೀರ್ ಅನುಷ್ಠಾನಗೊಳಿಸಲಾಗದು. ಹಾಗಾದರೆ ಇಂತಹ ಸಮಾಜಘಾತುಕ ಚಟುವಟಿಕೆಗಳಿಗೆ ಮೈಸೂರು ಸುರಕ್ಷಿತ ತಾಣವಾಗಿ ನಿರ್ಮಾಣವಾಗಿದೆಯೇ?. ಎಂಬುದು ವಿಚಾರವಾದಿಗಳು ಹಾಗೂ ನಿವೃತ್ತರ ಆತಂಕವಾಗಿದೆ.

ರಾಜ್ಯ ಪೊಲೀಸರೂ ತನಿಖೆ ನಡೆಸಲಿದ್ದಾರೆ

ನಡೆದ ಈ ಕಾರ್ಯಾಚರಣೆಯಲ್ಲಿ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಪ್ರಕರಣದ ಬಗ್ಗೆ ಕರ್ನಾಟಕ ಪೊಲೀಸರು ಸಹ ತನಿಖೆ ನಡೆಸಲಿದ್ದಾರೆ ಎಂದರು. ಈ ಘಟಕ ಕಳೆದ 20 ದಿನಗಳಿಂದ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ಲಭಿಸಿದೆ. ಆದರೆ, ಇದಕ್ಕೂ ಮೊದಲಿನಿಂದಲೂ ಇದು ನಡೆಯುತ್ತಿತ್ತೇ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತದೆ. ಡ್ರಗ್ಸ್‌ನ ಸರಬರಾಜು ಎಲ್ಲೆಲ್ಲಿ ನಡೆದಿದೆ? ಇದರ ಹಿಂದಿನ ಜಾಲವನ್ನು ಭೇದಿಸಲು ಕರ್ನಾಟಕ ಪೊಲೀಸರು ಸಂಪೂರ್ಣ ತನಿಖೆ ನಡೆಸಲಿದ್ದಾರೆ ಎಂದು ಹೇಳಿದರು. ಕರ್ನಾಟಕದಲ್ಲಿ ಮಾದಕ ವಸ್ತುಗಳ ದಂಧೆಯ ವಿರುದ್ಧ ಕಠಿಣ ಕ್ರಮಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಸಚಿವರು ಹೇಳಿದ್ದಾರೆ. ಮುಂದಿನ ತನಿಖೆಯಿಂದ ಈ ಪ್ರಕರಣದ ಸಂಪೂರ್ಣ ವಿವರಗಳು ಬಹಿರಂಗವಾಗಲಿವೆ ಎಂದು ನಿರೀಕ್ಷಿಸಲಾಗಿದೆ.

85 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ನದಿ ದಡದಲ್ಲಿ ನಿಂತು ಕಾವೇರಿ ನದಿಯ ವೈಯ್ಯಾರವನ್ನು ಆಸ್ವಾದಿಸಲು ಮುಗಿ ಬಿದ್ದರು.

ಎರಡನೇ ಬಾರಿ ಭರ್ತಿಯಾದ ಜಲಾಶಯ: ಜೂ.29ರಂದು ಜಲಾಶಯದಲ್ಲಿ 124 ಅಡಿ ನೀರು ಸಂಗ್ರಹವಾಗಿ ಜೂ.30ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಇನ್ನಿತರರು ಜಲಾಶಯಕ್ಕೆ ಬಾಗಿನ ಅರ್ಪಿಸಿದ್ದರು. ಬಳಿಕ ಜು.5ರಿಂದ ಒಳಹರಿವಿನ ಪ್ರಮಾಣಕ್ಕೆ ಅನುಗುಣವಾಗಿ ಜಲಾಶಯದಿಂದ ಕಾವೇರಿ ನದಿ ಹಾಗೂ ಕಾಲುವೆಗೆ ನೀರನ್ನು ಬಿಡಲಾಗುತ್ತಿತ್ತು. ಇದರಿಂದ ಕಳೆದ ವಾರ ಜಲಾಶಯದಲ್ಲಿ 3 ಅಡಿ ನೀರು ಕಡಿಮೆಯಾಗಿ 121 ಅಡಿಗೆ ಕುಸಿದಿತ್ತು. ಆದರೆ, ನಾಲ್ಕೈದು ದಿನದಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಸುರಿಯುತ್ತಿರುವುದರಿಂದ ಜಲಾಶಯಕ್ಕೆ ಹರಿದು ಬರುವ ನೀರಿನ ಪ್ರಮಾಣದಲ್ಲಿ ಹೆಚ್ಚಳವಾಗಿದೆ. 25 ದಿನದ ಅಂತರದಲ್ಲೇ ಎರಡನೇ ಬಾರಿಗೆ ಜಲಾಶಯ ತುಂಬಿದ್ದು, ಹೆಚ್ಚಿನ ಪ್ರಮಾಣದ ನೀರು ನದಿಗೆ ಬಿಡಲಾಗುತ್ತಿದೆ.

ಸಂಗೀತ ಕಾರಂಜಿ ಬಂದ್: ಜಲಾಶಯದಿಂದ ಭಾರಿ ಪ್ರಮಾಣದ ನೀರು ನದಿಗೆ ಬಿಡುಗಡೆ ಮಾಡುತ್ತಿರುವುದರಿಂದ ಕೆಆರ್‌ಎಸ್ ಉದ್ಯಾನವನ ಸಂಗೀತ ಕಾರಂಜಿ ಭಾಗಕ್ಕೂ ನೀರು ನುಗ್ಗಿದೆ. ಇದರಿಂದ ಉದ್ಯಾನವನ ಸಂಗೀತ ಕಾರಂಜಿ ಭಾಗಕ್ಕೆ ಪ್ರವಾಸಿಗರ ಪ್ರವೇಶ ನಿಷೇಧಿಸಲಾಗಿದೆ. ಅಲ್ಲದೆ, ಸಂಗೀತ ಕಾರಂಜಿ ಪ್ರದರ್ಶನವೂ ರದ್ದು ಮಾಡಲಾಗಿದೆ.

ದೋಣಿ ವಿಹಾರವಿಲ್ಲ: ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮದಲ್ಲೂ ಕಾವೇರಿ ನದಿ ಉಕ್ಕಿ ಹರಿಯುತ್ತಿರುವುದರಿಂದ ಪಕ್ಷಿಧಾಮದಲ್ಲಿ ದೋಣಿ ವಿಹಾರ ಸ್ಥಗಿತಗೊಳಿಸಲಾಗಿದೆ. ಆದರೆ, ಪಕ್ಷಿಧಾಮದ ಉದ್ಯಾನ ಪ್ರವೇಶಕ್ಕೆ ಅವಕಾಶವಿದ್ದು, ಪ್ರವಾಸಿಗರು ನಿರ್ಬಂಧಿಸಿದ ಪ್ರದೇಶದತ್ತ ಸುಳಿಯದಂತೆ ಸೂಚನೆ ನೀಡಲಾಗುತ್ತಿದೆ. ವಾರಾಂತ್ಯ ರಜೆ ದಿನವಾದ ಶನಿವಾರ ಹಾಗೂ ಭಾನುವಾರ ಒಂದು ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಪಕ್ಷಿಧಾಮಕ್ಕೆ ಭೇಟಿ ನೀಡಿದ್ದಾರೆ.

ನಿಮಿಷಾಂಭದಲ್ಲೂ ನದಿಯ ರಭಸ: ಶ್ರೀರಂಗಪಟ್ಟಣದ ಹಳೆ ಮತ್ತು ಹೊಸ ಸೇತುವೆ ಬಳಿ ಕಾವೇರಿ ನದಿಯನ್ನು ನೋಡಲು ಪ್ರವಾಸಿಗರು ಮುಗಿ ಬೀಳುತ್ತಿದ್ದಾರೆ. ಅದರಲ್ಲೂ ಹೊಸ ಸೇತುವೆ ಮೇಲೆ ವಾಹನ ಸವಾರರು ತುಂಬಿ ಹರಿಯುತ್ತಿರುವ ಕಾವೇರಿಯನ್ನು ಕಣ್ತುಂಬಿಕೊಂಡು ನಮಿಸುತ್ತಿದ್ದ ದೃಶ್ಯ ಕಂಡು ಬರುತ್ತಿದೆ. ನಿಮಿಷಾಂಭ, ಗೋಸಾಯಿಘಾಟ್‌ನಲ್ಲೂ ಉಕ್ಕಿ ಹರಿಯುತ್ತಿರುವ ಕಾವೇರಿ ನದಿಯನ್ನು ನೋಡಲು ಪ್ರವಾಸಿಗರು ಆಗಮಿಸುತ್ತಿದ್ದು, ನದಿಗೆ ಇಳಿಯದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುತ್ತಿದೆ.

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ನಾಗರಹೊಳೆ ಅರಣ್ಯ, ಕೇರಳದ ವೈನಾಡಿನಲ್ಲಿ ಅತೀ ಹೆಚ್ಚು ಮಳೆ ಹಿನ್ನಲೆ

ಕಬಿನಿ, ತಾರಕ ಜಲಾಶಯದಿಂದ ನದಿಗೆ ನೀರು ಬಿಡುಗಡೆ

ಭದ್ರತಾ ದೃಷ್ಟಿಯಿಂದ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಜನತೆಗೆ ಮನವಿ





ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಹಾಗೂ ತಾರಕ ಜಲಾಶಯದಿಂದ ಕಪಿಲಾ ನದಿಗೆ ನೀರು ಹರಿಸುತ್ತಿರುವುದು.

ಹೆಚ್.ಡಿ.ಕೋಟೆ, ಜು.27– ಕಳೆದೊಂದು ವಾರದಿಂದ ನಾಗರಹೊಳೆ ಅರಣ್ಯ ವ್ಯಾಪ್ತಿ ಹಾಗೂ ಕೇರಳದ ವೈನಾಡಿನಲ್ಲಿ ಅತೀ ಹೆಚ್ಚು ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಬಿನಿ, ತಾರಕ ಜಲಾಶಯದಿಂದ ಕಪಿಲಾ ನದಿಗೆ 49 ಸಾವಿರ ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದೆ.

ತಾರಕ: ಅತೀ ಹೆಚ್ಚು ಮಳೆ ಹಿನ್ನೆಲೆಯಲ್ಲಿ ತಾರಕ ಜಲಾಶಯಕ್ಕೆ 7 ಸಾವಿರ ಕ್ಯುಸೆಕ್ ನೀರು ಹರಿದು ಬರುತ್ತಿರುವ ಹಿನ್ನೆಲೆಯಲ್ಲಿ ಜಲಾಶಯದ 3 ಕ್ರಸ್ಟ್ ಗೇಟ್‌ಗಳಿಂದ 9 ಸಾವಿರ ಕ್ಯೂಸೆಕ್ಸ್ ನೀರನ್ನು ನದಿಗೆ ಹರಿಸಲಾಗುತ್ತಿದೆ ಎಂದು ತಾರಕ ಸಹಾಯಕ ಕಾರ್ಯ ಪಾಲಕ ಅಭಿಯಂತರ ನಟಶೇಖರ್ ತಿಳಿಸಿದ್ದಾರೆ.

ನದಿಗೆ ಜಲಾಶಯದಿಂದ ನೀರು ಹರಿಸುತ್ತಿರುವ ಕಾರಣ ಕಟ್ಟೆಮನಗನಹಳ್ಳಿ ಗ್ರಾಮದ ಬಳಿಯ ಸೇತುವೆ ಸಂಪೂರ್ಣ ಮುಳುಗಡೆಯಾಗಿದ್ದು, ಕಟ್ಟೆಮನುಗನಹಳ್ಳಿ, ಮೊತ್ತ, ಆಲ್ತಾಲ್ ಹುಂಡಿ, ಮೊತ್ತ ಹಾಡಿ ಸೇರಿದಂತೆ ಹಲವು ಗ್ರಾಮಗಳಿಗೆ ಸಂಪರ್ಕ ಕಡಿತವಾಗಿದೆ ಹಾಗೂ ಹೆಚ್.ಡಿ. ಕೋಟೆ ಪಟ್ಟಣದಲ್ಲಿರುವ ಅಶ್ವತ್ ಕಟ್ಟೆ ಶಿವನ ದೇವಾಲಯಕ್ಕೆ ನೀರು ನುಗ್ಗಿದೆ.

ಜಲಾಶಯದ ಗರಿಷ್ಠ ಮಟ್ಟ 2425 ಅಡಿಗಳಾಗಿದ್ದು, ಜಲಾಶಯದ ಇಂದಿನ ಮಟ್ಟ 2423 ಅಡಿಗಳಾಗಿದೆ. ಜಲಾಶಯ ಭರ್ತಿಗೆ 2 ಅಡಿ ಬಾಕಿ ಉಳಿದಿದ್ದು, ಜಲಾಶಯದ ಭದ್ರತಾ ಹಿತದೃಷ್ಟಿಯಿಂದ ನೀರನ್ನು ನದಿಗೆ ಬಿಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಬಿನಿ ನೀರಿನ ಮಟ್ಟ	
ಗರಿಷ್ಠ ಮಟ್ಟ	2,284 ಅಡಿ
ಇಂದಿನ ಮಟ್ಟ	2284 ಅಡಿ
ಒಳ ಹರಿವು	30000 ಕ್ಯೂಸೆಕ್
ಹೊರ ಹರಿವು	40000 ಕ್ಯೂಸೆಕ್

ತಾರಕ ನೀರಿನ ಮಟ್ಟ	
ಗರಿಷ್ಠ ಮಟ್ಟ	2425 ಅಡಿ
ಇಂದಿನ ಮಟ್ಟ	2423 ಅಡಿ
ಒಳ ಹರಿವು	7000 ಕ್ಯೂಸೆಕ್
ಹೊರ ಹರಿವು	9000 ಕ್ಯೂಸೆಕ್

ಕಬಿನಿ: ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯಕ್ಕೆ ಕೇರಳದ ವೈನಾಡು, ನಾಗರಹೊಳೆ ಅರಣ್ಯ ಭಾಗದಲ್ಲಿ ಅತೀ ಹೆಚ್ಚು ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಜಲಾಶಯದ 4 ಕ್ರಸ್ಟ್ ಗೇಟ್‌ಗಳಿಂದ ಕಪಿಲಾ ನದಿಗೆ 40 ಸಾವಿರ ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದೆ ಎಂದು ಕಬಿನಿ ಸಹಾಯಕ ಕಾರ್ಯಪಾಲಕ ಅಭಿಯಂತರ ಗಣೇಶ್ ತಿಳಿಸಿದ್ದಾರೆ.

ಜಲಾಶಯಕ್ಕೆ 30 ಸಾವಿರ ಕ್ಯುಸೆಕ್ ನೀರು ಹರಿದು ಬರುತ್ತಿರುವುದರಿಂದ ಜಲಾಶಯದ ಭದ್ರತೆ ಹಿತದೃಷ್ಟಿಯಿಂದ ಜಲಾಶಯದ 4 ಕ್ರಸ್ಟ್ ಗೇಟ್‌ಗಳಿಂದ 35 ಸಾವಿರ ಕ್ಯುಸೆಕ್ ನೀರು ಹಾಗೂ ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್‌ನಿಂದ 5 ಸಾವಿರ ಕ್ಯುಸೆಕ್ಸ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಹೀಗಾಗಿ ನದಿ ಪಾತ್ರದ ಜನತೆ ತಮ್ಮ ಜಾನುವಾರುಗಳೊಂದಿಗೆ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಅಧಿಕಾರಿಗಳು ತಿಳಿಸಿದ್ದಾರೆ.

ನಂಜನಗೂಡು: ದೇವಾಲಯ, ಜನವಸತಿ ಪ್ರದೇಶ ಜಲಾವೃತ





ಕಬಿನಿ ಹಾಗೂ ತಾರಕ ಜಲಾಶಯದಿಂದ ಕಪಿಲಾ ನದಿಗೆ ನೀರು ಹರಿಸುತ್ತಿರುವುದರಿಂದ ದೇವಾಲಯದ ಆವರಣ, ಮನೆಗಳು ಜಲಾವೃತಗೊಂಡಿರುವುದು.

ನಂಜನಗೂಡು, ಜು.27– ಕಬಿನಿ ಜಲಾಶಯದಿಂದ ಕಪಿಲಾ ನದಿಗೆ 51 ಸಾವಿರಕ್ಕೂ ಹೆಚ್ಚು ಕ್ಯುಸೆಕ್ ನೀರನ್ನು ಹರಿಸುತ್ತಿರುವ ಹಿನ್ನೆಲೆಯಲ್ಲಿ ನಂಜನಗೂಡಿನಲ್ಲಿ ಕಪಿಲಾ ನದಿ ಮೈದುಂಬಿ ಹರಿಯುತ್ತಿದ್ದು, ನದಿ ಪಾತ್ರದ ಜನರಿಗೆ ಪ್ರವಾಹದ ಭೀತಿ ಎದುರಾಗಿದೆ.

ಕೇರಳದ ವೈನಾಡಿನಲ್ಲಿ ಹೆಚ್ಚಿನ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಬಿನಿ ಜಲಾಶಯದಿಂದ ಕಪಿಲಾ ನದಿಗೆ 40 ಸಾವಿರ, ತಾರಕ ಜಲಾಶಯದಿಂದ 9 ಸಾವಿರ, ನುಗು ಜಲಾಶಯದಿಂದ 2 ಸಾವಿರ ಒಟ್ಟಾರೆ 51 ಸಾವಿರಕ್ಕೂ ಹೆಚ್ಚು ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದೆ. ಹೀಗಾಗಿ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಸ್ನಾನಘಟ್ಟ, ಹದಿನಾರು ಕಾಲು ಮಂಟಪ ಸಂಪೂರ್ಣವಾಗಿ ಮುಳುಗಡೆಯಾಗಿದ್ದು ಮುಡಿಕಟ್ಟೆಯ ಬಾಗಿಲಿನವರೆಗೂ ನೀರು ಚಾಚಿಕೊಂಡಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಇಲಾಖೆಯಿಂದ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಭಕ್ತರು ನದಿಯ ಸ್ನಾನಘಟ್ಟಕ್ಕೆ ತೆರಳದಂತೆ ನಿಷೇಧ ಹೇರಲಾಗಿದೆ. ಹೀಗಾಗಿ ದೇವಾಲಯಕ್ಕೆ ಆಗಮಿಸಿದ ಭಕ್ತರಿಗೆ ದಾಸೋಹ ಭವನದ ಪಕ್ಕದಲ್ಲಿರುವ ಸ್ನಾನದ ಕೊಠಡಿಯಲ್ಲಿ ಸ್ನಾನ ಮಾಡಿ ದೇವಾಲಯಕ್ಕೆ ತೆರಳುವ ಸನ್ನಿವೇಶ ಎದುರಾಗಿತ್ತು.

ಅಲ್ಲದೇ ಕಪಿಲಾ ನದಿ ಉಪನದಿಯಾದ ಗುಂಡ್ಲು ನದಿಯ ಪ್ರವಾಹದಿಂದಾಗಿ ಸಮೀಪದ ಪರಶುರಾಮ ದೇವಾಲಯ ಸಂಪೂರ್ಣವಾಗಿ ನೀರಿನಲ್ಲಿ ಮುಳುಗಡೆಯಾಗಿದ್ದು, ಅಯ್ಯಪ್ಪ ಸ್ವಾಮಿ ದೇವಾಲಯ, ಚಾಮುಂಡೇಶ್ವರಿ ದೇವಾಲಯದ ಆವರಣಕ್ಕೆ ನೀರು ನುಗ್ಗಿದೆ. ನದಿಯಲ್ಲಿ ಇನ್ನೂ ನೀರು ಹೆಚ್ಚಾದಲ್ಲಿ ಶ್ರೀಕಂಠೇಶ್ವರ ದೇವಾಲಯದ ಆವರಣಕ್ಕೂ ನೀರು ನುಗ್ಗುವ ಭೀತಿ ಎದುರಾಗಿದೆ.

5 ಮನೆಗಳು ಜಲಾವೃತ: ಗುಂಡ್ಲು ನದಿ ಪ್ರವಾಹದಿಂದಾಗಿ ನಗರದ ಹಳ್ಳದ ಕೇರಿಯ 5 ಮನೆಗಳು ಸಂಪೂರ್ಣವಾಗಿ ಜಲಾವೃತಗೊಂಡಿದೆ. ಜೊತೆಗೆ ನಗರದ ತೋಪಿನ ಬೀದಿ, ಕುರುಬಗೇರಿ, ಒಕ್ಕಲಗೇರಿ, ಸರಸ್ವತಿ ಕಾಲೋನಿ, ರಾಜಾಜಿ ಕಾಲೋನಿ, ನಿವಾಸಿಗಳಿಗೆ ಪ್ರವಾಹದ ಭೀತಿ ಎದುರಾಗಿದ್ದು ನಿವಾಸಿಗಳು ಆತಂಕದಲ್ಲಿದ್ದಾರೆ.

ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಸುದ್ದಿಗಾರರೊಂದಿಗೆ ಮಾತನಾಡಿ, ಜನರು ಆತಂಕಗೊಳ್ಳಬೇಕಿಲ್ಲ. ತಾಲೂಕು ಆಡಳಿತ ಪ್ರವಾಹ ಪರಿಸ್ಥಿತಿಯನ್ನು ಎದುರಿಸಲು ಸಕಲ ರೀತಿಯಲ್ಲಿ ಸಜ್ಜಾಗಿದೆ. ನದಿಯ ನೀರಿನಲ್ಲಿ ಏರಿಕೆ ಕಂಡಲ್ಲಿ ಕಾಳಜಿ ಕೇಂದ್ರಗಳನ್ನು ತೆರೆಯಲಾಗುವುದು. ಅಲ್ಲದೆ ನದಿ ಪಾತ್ರದಲ್ಲಿ ವಾಸಿಸುವ ಜನರು ಸುರಕ್ಷಿತ ಸ್ಥಳಗಳಿಗೆ ತೆರಳಿ ಎಚ್ಚರಿಕೆ ವಹಿಸಬೇಕು ಎಂದು ಮನವಿ ಮಾಡಿದರು.

ಮಹಾದ್ವಾರ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ



ಮಹಾದ್ವಾರ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು.

ಹುಣಸೂರು, ಜು.27– ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರು ತಮ್ಮ ತಾಯಿ ರತ್ನ ಪ್ರೇಮಕುಮಾರ್ ಅವರ ಹೆಸರಿನಲ್ಲಿ ತಾಲೂಕಿನ ಮಾದಹಳ್ಳಿ ಮಠದ ಮಹಾದ್ವಾರ ನಿರ್ಮಾಣ ಕಾಮಗಾರಿಗೆ ವೀರಶೈವ ಸಮಾಜದ ಮುಖಂಡರೊಂದಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಈ ವೇಳೆ ಮಾಜಿ ಶಾಸಕರ ತಾಯಿ ರತ್ನ ಪ್ರೇಮಕುಮಾರ್, ಮಠದ ಪೀಠಾಧ್ಯಕ್ಷ ಶ್ರೀಸಾಂಬ ಸದಾಶಿವ ಸ್ವಾಮೀಜಿ, ತಹಸೀಲ್ದಾರ್ ಜೆ.ಮಂಜುನಾಥ್, ಜಿಪಂ ಮಾಜಿ ಉಪಾಧ್ಯಕ್ಷೆ ಗೌರಮ್ಮ, ಮುಖಂಡರಾದ ಸೋಮಶೇಖರ್, ಬಸವರಾಜ್, ಡಾ.ವೃಷಭೇಂದ್ರಸ್ವಾಮಿ, ರಮೇಶ್ ಕುಮಾರ್, ರಮೇಶ್, ನಾಗರಾಜಪ್ಪ ಸೇರಿದಂತೆ ಇತರರಿದ್ದರು.

ಸೋಸಲೆಯಲ್ಲಿ ಜಾನಪದ ಗೀತ ಗಾಯನ ಮೇಳೈಸಲಿದೆ

ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಎನ್.ಜವರಯ್ಯ



ಸೋಸಲೆಯಲ್ಲಿ ಸ್ನೇಹ ಕಲಾತಂಡದ ಕಚೇರಿ ಉದ್ಘಾಟಿಸಲಾಯಿತು.

ತಿ.ನರಸೀಪುರ, ಜು.27– ಸಾಹಿತ್ಯ ಮತ್ತು ಜಾನಪದ ಕಲೆಗಳ ತವರೂರು ತಾಲೂಕಿನ ಸೋಸಲೆ ಗ್ರಾಮದಲ್ಲಿ ಇನ್ಮುಂದೆ ಗೀತಗಾಯನ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಕಲರವ ಕೇಳಲಿದೆ ಎಂದು ಸ್ನೇಹ ಕಲಾ ತಂಡದ ಕಾರ್ಯಾಧ್ಯಕ್ಷ ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಎನ್.ಜವರಯ್ಯ ತಿಳಿಸಿದರು.

ತಾಲೂಕಿನ ಸೋಸಲೆ ಗ್ರಾಮದ ಶ್ರೀಹೊನ್ನಾದೇವಿ ದೇವಾಲಯ ಆವರಣದಲ್ಲಿ ಭಾನುವಾರ ಸ್ನೇಹ ಕಲಾ ತಂಡದ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಹಿತ್ಯ, ಕಲೆ, ಧಾರ್ಮಿಕತೆ ಐತಿಹಾಸಿಕ ಹಿನ್ನೆಲೆ ಇರುವ ಗ್ರಾಮದಲ್ಲಿ ಹಿರಿಯರು ಮತ್ತು ಕಿರಿಯರ ಕಲಾ ಸಂಗಮವಾಗಲಿದೆ. ಜಾನಪದ ಗೀತ ಗಾಯನ ಮೇಳೈಸಲಿದೆ. ಗ್ರಾಮದಲ್ಲಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ನಿರಂತರವಾಗಿ ಆಯೋಜಿಸಲು ಪದಾಧಿಕಾರಿಗಳೊಂದಿಗೆ ಕಾರ್ಯ ನಿರ್ವಹಿಸುತ್ತೇನೆ ಎಂದರು.

ಅಧ್ಯಕ್ಷ ಎಂ.ನಾಗರಾಜು ಮಾತನಾಡಿ, ಕಲಾವಿದರ ಬಳಗ ಒಗ್ಗೂಡಿಸಬೇಕು. ಅವರಿಗೊಂದು ವೇದಿಕೆ ಕಲ್ಪಿಸಿ ಪ್ರತಿಭೆಗೆ ನೀರೆರೆಯಬೇಕೆಂಬ ಉದ್ದೇಶದಿಂದ ಸ್ನೇಹ ಬಳಗ ಕಲಾತಂಡ ಕಟ್ಟಿಕೊಂಡಿದ್ದೇವೆ. ಕಚೇರಿಯನ್ನು ವಿಧ್ಯುಕ್ತವಾಗಿ ಆರಂಭಿಸಿದ್ದೇವೆ. ಗ್ರಾಮಕ್ಕೆ, ಗ್ರಾಮದ ಯುವಕರಿಗೆ ಸ್ನೇಹ ಕಲಾ ತಂಡ ಬಳುವಳಿಯಾಗಲಿದೆ ಎಂದರು.

ಶ್ರೀಹೊನ್ನಾದೇವಿ ಅಮ್ಮನವರ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಿ, ಭಕ್ತಿಗೀತೆ ಗಾಯನದ ಮೂಲಕ ಕಚೇರಿ ಉದ್ಘಾಟಿಸಲಾಯಿತು. ಅರ್ಚಕ ಆರ್.ಮಹದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ, ಪಿಎಸಿಎಸ್ ನಿರ್ದೇಶಕ ಎಸ್. ನಂಜುಂಡಯ್ಯ, ಕಲಾ ತಂಡದ ಗೌರವಾಧ್ಯಕ್ಷ ಬೇಕರಿ ಸೋಮಣ್ಣ, ಪ್ರಧಾನ ಕಾರ್ಯದರ್ಶಿ ಎ.ನಾಗರಾಜು, ಉಪಾಧ್ಯಕ್ಷ ಎಸ್.ಸಿದ್ದರಾಜು, ಸಂಚಾಲಕ ಎನ್.ಎಂ.ದಿನೇಶ್, ಖಜಾಂಚಿ ಎಸ್.ಎಂ.ಚಿನ್ನಸ್ವಾಮಿ, ಪದಾಧಿಕಾರಿಗಳಾದ ಹೆಚ್.ಸತೀಶ್ ಕುಮಾರ್, ತುಳಸೀರಾಮ್, ಯಜಮಾನರಾದ ಮಹದೇವಸ್ವಾಮಿ, ಪುಟ್ಟರಾಜು, ಯೋಗನರ ಸಿಂಹಮೂರ್ತಿ, ಮಾ.ಮಹದೇವಸ್ವಾಮಿ, ನಾಗೇಂದ್ರ, ದೊಡ್ಡಪುರ ಲಕ್ಷ್ಮಣ್ ಹಾಗೂ ಇತರರಿದ್ದರು.

ತಿ.ನರಸೀಪುರದಲ್ಲಿ ರಾಕೇಶ್ ಸಿದ್ದರಾಮಯ್ಯ ಪುಣ್ಯಸ್ಮರಣೆ



ತಿ.ನರಸೀಪುರದಲ್ಲಿ ರಾಕೇಶ್ ಸಿದ್ದರಾಮಯ್ಯ ಪುಣ್ಯಸ್ಮರಣೆ ನಡೆಯಿತು.

ತಿ.ನರಸೀಪುರ, ಜು.27– ಪಟ್ಟಣದ ಗೋಪಾಲಪುರದ 1ನೇ ವಾರ್ಡ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ ರಾಕೇಶ್ ಸಿದ್ದರಾಮಯ್ಯನವರ 9ನೇ ವರ್ಷದ ಪುಣ್ಯಸ್ಮರಣೆ ನಡೆಯಿತು.

ರಾಕೇಶ್ ಭಾವಚಿತ್ರಕ್ಕೆ ಮುಖಂಡರು ಪುಷ್ಪಾರ್ಚನೆ ಮಾಡಿ, ಸಾರ್ವಜನಿಕರಿಗೆ ಹಾಲು, ಸಿಹಿ ಹಂಚಿ ಅವರ ಆದರ್ಶ, ನಾಯಕತ್ವ ಗುಣಗಳನ್ನು ಸ್ಮರಿಸಿ ಹೃದಯಪೂರ್ವಕ ನಮನ ಸಲ್ಲಿಸಿದರು.

ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾರ್ಯದರ್ಶಿ ಮಹೇಶ್ ಮಾತನಾಡಿ, ರಾಕೇಶ್ ಅವರು ತಮ್ಮ ತಂದೆಯಂತೆ ನೇರ ದಿಟ್ಟ ನಡೆ ನುಡಿ ಹೊಂದಿದ್ದ ವ್ಯಕ್ತಿ. ಅವರು ನಿಧನರಾಗಿ 9 ವರ್ಷ ಕಳೆದರೂ ಅವರ ನೆನಪು ನಮ್ಮನ್ನು ಈಗಲೂ ಕಾಡುತ್ತಿದೆ ಎಂದರು.

ರಾಕೇಶ್ ಅವರಿಗೆ ತಾವು ಪ್ರಭಾವಿ, ಪ್ರಬಲ ನಾಯಕ ಸಿದ್ದರಾಮಯ್ಯನವರ ಪುತ್ರ ಎಂಬ ಹಮ್ಮು–ಬಿಮ್ಮು ಇರಲಿಲ್ಲ. ಸದಾ ಬಡವರು, ದೀನ ದಲಿತರ ನೋವು–ನಲಿವುಗಳಿಗೆ ಸ್ಪಂದಿಸುತ್ತಿದ್ದರು. ತಮ್ಮ ಮನೆ ಬಾಗಿಲಿಗೆ ಬಂದವರ ಸಮಸ್ಯೆ ಆಲಿಸಿ ಕೆಲಸ ಕಾರ್ಯಗಳನ್ನು ಮಾಡಿಕೊಡುತ್ತಿದ್ದರು ಎಂದರು.

ಬಡ ಮಕ್ಕಳ ವಿದ್ಯಾಭ್ಯಾಸ, ಮದುವೆ, ಆರೋಗ್ಯ ಸೇರಿದಂತೆ ಯಾವುದೇ ಸಮಸ್ಯೆಗಳನ್ನು ಹೊತ್ತು ತರುತ್ತಿದ್ದವರಿಗೆ ಸ್ಪಂದಿಸಿ ತಮ್ಮ ಕೈಲಾದ ಆರ್ಥಿಕ ನೆರವು ನೀಡುತ್ತಿದ್ದನ್ನು ಎಂದೂ ಮರೆಯುವಂತಿಲ್ಲ. ಅವರು ಇನ್ನಷ್ಟು ಕಾಲ ನಮ್ಮ ನಡುವೆ ಇರಬೇಕಾಗಿತ್ತು ಎಂದರು.

ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾರ್ಯದರ್ಶಿ ಎನ್.ಲಕ್ಷ್ಮಣ್, ಪುರಸಭೆ ಮಾಜಿ ಸದಸ್ಯರಾದ ಶ್ರೀನಿವಾಸ್, ಸಿ.ಮಹದೇವ್, ಶಿವಕುಮಾರ್, ಮಹದೇವ್, ಪುಟ್ಟಮ್ಮ, ಮೀನಾಕ್ಷಿ, ರವಿ ಕುಮಾರ್, ಯುವ ಮುಖಂಡರು ಹಾಜರಿದ್ದರು.

ನಿರಂತರ ಮಳೆಗೆ ಮನೆಗಳು ಕುಸಿತ



ಮಳೆಯಿಂದ ಮನೆಗಳು ಕುಸಿದಿರುವುದು.

ಹುಣಸೂರು, ಜು.27– ತಾಲೂಕಿನಾದ್ಯಂತ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ನಗರದ ಸರಸ್ವತಿಪುರನಲ್ಲಿ ಮನೆಗಳು ಕುಸಿದು ಬಿದ್ದಿವೆ.

ಸರಸ್ವತಿಪುರಂನ ಕಲ್ಪನಾ ಶ್ರೀನಿವಾಸ್, ಮೀನಾಕ್ಷಿ ಗೌರೇಶ್, ಸಣ್ಣಮ್ಮ ನಾಗರಾಜು, ಪ್ರಭಾಕರ್ ಅವರ ಮನೆಗಳು ಕುಸಿದು ಬಿದ್ದಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಹಾನಿಗೊಂಡ ಪ್ರದೇಶಕ್ಕೆ ನಗರಸಭಾ ಸದಸ್ಯೆ ಸೌರಭ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಬಿ.ಜೆ.ಚಿದಾನಂದಗೆ ಪಿಎಚ್.ಡಿ ಪದವಿ



ಮೈಸೂರು: ಡಾ.ಎನ್.ರವಿ ಕುಮಾರ್ ಅವರ ಮಾರ್ಗದರ್ಶನದಲ್ಲಿ ಬಿ.ಜೆ. ಚಿದಾನಂದ ಅವರು ಗಣಿತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಆ.4ಕ್ಕೆ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ



ಪ್ರವಾಸಿ ಮಂದಿರದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಯಿತು.

ಸರಗೂರು, ಜು.27– ಸದಾ ಸಮಾಜದ ಏಳಿಗೆಗಾಗಿ ದುಡಿಯುತ್ತಿರುವ ಆದಿ ಕರ್ನಾಟಕ ಮಹಾಸಭಾ ಸರಗೂರು ತಾಲೂಕು ಘಟಕದಿಂದ ಆ.4ರಂದು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಶಿವಣ್ಣ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ವರ್ಷದಂತೆ ಈ ಸಾಲಿನಲ್ಲಿಯೂ ಪ್ರತಿಭಾವಂತ ಮಕ್ಕಳನ್ನು ಪ್ರೋತ್ಸಾಹಿಸಿ, ಅವರ ಉನ್ನತ ವಿದ್ಯಾಭ್ಯಾಸಕ್ಕೆ ನೆರವಾಗಲೆಂದು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ರಮೇಶ್ 9480474048, ಮಹೇಶ್ 9880821541, ಸಣ್ಣಸ್ವಾಮಿ 9686336866 ಅವರನ್ನು ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ಜು.31 ಕೊನೆ ದಿನ ಎಂದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ನಡೆಯಲಿದ್ದು, ಶಾಸಕ ಅನಿಲ್ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಸಂಸದ ಸುನೀಲ್ ಬೋಸ್, ಶಾಸಕ ದರ್ಶನ್ ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿವರು ಎಂದರು.

ಸಭೆಯಲ್ಲಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಚಲುವರಾಜು, ತಾಲೂಕು ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ನಾಗರಾಜು, ಸಣ್ಣಸ್ವಾಮಿ, ಮಹಾಸಭಾ ಪ್ರಧಾನ ಕಾರ್ಯದರ್ಶಿ ಮಲ್ಲೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಮನುಗನಹಳ್ಳಿ ಗ್ರಾಪಂ ಉಪಾಧ್ಯಕ್ಷ ರಮೇಶ್, ಮಹೇಶ್, ಬಿಲ್ಲಯ್ಯ, ಭೀಮಯ್ಯ ಹಾಜರಿದ್ದರು.

ಚುಂಚನಕಟ್ಟೆಯಲ್ಲಿ ಗುರುವಂದನಾ, ಸ್ನೇಹ ಬಂಧನ ಕಾರ್ಯಕ್ರಮ



ಕಾರ್ಯಕ್ರಮದಲ್ಲಿ ಯುಪಿಎಸ್ಸಿ ಸಾಧಕಿ ಪ್ರೀತಿ ಅವರನ್ನು ಸನ್ಮಾನಿಸಲಾಯಿತು.

ಚುಂಚನಕಟ್ಟೆ, ಜು.27– ಕಳೆದ 72 ವರ್ಷಗಳಿಂದ ಶಿಕ್ಷಣ ನೀಡಿದ ಚುಂಚನಕಟ್ಟೆ ಸರ್ಕಾರಿ ಪ್ರೌಢಶಾಲೆಯಿಂದ ಸಾವಿರಾರು ಮಂದಿ ಸರ್ಕಾರಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಸರ್ಕಾರಿ ಪ್ರೌಢಶಾಲೆ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಆಯೋಜಿಸಿದ್ದ ಗುರುವಂದನಾ ಮತ್ತು ಸ್ನೇಹ ಬಂಧನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಯಲ್ಲಿ ಓದಿದವರು ಉನ್ನತ ಸ್ಥಾನ ಪಡೆಯಲು ಸಾಧ್ಯವೆ ಎಂಬ ಪ್ರಶ್ನೆಗೆ ಐಎಎಸ್ ಅಧಿಕಾರಿ ದಯಾನಂದ್ ಮತ್ತು ಯುಪಿಎಸ್‌ಸಿ ಸಾಧಕಿ ಎ.ಸಿ.ಪ್ರೀತಿ ಅವರ ಸಾಧನೆ ನೋಡಿದಾಗ ಉತ್ತರ ಸಿಗಲಿದೆ ಎಂದ ಅವರು ಸರ್ಕಾರಿ ಶಾಲೆಗಳಿಂದಲೇ ಇಂದು ಗ್ರಾಮಾಂತರ ಪ್ರದೇಶದವರಿಗೆ ಉತ್ತಮ ಶಿಕ್ಷಣ ದೊರೆಯಲು ಸಾಧ್ಯವಾಗಿದೆ ಎಂದರು.

ಈ ಶಾಲೆಯಲ್ಲಿ ಓದಿದವರನ್ನು ಒಂದೆಡೆ ಸೇರಿಸುವ ದೃಷ್ಟಿಯಿಂದ ಹಳೆಯ ವಿದ್ಯಾರ್ಥಿಗಳ ಸಂಘದವರು ಈ ಕಾರ್ಯಕ್ರಮ ಆಯೋಜಿಸುವ ಮೂಲಕ ಸಾಧಕರನ್ನು ಗೌರವಿಸುವ ಕೆಲಸ ಮಾಡುತ್ತಿದ್ದು, ಇಂತಹ ಕೆಲಸ ನಿರಂತವಾಗಿ ನಡೆಯಲಿ. ಇದಕ್ಕೆ ತಮ್ಮ ಸಂಪೂರ್ಣವಾಗಿ ಸಹಕಾರ ಇರುತ್ತದೆ ಎಂದರು.

ಸನ್ಮಾನ ಸ್ವೀಕರಿಸಿ ಯುಪಿಎಸ್‌ಸಿ ಸಾಧಕಿ ಅಂಕನಹಳ್ಳಿ ಸಿ.ಪ್ರೀತಿ ಮಾತನಾಡಿ, ನನ್ನ ಸಾಧನೆಗೆ ಪೋಷಕರು, ಶಿಕ್ಷಕರ ಮಾರ್ಗದರ್ಶನವೇ ಕಾರಣವಾಗಿದ್ದು, ವಿದ್ಯಾರ್ಥಿಗಳು ಸಾಧನೆಯ ಗುರಿ ಇಟ್ಟುಕೊಂಡು ಬೆನ್ನತ್ತಿದಾಗ ಮಾತ್ರ ಯಶಸ್ಸು ಗಳಿಸಲು ಸಾಧ್ಯ ಎಂದರು.

ಈ ವೇಳೆ ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ಚಂದ್ರಶೇಖರಯ್ಯ, ನಿವೃತ್ತ ರಿಜಿಸ್ಟ್ರಾರ್ ಎಂ.ಬಿ.ಶ್ರೀನಿವಾಸ್, ಬೆಂಗಳೂರು ಭಾಷಾಂತರ ಸಹ ನಿರ್ದೇಶಕ ಕೆ.ಎ.ಗುರುರಾಜ್, ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಮ್, ನಿರ್ದೇಶಕ ಕೆ.ಬಿ.ಪ್ರಕಾಶ್, ನಿವೃತ್ತ ಶಿಕ್ಷಕರಾದ ಹೆಚ್.ಎಸ್.ನಾಗೇಂದ್ರ, ರಾಮೇಗೌಡ, ಲಕ್ಷ್ಮಣ್ ಮತ್ತು ಸಾಧಕ ವಿದ್ಯಾರ್ಥಿಗಳು ಸೇರಿದಂತೆ ಮತ್ತಿತರರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ಪರ್ವದ ಗೌರವಾಧ್ಯಕ್ಷ ಜೆ.ಎಂ.ಕುಮಾರ್, ಬಿಇಓ ರವಿಪ್ರಸನ್ನ, ಕುಪ್ಪೆ ಗ್ರಾಪಂ ಅಧ್ಯಕ್ಷೆ ಶಾರದಮ್ಮ, ಮಾಜಿ ಅಧ್ಯಕ್ಷರಾದ ಗೌರಮ್ಮ ಮಂಜುನಾಥ್, ಜೆಡಿಎಸ್ ರೈತ ಘಟಕದ ಅಧ್ಯಕ್ಷ ಜೆ.ಪಿ.ಮಂಜು, ಕೆ.ಹೆಚ್. ಜಯರಾಮೇ ಗೌಡ, ಉಪಾಧ್ಯಕ್ಷ ಎಸ್.ಎಸ್.ಶಿವಸ್ವಾಮಿ, ಪ್ರಧಾನ ಕಾರ್ಯದರ್ಶಿ ರಾಮಕೃಷ್ಣೇಗೌಡ, ಸಂಚಾಲಕ ಟಿ.ಧರ್ಮಪಾಲ, ಸಂಘಟನಾ ಕಾರ್ಯದರ್ಶಿ ವೈ.ಎ.ಮಹದೇವ್, ಖಜಾಂಚಿ ಕೆಂಪರಾಜು, ಪರುಶುರಾಮ್, ಪುರುಷೋತ್ತಮ್, ವಿಜಯಕುಮಾರ್, ಹಳೆಯ ವಿದ್ಯಾರ್ಥಿಗಳಾದ ಪೊಲೀಸ್ ರಾಚಯ್ಯ, ಲೋಕೇಶ್, ವಿಲ್ ದಿವಾಕರ್, ಪಂಜು, ಭಾಗ್ಯಮ್ಮ, ಆನಂದ್, ಶ್ರೀನಿವಾಸ್, ಶೈಲಜಾ, ಅನಿತಾ, ರೇಣುಕಾ, ಜಯಶ್ರೀ, ಹೇಮ, ಸವಿತಾ, ಸೌಮ್ಯ, ವಿಶ್ವನಾಥ್, ಮಂಜು, ಶಿವಮೂರ್ತಿ, ಬಾಲರಾಜ್, ಭೈರನಾಯಕ, ಬಾಬು, ಮಧು, ಸ್ವಾಮಿಗೌಡ, ಗೀತಾ, ಹೇಮಾವತಿ, ಹೇಮಣ್ಣ, ಸಿ.ಟಿ.ಸ್ವಾಮಿ, ಬಿಜಿಎಸ್ ಮುಖ್ಯ ಶಿಕ್ಷಕಿ ಚಾಂದಿನಿ, ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ರಘು ಸೇರಿದಂತೆ ಮತ್ತಿತರದ್ದರು.

ಪ್ರೇಮ ನಿಧನ

ತಿ.ನರಸೀಪುರ, ಜು.27– ತಾಲೂಕಿನ ಹೊಸ ತಿರುಮಕೂಡಲಿನ ನಿವಾಸಿ ಪ್ರೇಮ(65) ಭಾನುವಾರ ನಿಧನರಾದರು. ಪತಿ, ವರುಣ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡ, ಕಸಬಾ ಸೊಸೈಟಿ ಮಾಜಿ ಕಾರ್ಯದರ್ಶಿ ಜಯರಾಮು, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಕ್ಕಳಿಗೆ ವಚನ ಸಾಹಿತ್ಯ ಹೇಳಿಕೊಡುವ ಮೂಲಕ ಸನ್ಮಾರ್ಗದಲ್ಲಿ ಸಾಗಲು ಪ್ರೇರಣೆ ನೀಡಬೇಕು

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಸಲಹೆ



ಮೈಸೂರಿನ ಕಲಾಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪದ್ಮಶ್ರೀ ಪುರಸ್ಕೃತರಾದ ಡಾ.ವಿಜಯಲಕ್ಷ್ಮೀ ದೇಶಮಾನೆ ಅವರಿಗೆ 'ಕದಳಿಶ್ರೀ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಮೈಸೂರು,ಜು.27(ಎಂಟಿವೈ)– ಪೋಷಕರು ತಮ್ಮ ಮಕ್ಕಳಿಗೆ ವಚನ ಸಾಹಿತ್ಯವನ್ನು ಹೇಳಿಕೊಡುವ ಮೂಲಕ ಸನ್ಮಾರ್ಗದಲ್ಲಿ ಸಾಗಲು ಪ್ರೇರಣೆ ನೀಡಬೇಕು ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಹಾಗೂ ಜಿಲ್ಲಾ ಘಟಕ, ಕದಳಿ ಮಹಿಳಾ ವೇದಿಕೆ ವತಿಯಿಂದ ಭಾನುವಾರ ಆಯೋಜಿಸಿದ್ದ 'ಕದಳಿ ಶ್ರೀ' ಪ್ರಶಸ್ತಿ ಪ್ರದಾನ ಮತ್ತು ರಜತ ಮಹೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ನಮ್ಮ ಸುತ್ತಮುತ್ತಲಿನ ಪರಿಸರದಲ್ಲೇ ಹಲವಾರು ಅಧರ್ಮಿಯ, ಅನೈತಿಕತೆಯ ಕೃತ್ಯಗಳು ನಡೆಯುತ್ತಿವೆ. ತಾಯಿಯನ್ನು ಮಗನೇ ಕೊಲೆ ಮಾಡುವುದು, ಪ್ರಿಯಕರನ ಸಹವಾಸದಿಂದಾಗಿ ಕಟ್ಟಿಕೊಂಡ ಗಂಡನಿಗೆ ವಿಷ ಹಾಕಿ ಕೊಲೆ ಮಾಡುವ, ಪೋಷಕರೇ ಮಕ್ಕಳನ್ನು ಹತ್ಯೆ ಮಾಡುವುದು ಸೇರಿದಂತೆ ಇನ್ನಿತರ ಕೃತ್ಯಗಳು ನಡೆಯುತ್ತಿರುವುದನ್ನು ನಾವು ಮಾಧ್ಯಮಗಳ ಮೂಲಕ ನೋಡುವಂತಾಗಿದೆ. ಇದನ್ನು ಗಮನಿಸಿದರೆ ಪ್ರಪಂಚ ಯಾವ ಕಡೆ ಸಾಗುತ್ತಿದೆ ಎನ್ನುವ ಆತಂಕ ಉಂಟಾಗುತ್ತಿದೆ. ಆದ್ದರಿಂದ ಪೋಷಕರು ಮಕ್ಕಳಿಗೆ ವಚನ ಸಾಹಿತ್ಯವನ್ನು ಹೇಳಿಕೊಡುವ ಮೂಲಕ ಅವರಿಗೆ ಜೀವನ ಮೌಲ್ಯವನ್ನು ಕಲಿಸಬೇಕು ಎಂದರು.

ಶರಣರ ಆದರ್ಶ, ವಚನಗಳಲ್ಲಿರುವ ಮೌಲ್ಯಗಳನ್ನು ಹಿರಿಯ ನಾಗರಿಕರು ಕಲಿತು ಅದನ್ನು ತಮ್ಮಲ್ಲೆ ಇಟ್ಟುಕೊಂಡರೆ ಯಾವುದೇ ಪ್ರಯೋಜನವಾಗುವುದಿಲ್ಲ. ಬದಲಾಗಿ ತಾವು ಕಲಿತಿರುವ ಸಂಸ್ಕಾರವನ್ನು ಮಕ್ಕಳಿಗೆ ಕಲಿಸಿಕೊಡಬೇಕು. ಇದರಿಂದ ಮಕ್ಕಳು ಜೀವನದಲ್ಲಿ ಸಂಸ್ಕಾರ ಕಲಿತು, ಧರ್ಮ ಮಾರ್ಗವನ್ನು ಅನುಸರಿಸುತ್ತಾರೆ. ಅವರ ಭವಿಷ್ಯವೂ ಚೆನ್ನಾಗಿರುತ್ತದೆ. ವಚನಗಳ ಮೌಲ್ಯವನ್ನು ಮುಂದಿನ ಪೀಳಿಗೆಗೂ ತಲುಪಿಸಿದಂತೆ ಆಗುತ್ತದೆ ಎಂದು ಅಭಿಪ್ರಾಯಪಟ್ಟರು.

12ನೇ ಶತಮಾನದಲ್ಲಿ ಅಕ್ಕ ಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಶರಣ ಸತ್ಯಕ್ಕ ಮುಂತಾದವರು ಜೀವನದ ಸಾರವನ್ನು ಕುರಿತು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಆಸೆ, ಅಹಂಕಾರ, ಗರ್ವ, ಭಯ ಇವುಗಳ ಬಗ್ಗೆ ವಚನಗಳ ಮೂಲಕ ತಿಳಿ ಹೇಳಿದ್ದಾರೆ. ತನ್ಮೂಲಕ ಪುರುಷರಿಗೆ ಮಾರ್ಗದರ್ಶನ ಕೂಡ ಮಾಡಿದ್ದಾರೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮಕ್ಕೆ ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್ ಚಾಲನೆ ನೀಡಿ ಮಾತನಾಡಿ, ಸಂಘ–ಸಂಸ್ಥೆಗಳ ಮೂಲಕ ಅಕ್ಕ ಮಹಾದೇವಿ ಸೇರಿದಂತೆ ಶರಣರ ಸ್ಮರಣೆ ಮಾಡಿದರೆ ಸಾಲದು. ಅವರ ಆದರ್ಶ–ಜೀವನ ತತ್ವಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಅಕ್ಕ ಹುಟ್ಟಿದ ಸ್ಥಳವಾದ ಉಡುತಡಿಯನ್ನು ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲಾಗಿದೆ. ಆ ಕ್ಷೇತ್ರವನ್ನು ಅಂತಾರಾಷ್ಟ್ರೀಯ ಮಟ್ಟದ ಪ್ರವಾಸಿ ತಾಣವನ್ನಾಗಿ ರೂಪಿಸುವ ಆಲೋಚನೆ ಇದೆ. ಗೋಮಾಳದಂತೆ ಇದ್ದ ಜಾಗವನ್ನು ಪ್ರಸ್ತುತ ಒಂದು ರೂಪಕ್ಕೆ ತರಲಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

'ವೈರಾಗ್ಯ ನಿಧಿ–ಜಗದ ಸೋಜಿಗ' ಕೃತಿಯನ್ನು ಲೋಕಾರ್ಪಣೆ ಮಾಡಿದ ನಾಡೋಜ ಗೊ.ರು.ಚನ್ನಬಸಪ್ಪ ಮಾತನಾಡಿ, ಆದರೆ ಎನ್ನುವುದು ಹೋದರೆ ಜೀವನ ಸುಂದರವಾಗಿರುತ್ತದೆ. ಬದುಕಿನಲ್ಲಿ ಭ್ರಷ್ಟಾಚಾರ, ಕಪಟ, ಗರ್ವ, ಲಂಪಟತನ ಮುಂತಾದ ಅನೈತಿಕ ಅಂಶಗಳಿಗೆ ಜಾಗ ನೀಡದೇ ಉತ್ತಮ ಅಂಶಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಪದ್ಮಶ್ರೀ ಪುರಸ್ಕೃತರಾದ ಡಾ.ವಿಜಯಲಕ್ಷ್ಮೀ ದೇಶಮಾನೆ ಅವರಿಗೆ 'ಕದಳಿಶ್ರೀ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆನಂದಪುರ ಶ್ರೀ ಬೆಕ್ಕಿನ ಕಲ್ಮಠದ ಡಾ.ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಸ್ವಾಮೀಜಿ ವಹಿಸಿದ್ದರು. ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಕಾರ್ಯದರ್ಶಿ ವಾಗ್ದೇವಿ, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಜಿಲ್ಲಾ ಘಟಕದ ಅಧ್ಯಕ್ಷ ಡಾ. ಹೆಳವರ ಹುಂಡಿ ಸಿದ್ದಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾರ್ಪೋರೇಟ್ ಕಂಪನಿಗಳಿಗೆ ರೆಡ್ ಕಾರ್ಪೆಟ್ ಹಾಸುವ ಸರ್ಕಾರಗಳು ಬಡವರ ಬದುಕಿಗೆ ಬರೆ ಎಳೆಯುತ್ತಿವೆ

ಸಿಪಿಐ (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಸವರಾಜ್ ಆರೋಪ



ಮೈಸೂರಿನ ಗಾಂಧಿ ವೃತ್ತದಲ್ಲಿ ಭಾನುವಾರ ನಡೆದ ಸಿಪಿಐ (ಎಂ) ರಾಜಕೀಯ ಪ್ರಚಾರಾಂದೋಲನದಲ್ಲಿ ಸಿಪಿಐ (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಯು.ಬಸವರಾಜ್ ಮಾತನಾಡಿದರು.

ಮೈಸೂರು, ಜು.27(ಬಿಎಲ್‌ಯು)– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾರ್ಪೋರೇಟ್ ಕಂಪನಿಗಳಿಗೆ ರೆಡ್ ಕಾರ್ಪೆಟ್ ಹಾಸಿದ್ದು, ಬಡವರ ಬದುಕಿಗೆ ಬರೆ ಎಳೆಯುತ್ತಿವೆ ಎಂದು ಸಿಪಿಐ (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಯು.ಬಸವರಾಜ್ ಆಪಾದಿಸಿದ್ದಾರೆ.


ಮೈಸೂರಿನ ಗಾಂಧಿ ವೃತ್ತದಲ್ಲಿ ಇಂದು ನಡೆದ ರಾಜಕೀಯ ಪ್ರಚಾರಾಂದೋಲನ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಜನರು ವಾರ್ಷಿಕವಾಗಿ ಕೇಂದ್ರ ಸರ್ಕಾರಕ್ಕೆ 50 ಲಕ್ಷ ಕೋಟಿ ತೆರಿಗೆ ನೀಡುತ್ತಿದ್ದಾರೆ. ರಾಜ್ಯ ಸರ್ಕಾರಕ್ಕೆ 3 ರಿಂದ 4 ಲಕ್ಷಕೋಟಿ ತೆರಿಗೆ ಪಾವತಿ ಮಾಡುತ್ತಿದ್ದಾರೆ. ಆದರೆ, ಈ ಹಣವನ್ನು ಸಮಾಜದ ತಳ ಸಮುದಾಯದ ಶ್ರೇಯೋಭಿವೃದ್ಧಿಗೆ ವಿನಿಯೋಗಿಸದೆ ಕಾರ್ಪೋರೇಟ್ ಕಂಪನಿಗಳ ಹಿತಕ್ಕೆ ನೀಡುತ್ತಿದೆ ಎಂದು ಟೀಕಿಸಿದರು.

ರೈತರು ಹಾಗೂ ಕಾರ್ಮಿಕರನ್ನು ಕಡೆಗಣಿಸುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರ ಬಡವರ ಪರವಾಗಿಲ್ಲದೆ, ಶ್ರೀಮಂತರ ಪರವಾಗಿದೆ. ದೇಶದಲ್ಲಿ ಪ್ರತಿ ದಿನ 10 ರಿಂದ 12 ಮಂದಿ ಹಸಿವಿನಿಂದ ಸಾಯುತ್ತಿದ್ದಾರೆ. ಈ ಹಿನ್ನೆಲೆ ಭಾರತದ ಹಸಿವಿನ ಸೂಚ್ಯಂಕ 105 ಸ್ಥಾನದಲ್ಲಿದೆ. ಶೇ.45 ರಷ್ಟು ಮಂದಿಗೆ ನಿರುದ್ಯೋಗ ಸಮಸ್ಯೆ ಕಾಡುತ್ತಿದೆ. ಇದರಿಂದ ಭಾರತ ಅದು ಹೇಗೆ ವಿಶ್ವದಲ್ಲಿ 3 ನೇ ಅತಿ ದೊಡ್ಡ ಆರ್ಥಿಕತೆಯ ರಾಷ್ಟ್ರವಾಗುತ್ತದೆ ಎಂದು ಬಸವರಾಜು ಪ್ರಶ್ನಿಸಿದರು. ದೇಶದ ಸುಮಾರು 70 ಕೋಟಿ ಜನರು ಪಡಿತರ ಆಹಾರ ಪಡೆಯುತ್ತಿದ್ದಾರೆ. ಅಂಗನವಾಡಿಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಆದರೂ ದೇಶದ ಕೆಲವರು ಹಸಿವಿನಿಂದ ಸಾಯುತ್ತಿರುವುದೇಕೆ ಎಂದು ಮರು ಪ್ರಶ್ನಿಸಿದ ಬಸವರಾಜು, ದೇಶದ ಶತಕೋಟಿ ಶ್ರೀಮಂತರ ಸಂಖ್ಯೆ ಹೆಚ್ಚಳವಾಗುತ್ತಿದೆ. ಇದರಿಂದ ಶೇ.80ರಷ್ಟಿರುವ ದೇಶದ ಸಂಪತ್ತು ಶೇ.10 ರಷ್ಟು ಜನರಲ್ಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ರಾಜ್ಯ ಸಮಿತಿ ಸದಸ್ಯೆ ಹೆಚ್.ಎಸ್.ಸುನಂದ, ಕೇಂದ್ರ ಸರ್ಕಾರ ಜನಪರ ಯೋಜನೆಗಳಿಗೆ ಹೆಚ್ಚು ಹಣವನ್ನು ನೀಡುವ ಬದಲು ವರ್ಷದಿಂದ ವರ್ಷಕ್ಕೆ ಕಡಿತಗೊಳಿಸುತ್ತಿದೆ. ಈ ವಿಚಾರವಾಗಿ ದೇಶದ ಜನರು ಆಕ್ರೋಶ ವ್ಯಕ್ತಪಡಿಸಿದಾಗ ಅವರ ಗಮನ ಬೇರೆಡೆ ಸೆಳೆಯಲು ಕೋಮು ಗಲಭೆ ಸೃಷ್ಟಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಕೇರಳದ ಮಾಜಿ ಮುಖ್ಯಮಂತ್ರಿ ಅಚ್ಯುತಾನಂದನ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಕೆ.ಬಸವರಾಜ್, ವಿಜಯಕುಮಾರ್, ಶಾಕುಂತಲಾ, ಮೊಹಬೂಬ್, ಲೀಲಾವತಿ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆರ್. ಮಧುಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ. ಪಿ. ಮಾದೇಶ್ ಅವರ ಮಾರ್ಗದರ್ಶನದಲ್ಲಿ ಆರ್. ಮಧು ಅವರು ಭೂ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಒಕ್ಕಲಿಗ ಆರಕ್ಷಕರ ಸೇವಾ ಟ್ರಸ್ಟ್ ವಾರ್ಷಿಕೋತ್ಸವ



ಮೈಸೂರಿನ ಜಯನಗರದಲ್ಲಿರುವ ನೇಗಿಲಯೋಗಿ ಮರುಳೇಶ್ವರ ಸೇವಾಭವನದಲ್ಲಿ ಭಾನುವಾರ ನಡೆದ ಒಕ್ಕಲಿಗ ಆರಕ್ಷಕರ ಸೇವಾ ಟ್ರಸ್ಟ್‌ನ ಮೊದಲ ವಾರ್ಷಿಕೋತ್ಸವ ಸಮಾರಂಭದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಅಭಿನಂದಿಸಲಾಯಿತು. ಇದೇ ವೇಳೆ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನೂ ಪುರಸ್ಕರಿಸಲಾಯಿತು. ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಜಾನಪದ ವಿದ್ವಾಂಸ ಪಿ.ಕೆ.ರಾಜಶೇಖರ್, ನಿವೃತ್ತ ಐಜಿಪಿ ಕೆ.ಟಿ.ಬಾಲಕೃಷ್ಣ, ವೈದ್ಯಸಾಹಿತಿ ಡಾ.ಲತಾ ರಾಜಶೇಖರ್, ವೈದ್ಯ ರಾಜಶೇಖರ್, ಮಂಗಳೂರು ಆಂತರಿಕ ಭದ್ರತಾ ಪಡೆಯ ಎಸ್ಪಿ ಡಾ.ಎ.ಎನ್.ಪ್ರಕಾಶ್‌ಗೌಡ, ನಿವೃತ್ತ ಪೊಲೀಸ್ ಅಧಿಕಾರಿಗಳಾದ ಬಿ.ಪಿ.ಸುರೇಶ್, ಶಂಕರೇಗೌಡ, ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್‌ನ ಅಧ್ಯಕ್ಷ ಡಿ.ರವಿಕುಮಾರ್, ಕರ್ನಾಟಕ ಕಾವಲು ಪಡೆಯ ಮೋಹನ್‌ಕುಮಾರ್‌ಗೌಡ ಮತ್ತಿತರರು ಭಾಗವಹಿಸಿದ್ದರು.

ಶಿಸ್ತು ಇಲ್ಲದೆಡೆ ಗೆಲುವು ಅಸಾಧ್ಯ

ಆರ್.ಎ.ಚೇತನ್‌ರಾಮ್ ಅಭಿಪ್ರಾಯ



'ಅವನೀ' ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಚಾರಿಟಬಲ್ ಟ್ರಸ್ಟ್ ಅನ್ನು ಅಂತಾರಾಷ್ಟ್ರೀಯ ವ್ಯಕ್ತಿತ್ವ ವಿಕಸನ ತರಬೇತುದಾರ ಆರ್.ಎ. ಚೇತನ್ ರಾಮ್ ಉದ್ಘಾಟಿಸಿದರು. ಈ ವೇಳೆ ಎಸ್.ಬಸವರಾಜು, ಸಂಗಮೇಶ್ ಹಿರೇಮಠ ಇತರರಿದ್ದರು.

ಮೈಸೂರು,ಜು.27(ಎಸ್‌ಪಿಎನ್)–ಎಲ್ಲಿ ಶಿಸ್ತು ಇಲ್ಲವೋ ಅಲ್ಲಿ ಗೆಲುವು ಇಲ್ಲ ಎಂದು ಅಂತಾರಾಷ್ಟ್ರೀಯ ವ್ಯಕ್ತಿತ್ವ ವಿಕಸನ ತರಬೇತುದಾರ ಆರ್.ಎ.ಚೇತನ್‌ರಾಮ್ ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದಲ್ಲಿನ ಇಎಂಆರ್‌ಸಿ ಸಭಾಂಗಣದಲ್ಲಿ ಚೈತನ್ಯ ಪಥ ಸಹಯೋಗದೊಂದಿಗೆ 'ಅವನೀ' ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಚಾರಿಟಬಲ್ ಟ್ರಸ್ಟ್ ಉದ್ಘಾಟಿಸಿ ಮಾತನಾಡಿದರು.

ಆರೇಳು ದಶಕಗಳ ಹಿಂದೆ ಅನ್ನದಾಸೋಹ ಮುಖ್ಯವಾಗಿತ್ತು. ಆದರೆ ಇಂದು ಜ್ಞಾನದಾಸೋಹ ಮುಖ್ಯವಾಗಿದೆ. ಅದಕ್ಕಾಗಿ ಸರಿಯಾದ ಕಲಿಕೆ ಮುಖ್ಯ. ಸರಿಯಾಗಿ ಕಲಿತರೆ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯಬಹುದು. ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಹುದು. ನಿರಂತರವಾಗಿ ಕೆಲಸ ಮಾಡಿದರೆ ಏನು ಬೇಕಾದರೂ ಆಗಬಹುದು. ಇದೆಲ್ಲದಕ್ಕೂ ಓದಿನ ಹಂತದಲ್ಲೇ ಶಿಸ್ತನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದ ಸಂಸ್ಥಾಪಕ ಎಸ್.ಬಸವರಾಜು ಮಾತನಾಡಿ, ನಿರುದ್ಯೋಗ ದೇಶದ ಪ್ರಗತಿಗೆ ತೊಡಕಾಗಿದೆ. ಪದವಿ ಮುಗಿದ ಬಳಿಕ ವಿದ್ಯಾರ್ಥಿಗಳು ಕೆಲಸಕ್ಕಾಗಿ ಅಲೆದಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ 625 ಅಂಕಗಳ ಜತೆ ಜತೆಗೆ 625 ಕೋಟಿ ರೂ. ಸಂಪಾದಿಸುವ ಅರ್ಹತೆಯನ್ನು ಬೆಳೆಸಿಕೊಳ್ಳಬೇಕು. ನಾವು ಯಾರೂ ಕೂಡ ಕೆಲಸಕ್ಕಾಗಿ ಪರದಾಡಬಾರದು. ನೂರಾರು ಜನರಿಗೆ ಕೆಲಸ ನೀಡುವಂತ ಉದ್ಯಮಿಗಳಾಗಿ ಬೆಳೆಯಬೇಕು. ಅದಕ್ಕಾಗಿ ಓದಿನ ಹಂತದಲ್ಲೇ ಇದಕ್ಕೆ ಬೇಕಾದ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಮಾರ್ಗದರ್ಶನ ಮಾಡಿದರು.

ಉಚಿತ ವಸತಿ ನಿಲಯ: ನಾವು ಬದಲಾಗದೆ ಇದ್ದರೆ ಯಾವ ದೇವರು ಬಂದರೂ ಕೂಡ ನಮ್ಮನ್ನು ಉದ್ಧಾರ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಮೊದಲು ನಾವು ಬದಲಾಗಬೇಕು. ಓದಿನಲ್ಲಿ ಹಿಂದಿರುವ ವಿದ್ಯಾರ್ಥಿಗಳೆಂದು ಯಾರೂ ಇಲ್ಲ. ಪ್ರತಿ ವಿದ್ಯಾರ್ಥಿಯಲ್ಲೂ ಒಂದೊಂದು ಪ್ರತಿಭೆ ಅಡಗಿದೆ. ಈ ನಿಟ್ಟಿನಲ್ಲೇ ಬಸವಮಾರ್ಗ ಫೌಂಡೇಶನ್ ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆಂದೆ ಉಚಿತವಾಗಿ ವಸತಿ ನಿಲಯವನ್ನು ಸ್ಥಾಪನೆ ಮಾಡಲಾಗಿದೆ. ಈಗಾಗಲೇ ಸರ್ಕಾರಿ ಶಾಲೆಯ 25 ಮಕ್ಕಳು ಇಲ್ಲಿ ದಾಖಲೆ ಪಡೆದು ವ್ಯಾಸಂಗ ಮಾಡುತ್ತಿದ್ದಾರೆ. ಅವರಿಗೆ ಶುದ್ಧ ಆಹಾರ, ವಿಷಯ ತಜ್ಞರಿಂದ ತರಗತಿ, ಕೌಶಲ ಕಲಿಕೆಗೆ ಒತ್ತು ನೀಡಲಾಗಿದೆ. ಯಾರೇ ಪ್ರತಿಭಾನ್ವಿತ ವಿದ್ಯಾರ್ಥಿಗಳು ನಮ್ಮ ವಸತಿ ನಿಲಯದಲ್ಲಿ ದಾಖಲಾತಿ ಪಡೆಯಲು ನಮ್ಮ ಸಂಸ್ಥೆಯನ್ನು ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು.

ಟ್ರಸ್ಟ್‌ನ ಸಂಸ್ಥಾಪಕ ಸಂಗಮೇಶ್ ಹಿರೇಮಠ ಮಾತನಾಡಿದರು. ಕಾರ್ಯಕ್ರಮದಲ್ಲಿ ಆಮ್ ಕ್ಯಾಡ್ ಸಂಸ್ಥಾಪಕ ಅಧ್ಯಕ್ಷೆ ಶಾರದಾ ಚೇತನ್, ಅವನೀ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಎಂ.ಎಸ್. ಸೂರ್ಯ, ಖಜಾಂಚಿ ಸಿಗಾನ್ಸೀ ಇತರರಿದ್ದರು.

ಪಿಎಫ್‌ಐನಿಂದ ನಿಮ್ಮ ಖಾತೆಗೆ ಹಣ ಬಂದಿದೆ ಎಂದು ಬೆದರಿಸಿ ವೃದ್ಧೆಯಿಂದ 37.82 ಲಕ್ಷ ದೋಖಾ



ಮೈಸೂರು, ಜು.27– ನಿಮ್ಮ ಖಾತೆಯಲ್ಲಿ ಮನಿ ಲ್ಯಾಂಡ್ರಿಂಗ್ ನಡೆದಿದೆ. ಪಿಎಫ್‌ಐ ಸಂಘಟನೆಯಿಂದ ನಿಮ್ಮ ಖಾತೆಗೆ ಎರಡೂವರೆ ಕೋಟಿ ರೂ. ಜಮಾ ಆಗಿದೆ ಎಂದು ಬೆದರಿಸಿ, ಮೈಸೂರಿನ ವೃದ್ಧೆಯೊಬ್ಬರಿಂದ 37.82 ಲಕ್ಷ ರೂ. ಲಪಟಾಯಿಸಿರುವ ಘಟನೆ ನಡೆದಿದೆ.

ಜೆ.ಪಿ.ನಗರ ನಿವಾಸಿಯಾದ 73 ವರ್ಷದ ಮಹಿಳೆಗೆ ಜು.12ರಂದು ವಾಟ್ಸಾಪ್ ಸಂದೇಶ ಕಳುಹಿಸಿ, ಕೆಲವೇ ಕ್ಷಣಗಳಲ್ಲಿ ವಾಟ್ಸಾಪ್ ವಿಡಿಯೋ ಕರೆ ಮಾಡಿದ ವಂಚಕರು, ಮುಂಬೈನಲ್ಲಿರುವ ನ್ಯಾಷನಲ್ ಇನ್ವೆಸ್ಟಿಗೇಷನ್ ಏಜೆನ್ಸಿ ಯೂನಿಟ್‌ನಿಂದ ಮಾತನಾಡುತ್ತಿರುವುದಾಗಿ ತಿಳಿಸಿದ್ದಾರೆ. ಸಮವಸ್ತ್ರದಲ್ಲಿದ್ದ ವ್ಯಕ್ತಿ ವಿಡಿಯೋ ಕರೆಯಲ್ಲಿ ಮಾತನಾಡಿದ್ದರಿಂದ ಮಹಿಳೆ ನಂಬಿದ್ದಾರೆ.

ಕರೆ ಮಾಡಿದ ಕಾರಣ ಕೇಳಿದಾಗ ಪ್ರಕರಣವೊಂದರ ಬಗ್ಗೆ ವಿಚಾರಣೆ ನಡೆಸುತ್ತಿದ್ದು, ನಿಮ್ಮ ಆಧಾರ್ ಸಂಖ್ಯೆ, ಬ್ಯಾಂಕ್ ಸ್ಟೇಟ್‌ಮೆಂಟ್, ಡೆಬಿಟ್ ಕಾರ್ಡ್ ಫೋಟೋಗಳನ್ನು ಕಳುಹಿಸುವಂತೆ ತಿಳಿಸಿದ್ದಾರೆ. ವಂಚಕರ ಮಾತು ನಂಬಿದ ಮಹಿಳೆ, ಅವರು ಕೇಳಿದ್ದ ದಾಖಲೆಗಳ ಫೋಟೋ ಕಳುಹಿಸಿದ್ದಾರೆ. ಕೆಲಹೊತ್ತು ಪರಿಶೀಲನೆ ನಾಟಕವಾಡಿದ ವಂಚಕರು, ನಿಮ್ಮ ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಆಗಿದ್ದು, ಖಾತೆಯನ್ನು ಮನಿ ಲ್ಯಾಂಡ್ರಿಂಗ್‌ಗಾಗಿ ವ್ಯಕ್ತಿಯೊಬ್ಬರಿಗೆ ನೀಡಲಾಗಿದೆ. ಟೆರರಿಸಂ ಫಂಡ್‌ಗೆ ಹಣ ಬಳಸಿಕೊಳ್ಳಲು ನಿಮ್ಮ ಖಾತೆಗೆ ಪಿಎಫ್‌ಐನಿಂದ ಎರಡೂವರೆ ಕೋಟಿ ಹಣ ಬಂದಿದೆ ಎಂದಿದ್ದಾರೆ.

ಇದರಿಂದ ಭಯಗೊಂಡ ಮಹಿಳೆ, ಇದರ ಬಗ್ಗೆ ನನಗೇನೂ ಗೊತ್ತಿಲ್ಲ ಎಂದು ಪರಿಪರಿಯಾಗಿ ಹೇಳಿದರೂ ಕೇಳದ ವಂಚಕರು, ನಿಮ್ಮ ಮೇಲೆ ಕೇಸ್ ದಾಖಲಾಗಿದ್ದು, ಅರೆಸ್ಟ್ ವಾರೆಂಟ್ ಕೂಡ ಜಾರಿಯಾಗಿದೆ ಎಂದು ಹೇಳಿ ಮತ್ತಷ್ಟು ಹೆದರಿಸಿದ್ದಾರೆ. ಮಹಿಳೆ ಆತಂಕಗೊಂಡು ದಿಕ್ಕು ತೋಚದ ಸ್ಥಿತಿಯಲ್ಲಿರುವುದನ್ನು ಗಮನಿಸಿದ ವಂಚಕರು, ನಿಮ್ಮ ಖಾತೆಯಲ್ಲಿರುವ ಹಣವನ್ನು ನಾವು ತಿಳಿಸಿದ ಖಾತೆಗೆ ವರ್ಗಾವಣೆ ಮಾಡಿದರೆ ಪರಿಶೀಲಿಸಿದ ಬಳಿಕ ವಾಪಸ್ ಜಮೆ ಮಾಡುತ್ತೇವೆ ಎಂದಿದ್ದಾರೆ. ಮೊದಲೇ ಗಾಬರಿಯಲ್ಲಿದ್ದ ಮಹಿಳೆ, ವಂಚಕರು ತಿಳಿಸಿದಂತೆ ಜು.15, 19, 24 ಹಾಗೂ 25ರಂದು ಹಂತಹಂತವಾಗಿ ಒಟ್ಟು 37.82 ಲಕ್ಷ ಹಣವನ್ನು ವರ್ಗಾವಣೆ ಮಾಡಿ, ಮೋಸ ಹೋಗಿದ್ದಾರೆ. ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆನ್‌ಲೈನ್ ಹೂಡಿಕೆಯಿಂದ 2 ಲಕ್ಷ ಕಳೆದುಕೊಂಡ ವ್ಯಕ್ತಿ

ಮೈಸೂರು: ಆನ್‌ಲೈನ್‌ನಲ್ಲಿ ಹೂಡಿಕೆ ಮಾಡಿ ವ್ಯಕ್ತಿಯೊಬ್ಬರು 2.10 ಲಕ್ಷ ರೂ. ಕಳೆದುಕೊಂಡಿರುವ ಬಗ್ಗೆ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರದ ಬೃಂದಾವನ ಬಡಾವಣೆ ವ್ಯಕ್ತಿಯೊಬ್ಬರು ಈ ಸಂಬಂಧ ದೂರು ನೀಡಿದ್ದು, ಆನ್‌ಲೈನ್ ಹೂಡಿಕೆ ಬಗ್ಗೆ ಪರಿಶೀಲಿಸುವ ವೇಳೆ ಹೆಚ್ಚಿನ ಲಾಭಾಂಶ ನೀಡುವುದಾಗಿ ತಿಳಿಸಿದ್ದ ಕಂಪನಿಯೊಂದರ ಜಾಹೀರಾತು ಕಾಣಿಸಿದೆ. ಆ ಕಂಪನಿಗೆ ಸಂಬಂಧಿಸಿದ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದಾಗ ಹೂಡಿಕೆ ಮೇಲೆ ಶೇ.12ರಿಂದ 24ರಷ್ಟು ಲಾಭಾಂಶ ಸಿಗಲಿದೆ ಎಂಬ ಮಾಹಿತಿ ದೊರೆತಿದೆ. ಅದನ್ನು ನಂಬಿದ ವ್ಯಕ್ತಿ, ಹಂತ ಹಂತವಾಗಿ 2.10 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ. ಆದರೆ ಈವರೆಗೂ ಯಾವುದೇ ಲಾಭಾಂಶವನ್ನೂ ನೀಡಿಲ್ಲ. ಇತ್ತ ಹೂಡಿಕೆ ಹಣವನ್ನೂ ವಿತ್‌ಡ್ರಾ ಮಾಡಿಕೊಳ್ಳಲು ಸಾಧ್ಯವಾಗದಿದ್ದಾಗ ಅದು ನಕಲಿ ಕಂಪನಿ ಎಂಬುದು ಮನವರಿಕೆಯಾಗಿ ಪೊಲೀಸರಿಗೆ ದೂರು ನೀಡಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದಮ್ಮುಂಟೆ ಕಾಸ್ಕೊ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಜೂನಿಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಮಾರೀಚನ್ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ತಲೈವನ್ ತಲೈವಿ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಒಂದನೇ ಪುಟದಿಂದ

1 ಗಂಟೆ ಎಕ್ಸ್‌ಪ್ರೆಸ್ ವೇ ಸಂಚಾರ ಬಂದ್

ಬಸ್‌ಗಳು, ಗೂಡ್ಸ್, ಟೆಂಪೋಗಳು ಸೇರಿದಂತೆ ಸಾವಿರಾರು ವಾಹನ ಸಂಚರಿಸುವ ರಸ್ತೆಯಲ್ಲಿ ಫ್ಲೆಕ್ಸ್ ಕಟ್ಟಲು ಗಂಟೆಗಟ್ಟಲೇ ಬಂದ್ ಮಾಡಿ ಪ್ರಯಾಣಿಕರು ಪರದಾಡುವ ಸ್ಥಿತಿಯನ್ನು ಪೊಲೀಸರು ಮತ್ತು ಮದ್ದೂರು ಶಾಸಕ ಕೆ.ಎಂ.ಉದಯ್ ಬೆಂಬಲಿಗರು ತಂದೊಡ್ಡಿದರು. ನಿಡಘಟ್ಟದಿಂದ ಚನ್ನಪಟ್ಟಣದವರೆಗೆ ದಿಢೀರನೇ ರಸ್ತೆ ಬಂದ್ ಮಾಡಿದ ಪರಿಣಾಮ ಎರಡು ಬದಿಯ ಪ್ರಯಾಣಿಕರು ಎಕ್ಸ್‌ಪ್ರೆಸ್ ವೇ ಬಿಟ್ಟು ಸರ್ವೀಸ್ ರಸ್ತೆಗೆ ಇಳಿದರು. ಸರ್ವೀಸ್ ರಸ್ತೆಯಲ್ಲಿ ಏಕಮುಖ ಸಂಚಾರವಿಲ್ಲದ ಪರಿಣಾಮ ಎರಡು ಕಡೆಯೂ ವಾಹನ ಓಡಾಡಬಹುದಾದ ಹಿನ್ನೆಲೆಯಲ್ಲಿ ಟ್ರಾಫಿಕ್‌ನಿಂದ ಜನ ಕಂಗೆಟ್ಟರು. ಎರಡು ಕಡೆ ಕೆಲ ಕಾಲ ಟ್ರಾಫಿಕ್ ಬಂದ್ ಆಗಿತ್ತು. ಕೆಲವು ಕಡೆ ಸಂಚಾರ ವ್ಯವಸ್ಥೆ ಸುಗಮಗೊಳಿಸಲು ಪೊಲೀಸರಿದ್ದರೆ ಇನ್ನು ಕೆಲವು ಕಡೆ ಇರಲಿಲ್ಲ. ಚನ್ನಪಟ್ಟಣ ಭಾಗದಲ್ಲಿ ಕಿರಿದಾದ ಸರ್ವೀಸ್ ರಸ್ತೆ ಇರುವ ಕಾರಣ ಪ್ರಯಾಣಿಕರು ಹೈರಾಣಾದರು.

ಮಂಡ್ಯದ ಗಣಂಗೂರು ಹಾಗೂ ಕೆಂಗೇರಿಯ ಕಣಮಿಣಿಕೆ ಬಳಿ ಟೋಲ್ ಕಟ್ಟಿ ಎಕ್ಸ್‌ಪ್ರೆಸ್ ವೇನಲ್ಲಿ ಬೇಗ ತೆರಳಬೇಕೆಂದು ಬಂದಿದ್ದ ವಾಹನ ಸವಾರರನ್ನು ದಿಢೀರನೇ ಸರ್ವೀಸ್ ರಸ್ತೆಗೆ ಇಳಿಸಿದಾಗ ಜನ ಆಕ್ರೋಶ ವ್ಯಕ್ತಪಡಿಸಿದರು. ಟೋಲ್ ಹಣ ಕಟ್ಟಿ ಎಕ್ಸ್‌ಪ್ರೆಸ್ ವೇನಲ್ಲಿ ತೆರಳಲು ಬಂದಿದ್ದರೆ ನಮ್ಮನ್ನು ಏಕೆ ಸರ್ವೀಸ್ ರಸ್ತೆಗೆ ಇಳಿಸಿದ್ದಾರೆ? ಟೋಲ್‌ನಲ್ಲಿ ಹಣ ಕಟ್ಟಿಲ್ಲವೇ? ಇವರ ಪ್ರಚಾರ ಫಲಕ ಕಟ್ಟಲು ನಮ್ಮ ಸಮಯವನ್ನು ವ್ಯರ್ಥ ಮಾಡುವುದು ಹಾಗೂ ಹೈವೇಯಿಂದ ನಮ್ಮನ್ನು ಸರ್ವೀಸ್ ರಸ್ತೆಗೆ ಇಳಿಸುವುದು ಎಷ್ಟು ಸರಿ ಎಂದು ಪೊಲೀಸರನ್ನು ಪ್ರಶ್ನಿಸಿದರೆ, ಶಾಸಕ ಉದಯ್ ಬೆಂಬಲಿಗರು ಹಾಗೂ ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಸಹ ಅಸಮಾಧಾನ ಹೊರ ಹಾಕಿದರು.

ಇತ್ತ ಶಾಸಕ ಉದಯ್ ಎಕ್ಸ್‌ಪ್ರೆಸ್ ವೇನಲ್ಲಿ ಸಂಚಾರ ಬಂದ್ ಮಾಡಿಸಿ, ವಾಹನ ಸವಾರರಿಗೆ ತೊಂದರೆ ಕೊಟ್ಟು ಫ್ಲೆಕ್ಸ್ ಅಳವಡಿಸುವ ಅನಿವಾರ್ಯತೆ ಏನಿತ್ತು ಎಂಬುದು ಸಹ ಸಾರ್ವಜನಿಕ ವಲಯದಲ್ಲಿ ಅಸಮಾಧಾನಕ್ಕೆ ಕಾರಣವಾಯಿತು. ಹಾಗೊಂದು ವೇಳೆ ಪ್ರಚಾರ ಫಲಕ ಅಳವಡಿಸಬೇಕೆಂದಿದ್ದರೆ ಮದ್ದೂರು ಪಟ್ಟಣದ ಒಳಗೆ ಅಳವಡಿಸಬಹುದಿತ್ತು. ಅಥವಾ ಸಿಎಂ ಕಾರ್ಯಕ್ರಮ ಇರುವ ಜಾಗಕ್ಕಿಂತ ಸ್ವಲ್ಪ ಮುಂದೆ ಹಾಕಬಹುದಿತ್ತು ಅದನ್ನು ಬಿಟ್ಟು ಸಾರ್ವಜನಿಕರಿಗೆ ತೊಂದರೆ ಕೊಟ್ಟು ಎಕ್ಸ್‌ಪ್ರೆಸ್ ವೇನಲ್ಲಿ ಹಾಕುವ ಅವಶ್ಯಕತೆ ಏನಿತ್ತು ಎಂಬುದು ಜನರ ಪ್ರಶ್ನೆಯಾಗಿದೆ.

ಹೆದ್ದಾರಿ ಪ್ರಾಧಿಕಾರದ ನಿಯಮದ ಪ್ರಕಾರ ಸಂಚಾರ ಬಂದ್ ಮಾಡಿ, ಫಲಕ ಹಾಕಲು ಅವಕಾಶವಿಲ್ಲ, ಆದರೆ ಹೆದ್ದಾರಿ ಬಂದ್ ಮಾಡಲಾಗಿತ್ತು. ಬೃಹತ್ ಸ್ವಾಗತ ಕಮಾನು ಅಳವಡಿಕೆ ಮಾಡಲಾಗಿದ್ದು, ಮಳೆ, ಗಾಳಿ ಸಮಯದಲ್ಲಿ ಆಯತಪ್ಪಿ ಫಲಕ ಬಿದ್ದರೆ ಆಗುವ ಅನಾಹುತಕ್ಕೆ ಹೊಣೆ ಯಾರು? ಎಂಬುದು ಸಹ ಪ್ರಶ್ನೆಯಾಗಿದೆ.

ಇಂದು ರಾಜ್ಯಾದ್ಯಂತ ಬಿಜೆಪಿ ಪ್ರತಿಭಟನೆ

ಹಚ್ಚಿ ಸರ್ಕಾರ ಕ್ರಮ ತಗೋಬೇಕು. ರಸಗೊಬ್ಬರ ಕಳ್ಳದಂಧೆಗೆ ಬ್ರೋಕರ್‌ಗಳು ಕಾರಣ. ಬ್ರೋಕರ್‌ಗಳಿಗೆ ಸಹಕಾರ ಕೊಡುವ ಕೆಲಸ ಸರ್ಕಾರದಲ್ಲಿ ಆಗ್ತಿದೆ ಎಂದು ಇದೇ ವೇಳೆ ವಿಜಯೇಂದ್ರ ಆರೋಪಿಸಿದರು. ಅನ್ನ ನೀಡುವ ರೈತರಿಗೆ ತೊಂದರೆ ಕೊಡುವ ಮತ್ತು ವ್ಯವಸ್ಥೆಯೊಳಗೆ ಶೋಷಣೆ ಮಾಡುವ ಪ್ರಯತ್ನಗಳು ಹಿಂದಿನಿಂದಲೂ ನಡೆಯುತ್ತಲೇ ಇವೆ. ಈ ಬಾರಿ ಮುಂಗಾರು ಆಶಾದಾಯಕವಾಗಿರುವ ಹಿನ್ನೆಲೆಯಲ್ಲಿ ಉತ್ತಮ ಫಸಲಿನ ನಿರೀಕ್ಷೆಯಲ್ಲಿರುವ ಉತ್ಸಾಹಿ ರೈತ ಸಮುದಾಯಕ್ಕೆ ರಸಗೊಬ್ಬರ ಮತ್ತು ಬೀಜಗಳನ್ನು ಪೂರೈಸುವ ಕಂಪನಿಗಳು ನಕಲಿ ಬೀಜಗಳನ್ನು ನೀಡಿ ಕೃಷಿ ಚಟುವಟಿಕೆಗಳನ್ನು ಹಾಳು ಮಾಡುವ ಹೇಯ ಕೃತ್ಯದಲ್ಲಿ ತೊಡಗಿವೆ ಎಂದು ಆರೋಪಿಸಿದರು. ನಕಲಿ ಬೀಜ ಪೂರೈಸುವ ಕಂಪನಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಕ್ರೀಡಾಕೂಟ ಸಂಪನ್ನ



ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರ್ತಿ ಕಲಿಯಂಡ ರೇಷ್ಮಾ ಚೆಂಗಪ್ಪ, ಹಿರಿಯ ಕ್ರೀಡಾ ವರದಿಗಾರ ಗಿರೀಶ ದೊಡ್ಡಮನಿ ಹಾಗೂ 19 ವರ್ಷದ ಒಳಗಿನವರ ವಲಯ ಮಟ್ಟದ ಕ್ರಿಕೆಟ್ ಆಟಗಾರ ಎಚ್.ಎನ್. ರೋಹನ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜು.27(ಎಂಕೆ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವಾರ್ಷಿಕ ಕ್ರೀಡಾಕೂಟ ಭಾನುವಾರ ಸಂಪನ್ನಗೊಂಡಿತು.

ಮೈಸೂರು ವಿವಿ ಓವಲ್ ಕ್ರೀಡಾಂಗಣದಲ್ಲಿ ಎರಡನೇ ದಿನದ ಪುರುಷರು ಹಾಗೂ ಮಹಿಳೆಯರಿಗಾಗಿ ವಿವಿಧ ಓಟ, ಶಾಟ್‌ಪುಟ್ ಸ್ಪರ್ಧೆ ಜೊತೆಗೆ ರಂಗೋಲಿ, ಮ್ಯೂಜಿಕಲ್ ಚೇರ್, ನಿಂಬೆಹಣ್ಣು ಸ್ಪರ್ಧೆಗಳು ನಡೆದವು.

ತಿ.ನರಸೀಪುರ ಪಿಯು ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಹಾಗೂ ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರ್ತಿ ಕಲಿಯಂಡ ರೇಷ್ಮಾ ಚೆಂಗಪ್ಪ, ಕ್ರೀಡಾ ವಿಭಾಗದ ಹಿರಿಯ ವರದಿಗಾರ ಗಿರೀಶ ದೊಡ್ಡಮನಿ ಹಾಗೂ 19 ವರ್ಷದ ಒಳಗಿನವರ ವಲಯ ಮಟ್ಟದ ಕ್ರಿಕೆಟ್ ಆಟಗಾರ ಎಚ್.ಎನ್.ರೋಹನ್ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ವಿಜೇತ ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಿ ಮಾತನಾಡಿ, ಪತ್ರಕರ್ತರು ತಮ್ಮ ವೃತ್ತಿ ಜೀವನಕ್ಕಾಗಿ ವೈಯಕ್ತಿಕ ಜೀವನವನ್ನು ಬಲಿ ಕೊಡಬೇಕಾಗುತ್ತದೆ. ಅವರು ಮತ್ತು ಕುಟುಂಬದವರಿಗಾಗಿ ಕ್ರೀಡಾಕೂಟ ಆಯೋಜನೆ ಒಳ್ಳೆಯ ಕೆಲಸ. ಪತ್ರಕರ್ತರ ಜೊತೆ ನಮ್ಮ ಸಂಬಂಧ ಚೆನ್ನಾಗಿ ಇರದಿದ್ದರೆ ನಾವು ಅವಕೃಪೆಗೆ ಒಳಗಾಗುವ ಸಾಧ್ಯತೆಯೂ ಹೆಚ್ಚು ಎಂದು ಹಾಸ್ಯ ಚಟಾಕಿ ಹಾರಿಸಿದರು.

ಈ ವೇಳೆ ಶಾಸಕರಾದ ಅನಿಲ್ ಚಿಕ್ಕಮಾದು, ಕೆ.ಹರೀಶ್‌ಗೌಡ, ಡಿ.ರವಿಶಂಕರ್ ಮಾತನಾಡಿದರು. ವಿಜಯನಗರ ಉಪ ವಿಭಾಗದ ಎಸಿಪಿ ರವಿಪ್ರಸಾದ್, ಉದ್ಯಮಿ ಎ.ಪಿ.ನಾಗೇಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ಪಾಲಿಕೆ ಮಾಜಿ ಸದಸ್ಯ ಗೋಪಿ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಕಾರ್ಯದರ್ಶಿ ಧರ್ಮಾಪುರ ನಾರಾಯಣ ಇದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳನ್ನು ಗೌಣ ಮಾಡಿಲ್ಲ

ಎಂಎಲ್‌ಸಿ ಡಾ. ಯತೀಂದ್ರ ಸ್ಪಷ್ಟನೆ

ಮೈಸೂರು, ಜು.27(ಎಂಕೆ)– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಬಗ್ಗೆ ಅಪಾರ ಗೌರವವಿದೆ. ಅವರ ಆಡಳಿತ ಎಲ್ಲರಿಗೂ ಸ್ಫೂರ್ತಿ. ಸ್ವಾತಂತ್ರ್ಯ ನಂತರ ಯಾವುದೇ ಮುಖ್ಯಮಂತ್ರಿಗಳು ಮೈಸೂರು ನಗರಕ್ಕೆ ನೀಡದಷ್ಟು ಕೊಡುಗೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ್ದಾರೆ ಎಂದು ಹೇಳಿದ್ದೆನಷ್ಟೇ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ನಗರದ ಓವೆಲ್ ಮೈದಾನದಲ್ಲಿ ನಡೆದ ಮೈಸೂರು ಜಿಲ್ಲಾ ಪತ್ರಕರ್ತರ ಕ್ರೀಡಾಕೂಟ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳನ್ನು ಗೌಣ ಮಾಡಬೇಕು ಎಂದು ಹೇಳಿಲ್ಲ. ಸ್ವಾತಂತ್ರ್ಯ ನಂತರ ಮೈಸೂರು ನಗರಕ್ಕೆ ಯಾವುದೇ ಮುಖ್ಯಮಂತ್ರಿ ಕೊಡದಷ್ಟು ಅನುದಾನವನ್ನು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಟ್ಟಿದ್ದಾರೆ ಎಂದು ಹೇಳಿದ್ದೇನೆ ಅಷ್ಟೇ ಎಂದರು.

ನಾಲ್ವಡಿ ಅವರ ಸ್ಮರಣೆಯ ಕಾರ್ಯಕ್ರಮಗಳಲ್ಲಿ ಗೌರವದಿಂದ ಮಾತನಾಡಿದ್ದೇವೆ. ಆದರೆ, ಮುಖ್ಯಮಂತ್ರಿಗಳ ಕೊಡುಗೆ ಬಗ್ಗೆ ಹೇಳಿದ್ದನ್ನೇ ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ. ವಿರೋಧ ಮಾಡಬೇಕು ಎಂತಲೇ ಮಾಡುತ್ತಿದ್ದಾರೆ. ಆದರೆ, ಈ ವಿಚಾರದಲ್ಲಿ ರಾಜಕೀಯ ಮಾಡಲು ಏನೂ ಇಲ್ಲ ಎಂದರು.

ಮಹಿಳಾ ಮೋರ್ಚಾ ನಾಯಕಿ ಪತಿ ನೇಣಿಗೆ ಶರಣು

ಧಾರವಾಡ: ಇಲ್ಲಿನ ತಾಲೂಕು ಬಿಜೆಪಿ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶಶಿಕಲಾ ಮಸೂತಿ ಅವರ ಪತಿ ಈಶ್ವರ್ ಮಸೂತಿ(50)ಯವರು ನೇಣಿಗೆ ಶರಣಾಗಿದ್ದಾರೆ. ಶನಿವಾರ ರಾತ್ರಿ ಮನೆಯಲ್ಲಿ ಯಾರೂ ಇಲ್ಲದ ವೇಳೆ ಇವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಆತ್ಮಹತ್ಯೆಗೆ ಆರೋಗ್ಯ ಸಮಸ್ಯೆಯೇ ಕಾರಣ ಎಂದು ಶಂಕಿಸಲಾಗಿದೆ. ಈಶ್ವರ ಮಸೂತಿ ಅವರು ಧಾರವಾಡ ಗ್ರಾಮೀಣ ಕ್ಷೇತ್ರದ ಮಾಜಿ ಶಾಸಕಿ ಸೀಮಾ ಮಸೂತಿ ಅವರ ಸಂಬಂಧಿಯಾಗಿದ್ದಾರೆ.

ರಾಕೇಶ್ ಸಿದ್ದರಾಮಯ್ಯ ಪುಣ್ಯಸ್ಮರಣೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ದಿವಂಗತ ರಾಕೇಶ್ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಹಾಗೂ ಇವರ ಪುತ್ರ ಚಲನಚಿತ್ರ ನಿರ್ಮಾಪಕ ಸಂದೇಶ್ ಅವರು ಮುಖ್ಯಮಂತ್ರಿಗಳನ್ನು ಭೇಟಿಯಾದರು. ದಿವಂಗತ ರಾಕೇಶ್ ಪುತ್ರ ಧವನ್ ರಾಕೇಶ್, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಇತರರು ಚಿತ್ರದಲ್ಲಿದ್ದಾರೆ.

‘ಅದಮ್ಯ ಚೇತನ ಫೌಂಡೇಷನ್’ನಿಂದ ಅಯೋಧ್ಯೆಯಲ್ಲಿ ಗ್ರೀನ್ ಸಂಡೆ



ಕೇಂದ್ರದ ಮಾಜಿ ಸಚಿವರಾಗಿದ್ದ ದಿವಂಗತ ಅನಂತ್‌ಕುಮಾರ್ ಅವರ ಕನಸಿನ ಕೂಸಾದ ‘ಅದಮ್ಯ ಚೇತನ ಫೌಂಡೇಷನ್’ ವತಿಯಿಂದ ಕೈಗೊಂಡಿರುವ ಗಿಡ ನೆಡುವ ಯೋಜನೆ ‘ಗ್ರೀನ್ ಸಂಡೇ’ 500ನೇ ಕಾರ್ಯಕ್ರಮವಾಗಿ ಅಯೋಧ್ಯೆಯಲ್ಲಿ ಸಸಿಗಳನ್ನು ನೆಡಲಾಯಿತು. ಫೌಂಡೇಷನ್ ಮುಖ್ಯಸ್ಥರಾದ ಶ್ರೀಮತಿ ತೇಜಸ್ವಿನಿ ಅನಂತ್‌ಕುಮಾರ್ ಹಾಗೂ ತಂಡದ ಸದಸ್ಯರು ಭಾಗವಹಿಸಿದ್ದರು.

ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ವಿಶೇಷ ಉಪನ್ಯಾಸ ಮಾಲಿಕೆ



ಮೈಸೂರು, ಜು.27– ರಾಮಕೃಷ್ಣ ವಿದ್ಯಾಕೇಂದ್ರ ಪದವಿ ಪೂರ್ವ ಕಾಲೇಜಿನಲ್ಲಿ ಹತ್ತನೆ ವರುಷ ಬತ್ತದ ಹರುಷ ವಿಶೇಷ ಉಪನ್ಯಾಸ ಮಾಲಿಕೆ – 02 ಅನ್ನು ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ಐಕ್ಯೂಎಸಿ ವಿಭಾಗದ ಸಂಯೋಜಕ ಡಾ. ಜೆ. ಲೋಹಿತ್ ಆಗಮಿಸಿದ್ದರು. ಯೋಗಃ ಕರ್ಮಸು ಕೌಶಲಂ ಕರ್ಮದಲ್ಲಿನ ನೈಪುಣ್ಯವೇ ಯೋಗ ಎಂದು ಭಗವದ್ಗೀತೆಯ ಕರ್ಮ ಯೋಗದ ಶ್ಲೋಕವನ್ನು ಉಲ್ಲೇಖಿಸುತ್ತಾ ಭವಿಷ್ಯದ ಉದ್ಯೋಗ ಪ್ರಪಂಚ ಬಹಳ ಸವಾಲಾಗಿದೆ ಎಂದು ಹೇಳಿದರು.

ಕಲಿಕೆಯಲ್ಲಿ ಖುಷಿ ಇದ್ದಾಗ ಮಾತ್ರ ನೀವು ಕೌಶಲವನ್ನು ಹೊಂದಲು ಸಾಧ್ಯವಾಗುತ್ತದೆ. ನಿಮ್ಮ ಪಾಠಗಳನ್ನು ಕೇವಲ ಪರೀಕ್ಷೆಯಲ್ಲಿ ಅಂಕಗಳಿಸುವುದಕ್ಕೋಸ್ಕರ ಓದಬೇಡಿ. ಪಾಠಗಳಲ್ಲಿನ ವಿಷಯಗಳನ್ನು ಸಂತೋಷದಿಂದ ಕಲಿಯಿರಿ. ಜ್ಞಾನ ಸಂಪಾದನೆಯೇ ವಿದ್ಯಾರ್ಥಿಯ ಧ್ಯೇಯವಾಗಬೇಕು. ಕೇವಲ ಉದ್ಯೋಗಾವಕಾಶಕ್ಕಾಗಿ ವಿದ್ಯೆ ಮೀಸಲಾಗಬಾರದು ಎಂದು ಹೇಳಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯಾರು ಏನನ್ನು ಬೇಕಾದರೂ ಗಳಿಸಬಹುದು. ಜ್ಞಾನವನ್ನು ಆಸಕ್ತಿಯಿಂದ ಪಡೆದಾಗ ವ್ಯಕ್ತಿ ಕೌಶಲ ಪೂರ್ಣನಾಗಿ ಶ್ರೇಷ್ಠತೆಯನ್ನು ಹೊಂದುತ್ತಾನೆ ಎಂದರು. ಹೂವು ಅರಳುವ ಕೆಲಸ ಮಾಡುತ್ತದೆ. ದುಂಬಿ ತಾನಾಗಿಯೇ ಹೂವನ್ನು ಅರಸಿ ಹೋಗುತ್ತದೆಯೇ ವಿನಃ ಹೂವು ದುಂಬಿಯನ್ನು ತನ್ನೆಡೆಗೆ ಬಾ ಎಂದು ಕರೆಯುವುದಿಲ್ಲ ಎಂದು ಸ್ವಾಮಿ ವಿವೇಕಾನಂದರು ಹೇಳಿರುವ ಹಾಗೆ ವಿದ್ಯಾರ್ಥಿಗಳು ಹೂವಿನಂತೆ ಅರಳಿದಾಗ ದುಂಬಿಯಂತೆ ಅವಕಾಶಗಳು ಅರಸಿ ಬರುತ್ತವೆ ಎಂದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಕಾರ್ಯನಿವಾಹಕ ಅಧಿಕಾರಿ ಪ್ರೊ. ಜಿ. ಚಂದ್ರಶೇಖರ್, ಪ್ರಾಂಶುಪಾಲ ಸಿ. ಶಿವಪ್ಪ ಹಾಗೂ ಬೋಧಕ–ಬೋಧಕೇತರರು ಉಪಸ್ಥಿತರಿದ್ದರು

ದಸರಾ ವಿದ್ಯುತ್ ದೀಪಾಲಂಕಾರಕ್ಕೆ ತಯಾರಿ

ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ದೀಪಾಲಂಕಾರ ಟ್ರಯಲ್

ಮೈಸೂರು, ಜು.27(ವಿವಿಹೆಚ್)– ನಾಡಹಬ್ಬ ಮೈಸೂರು ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ನವರಾತ್ರಿಯ ಆಕರ್ಷಣೆಗಳಲ್ಲಿ ಒಂದಾದ ದಸರಾ ದೀಪಾಲಂಕಾರದ ಟ್ರಯಲ್ ಶುಕ್ರವಾರ ಸಂಜೆ ನಡೆಯಿತು.

ನಗರದ ಹಾರ್ಡಿಂಜ್ ಸರ್ಕಲ್‌ನಿಂದ ಅರಮನೆ ಕಡೆಗೆ ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ಇಂದು ಸಂಜೆ ದೀಪಾಲಂಕಾರವನ್ನು ಪ್ರಾಯೋಗಿಕವಾಗಿ ಮಾಡಿ ಪರಿಶೀಲನೆ ನಡೆಸಲಾಯಿತು.

ಆಲ್ಬರ್ಟ್ ವಿಕ್ಟರ್ ರಸ್ತೆ, ಸಯ್ಯಾಜಿರಾವ್ ರಸ್ತೆ ಸೇರಿದಂತೆ ಬನ್ನಿಮಂಟಪದವರೆಗೂ ಎರಡು ಮೂರು ಹಂತದಲ್ಲಿ ದೀಪಾಲಂಕಾರ ತಯಾರಿ ನಡೆಸಿ, ಯಾವುದೇ ಲೋಪ ದೋಷ ಇಲ್ಲದಂತೆ ಪರೀಕ್ಷಿಸಲಾಗುವುದು. ಕಳೆದ ಬಾರಿಗಿಂತ ಈ ಸಲ ಅತ್ಯಾಕರ್ಷಕವಾಗಿ ದೀಪಾಲಂಕಾರ ಮಾಡುವ ಉದ್ದೇಶವಿದೆ ಎಂದು ಸೆಸ್ಕ್ ಸೂಪರಿಂಟೆಂಡೆಂಟ್ ಇಂಜಿನಿಯರ್ ಸುನೀಲ್ ಮಾಹಿತಿ ನೀಡಿದರು.

ಈ ಬಾರಿಯ ದಸರಾ ಮಹೋತ್ಸವ ಸೆ.22ರಿಂದ ಅ.4ವರೆಗೆ ನಡೆಯಲಿದ್ದು, ದೀಪಾಲಂಕಾರವನ್ನು ಸೆಪ್ಟೆಂಬರ್ ಮೊದಲ ವಾರದಲ್ಲೇ ಆರಂಭಿಸಲಾಗುವುದು. ಕಳೆದ ಬಾರಿಗಿಂತ ಈ ಸಲ ಇನ್ನು ಅತ್ಯಾಕರ್ಷಕ ಹಾಗೂ ವಿಭಿನ್ನವಾಗಿ ದೀಪಾಲಂಕಾರ ಮಾಡುವ ಚಿಂತನೆಯಿದೆ ಎಂದು ಅವರು ತಿಳಿಸಿದರು.

ಕಳೆದ ಬಾರಿ ರಾಜ್ಯ, ರಾಷ್ಟ್ರಾದ್ಯಂತ ಹೆಚ್ಚಿನ ಮೆಚ್ಚುಗೆ ಪಡೆದಿದ್ದ ದಸರಾ ದೀಪಾಲಂಕಾರ ಬರೋಬ್ಬರಿ 140 ಕಿ.ಮೀವರೆಗೆ ಬೆಳಗಿತ್ತು. ಸತತ 21 ದಿನಗಳ ಕಾಲ ವಿಶೇಷ ವಿದ್ಯುತ್ ದೀಪಾಲಂಕಾರಗಳಿಂದ ಮೈಸೂರು ಜಗಮಗಿಸಿತ್ತು.